# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 24 ಶುಕ್ರವಾರ 2026


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 9 | ಪುಟಗಳು: 12+IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



# ಕೃಷ್ಣರಾಜನಗರ ವಿಧಾನಸಭಾ ಕ್ಷೇತ್ರದವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವರಾದ

# ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿ ರವರಿಗೆ

# ಸುಸ್ವಾಗತ









ಮಂಡ್ಯ ಲೋಕಸಭಾ ಸದಸ್ಯರು ಹಾಗೂ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವರಾದ ಸನ್ಮಾನ್ಯ ಶ್ರೀ ಹೆಚ್.ಡಿ. ಕುಮಾರಸ್ವಾಮಿ ರವರ ಅವಧಿಯಲ್ಲಿ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಕೃಷ್ಣರಾಜನಗರ ಮತ್ತು ಸಾಲಿಗ್ರಾಮ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಮಂಜೂರಾದ ಕಾಮಗಾರಿಗಳು ಮತ್ತು ಬಿಡುಗಡೆ ಮಾಡಿಸಿದ ಅನುದಾನದ ವಿವರ

### ಆಯುಷ್ಮಾನ್ ಆರೋಗ್ಯ ಮಂದಿರ ಕಟ್ಟಡ ನಿರ್ಮಾಣ ಕಾಮಗಾರಿಗಳು (ಒಟ್ಟು ಮೊತ್ತ ರೂ. 325 ಲಕ್ಷಗಳು)

| ಕ್ರ.ಸಂ. | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | **ಮಾವತ್ತೂರು** ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ | 65.00 |
| 2 | **ಬ್ಯಾಡರಹಳ್ಳಿ** ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ | 65.00 |
| 3 | **ಕಾಳೇನಹಳ್ಳಿ** ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ | 65.00 |
| 4 | **ದೆಗ್ಗನಹಳ್ಳಿ** ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ | 65.00 |
| 5 | **ಮಿರ್ಲೆ** ಗ್ರಾಮದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ | 65.00 |
| | ಒಟ್ಟು | 325.00 |

### ಮಾನ್ಯ ಸಂಸದರ (ಎಂಪಿ ಲ್ಯಾಡ್ಸ್) ಯೋಜನೆಯಡಿ ಮಂಜೂರಾಗಿರುವ ಕಾಮಗಾರಿಗಳು (ಒಟ್ಟು ಮೊತ್ತ ರೂ. 115 ಲಕ್ಷ)

| ಕ್ರ.ಸಂ. | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ಹೆಬ್ಬಾಳು ಹೋಬಳಿ, **ಬ್ಯಾಡರಹಳ್ಳಿ** ಗ್ರಾಮದಲ್ಲಿ ಲಕ್ಕಮ್ಮ ಲಕ್ಷ್ಮಿದೇವಿ ಸಮುದಾಯ ಭವನ ನಿರ್ಮಾಣ (ಮುಂದುವರಿದ ಕಾಮಗಾರಿ) | 5.00 |
| 2 | ಸಾಲಿಗ್ರಾಮ ತಾಲ್ಲೂಕು, **ಹರದನಹಳ್ಳಿ** ಗ್ರಾಮದಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ (ಮುಂದುವರಿದ ಕಾಮಗಾರಿ) | 5.00 |
| 3 | ಹೊಸಅಗ್ರಹಾರ ಹೋಬಳಿ, **ಗಳಿಗೆಕೆರೆ** ಗ್ರಾಮದಲ್ಲಿ ಶ್ರೀ ಹುಚ್ಚಮ್ಮ ಕೋಣಮ್ಮ ಭವನ ನಿರ್ಮಾಣ | 5.00 |
| 4 | ಹೆಬ್ಬಾಳು ಹೋಬಳಿ, **ಹೊಸಕೊಪ್ಪಲು** ಗ್ರಾಮದಲ್ಲಿ ಶ್ರೀ ಸಿದ್ದಪ್ಪಾಜಿ ಸಮುದಾಯ ಭವನ (ಮುಂದುವರಿದ ಕಾಮಗಾರಿ) | 5.00 |
| 5 | ಹೆಬ್ಬಾಳು ಹೋಬಳಿ, **ಮಾರಗೌಡನಹಳ್ಳಿ** ಗ್ರಾಮದಲ್ಲಿ ಶ್ರೀ ಮಂಚಮ್ಮ ಸಮುದಾಯ ಭವನ (ಮುಂದುವರಿದ ಕಾಮಗಾರಿ) | 5.00 |
| 6 | ಸಾಲಿಗ್ರಾಮ ತಾಲ್ಲೂಕು, **ಹರದನಹಳ್ಳಿ** ಗ್ರಾಮದಲ್ಲಿ ರಾಜೀವ್ ಗಾಂಧಿ ಸೇವಾಕೇಂದ್ರದ ಕಟ್ಟಡ ನಿರ್ಮಾಣ (ಮುಂದುವರಿದ ಕಾಮಗಾರಿ) | 5.00 |
| 7 | ಸಾಲಿಗ್ರಾಮ ತಾಲ್ಲೂಕು, **ಸಾಲಿಗ್ರಾಮ ಪಟ್ಟಣದ** ಸ್ಮಶಾನ ಅಭಿವೃದ್ಧಿ ಕಾಮಗಾರಿ | 5.00 |
| 8 | ಹೊಸಅಗ್ರಹಾರ ಹೋಬಳಿ, **ದೊಡ್ಡವಡ್ಡರಗುಡಿ** ಗ್ರಾಮದ ಸಮುದಾಯ ಭವನದ ಮುಂದುವರೆದ ಕಾಮಗಾರಿ | 5.00 |
| 9 | ಕಸಬಾ ಹೋಬಳಿ, **ಕಗ್ಗೆರೆ** ಗ್ರಾಮದ ಶ್ರೀ ವಾಲ್ಮೀಕಿ ಭವನದ ನಿರ್ಮಾಣ (ಮುಂದುವರಿದ ಕಾಮಗಾರಿ) (ಪ.ಪಂ) | 5.00 |
| 10 | ಹೊಸಅಗ್ರಹಾರ ಹೋಬಳಿ, **ಅರ್ಜುನಹಳ್ಳಿ** ಗ್ರಾಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ (ಮುಂದುವರಿದ ಕಾಮಗಾರಿ)(ಪ.ಜಾ) | 5.00 |
| 11 | ಕೆ.ಆರ್.ನಗರ ಪಟ್ಟಣದ **7ನೇ ವಾರ್ಡ್, ಆಂಜನೇಯ ಬ್ಲಾಕ್, ಸಿ.ಎಂ. ರಸ್ತೆಯಲ್ಲಿ** ಕರ್ನಾಟಕ ತಮಿಳರ ಸಮುದಾಯ ಭವನ ನಿರ್ಮಾಣ | 5.00 |
| 12 | ಸಾಲಿಗ್ರಾಮ ತಾಲ್ಲೂಕು, **ಮಲುಗನಹಳ್ಳಿ** ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ | 5.00 |
| 13 | **ಕೆ.ಆರ್.ನಗರ ಪಟ್ಟಣದಲ್ಲಿರುವ** ಶ್ರೀ ಹೆಚ್.ಡಿ. ದೇವೇಗೌಡರ ಸಮುದಾಯ ಭವನದ ಕಾಂಪೌಂಡ್ ನಿರ್ಮಾಣ (ಮುಂದುವರಿದ ಕಾಮಗಾರಿ) | 5.00 |
| 14 | ಚುಂಚನಕಟ್ಟೆ ಹೋಬಳಿ, **ನಾಡಪ್ಪನಹಳ್ಳಿ** ಗ್ರಾಮದ ಕುಂಬಾರ ಸಮುದಾಯ ಭವನ ನಿರ್ಮಾಣ | 5.00 |
| 15 | ಸಾಲಿಗ್ರಾಮ ತಾಲೂಕು, ಸಾಲಿಗ್ರಾಮ ಹೋಬಳಿ, **ಅಂಕನಹಳ್ಳಿ** ಗ್ರಾಮದಲ್ಲಿ ಶ್ರೀ ಮಾಳಮ್ಮ ಸಮುದಾಯ ಭವನ ನಿರ್ಮಾಣ (ಮುಂದುವರಿದ ಕಾಮಗಾರಿ) | 5.00 |
| 16 | ಚುಂಚನಕಟ್ಟೆ ಹೋಬಳಿ, **ಬಂಡಹಳ್ಳಿ** ಗ್ರಾಮದಲ್ಲಿ ಶ್ರೀ ಮೈಲಾರಲಿಂಗೇಶ್ವರ ಗಂಗಮಾಳಮ್ಮ ಹಾಗೂ ಶ್ರೀ ಎಲ್ಲಮ್ಮತಾಯಿ ಸಮುದಾಯ ಭವನ ನಿಮಾಣ | 5.00 |
| 17 | ಕಸಬಾ ಹೋಬಳಿ, **ಮೂಲೆಪೆಟ್ಲು** ಗ್ರಾಮದಲ್ಲಿ ಲಕ್ಷ್ಮಿದೇವಿ ಸಮುದಾಯ ಭವನ ನಿರ್ಮಾಣ (ಪ.ಜಾ.) | 5.00 |
| 18 | ಹೆಬ್ಬಾಳು ಹೋಬಳಿ, **ಹೆಬ್ಬಾಳು** ಗ್ರಾಮದಲ್ಲಿ ಕುರ್ಜು ನಿರ್ಮಾಣ | 5.00 |
| 19 | ಹೊಸಅಗ್ರಹಾರ ಹೋಬಳಿ, ಗಳಿಗೆಕೆರೆ ಮಡಿವಾಳ ಸಮುದಾಯ ಭವನ ನಿರ್ಮಾಣ | 5.00 |
| 20 | ಕಸಬಾ ಹೋಬಳಿ, **ಹೊಸಹಳ್ಳಿ** ಗ್ರಾಮದಲ್ಲಿ ಶ್ರೀ ಆಂಜನೇಯ ದೇವಸ್ಥಾನ ಅಭಿವೃದ್ಧಿ | 5.00 |
| 21 | ಹೆಬ್ಬಾಳು ಹೋಬಳಿ, **ಚಂದಗಾಲು** ಗ್ರಾಮದಲ್ಲಿ ವೀರಶೈವ ಲಿಂಗಾಯತ ಸಮುದಾಯ ಭವನ ನಿರ್ಮಾಣ (ಮುಂದುವರಿದ ಕಾಮಗಾರಿ) | 5.00 |
| 22 | **ಕೆ.ಆರ್.ನಗರ ಟೌನ್ ಅರ್ಕನಾಥ ರಸ್ತೆ,** ಆಂಜನೇಯ ಬ್ಲಾಕ್‌ನಲ್ಲಿ ತಾಲ್ಲೂಕು ಗಾಣಿಗರ ಸಮುದಾಯ ಭವನ ನಿರ್ಮಾಣ (ಮುಂದುವರಿದ ಕಾಮಗಾರಿ) | 5.00 |
| 23 | **ಕೆ.ಆರ್.ನಗರ ಟೌನ್‌ನಲ್ಲಿ** ಶ್ರೀ ಮಲೆ ಮಹದೇಶ್ವರ ಉತ್ಸವ ಸಮಿತಿ ಭವನ ನಿರ್ಮಾಣ | 5.00 |
| | ಒಟ್ಟು | 115.00 |

### ಕೇಂದ್ರ ಸರ್ಕಾರದಿಂದ ಮಂಜೂರಾಗಿರುವ ಇತರೆ ಕಾಮಗಾರಿಗಳು


| ಕ್ರ.ಸಂ. | ಕಾಮಗಾರಿಗಳ ವಿವರ | ಅಂದಾಜು ಮೊತ್ತ |
|---|---|---|
| 1 | ಕೆ.ಆರ್. ನಗರ ಪಟ್ಟಣದಲ್ಲಿ ಅಮೃತ್ ಯೋಜನೆಯಡಿ ಕುಡಿಯುವ ನೀರು ಒದಗಿಸುವ ಕಾಮಗಾರಿ | 30.30 ಕೋಟಿ |
| 2 | ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ವತಿಯಿಂದ ಕೆ.ಆರ್.ನಗರ ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿ | 20.00 ಕೋಟಿ |
| 3 | ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ರಾಷ್ಟ್ರೀಯ ಹೆದ್ದಾರಿ -86 ರ (ರಾಮನಾಥಪುರ ಯಿಂದ ತೆರಕಣಾಂಬಿ) ಹೊಳೆನರಸಿಪುರ-ಸಾಲಿಗ್ರಾಮ-ಕೆ.ಆರ್.ನಗರ ರಸ್ತೆ ಅಭಿವೃದ್ಧಿ (ಆಯ್ದ ಭಾಗಗಳಲ್ಲಿ)<br>1) ಚೀರ್ನಹಳ್ಳಿ ಯಿಂದ ಕೆ.ಆರ್.ನಗರ ರಸ್ತೆ ಸ. 43.00 ರಿಂದ 45.600 ಕಿ.ಮೀ.<br>2) ಚೀರ್ನಹಳ್ಳಿ ಗ್ರಾಮದ ಪರಿಮಿತಿಯಲ್ಲಿ ರಸ್ತೆ ಸ. 43.00 ರಿಂದ 42.330 ಕಿ.ಮೀ.<br>3) ಸಿದ್ದನಕೊಪ್ಪಲು ಗ್ರಾಮದ ಪರಿಮಿತಿಯಲ್ಲಿ ರಸ್ತೆ ಸ. 38.845 ರಿಂದ 37.972 ಕಿ.ಮೀ.<br>4) ಹೆಬ್ಬಾಳ ಗ್ರಾಮ ತಲುಪುವ ರಸ್ತೆ ಸ. 39.200 ರಿಂದ 39.785 ಕಿ.ಮೀ. ಮತ್ತು ಸ. 35.996 ರಿಂದ 37.016 ಕಿ.ಮೀ.<br>5) ಚುಂಚನಕಟ್ಟೆ ಗ್ರಾಮ ತಲುಪುವ ರಸ್ತೆ ಸ. 31.00 ರಿಂದ 31.800 ಕಿ.ಮೀ. | 6.00 ಕೋಟಿ |

**ಇತರೆ ಯೋಜನೆಗಳು**

1. ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ 40 ಜನ ವಿಕಲ ಚೇತನರಿಗೆ 3 ಚಕ್ರದ ಸ್ಕೂಟರ್ ವಿತರಣೆ ಮಾಡಲಾಗಿದೆ.
2. ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಸುಮಾರು 126 ಜನ ವಿಕಲ ಚೇತನರಿಗೆ ಯೋಜನೆಯಡಿ ವೀಲ್ ಚೇರ್, ಸಿಪಿ ವೀಲ್ ಚೇರ್ ಮೂರು ಚಕ್ರದ ಸೈಕಲ್, ಮೋಟರ್ ಚಾಲಿತ ತ್ರಿಚಕ್ರದ ಸೈಕಲ್, ಎಲ್ಬೋ ಕ್ರಚಸ್, ಬ್ರೈಲ್ ಕಿಟ್, ಶ್ರವಣಸಾಧನ, ವಾಕಿಂಗ್ ಸ್ಟಿಕ್ ಸೇರಿ ಇತರೆ 155 ಸಾಧನ ಸಲಕರಣೆಗಳು ವಿತರಣೆ

### ಮಾನ್ಯ ಸಂಸದರ ಸಿ.ಎಸ್.ಆರ್. ಯೋಜನೆಯಡಿ ಮಂಜೂರಾಗಿರುವ ಕಾಮಗಾರಿಗಳು (ಒಟ್ಟು ಮೊತ್ತ ರೂ. 197.8 ಲಕ್ಷಗಳು)

| ಕ್ರ.ಸಂ. | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| | **ಶಾಲಾ ಕಟ್ಟಡ ನಿರ್ಮಾಣ** | |
| 1 | ಹೊಸೂರುಕಲ್ಲಹಳ್ಳಿ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ನಿರ್ಮಾಣ | 32.50 |
| 2 | ಚಿಕ್ಕಕೊಪ್ಪಲು ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ನಿರ್ಮಾಣ | 32.50 |
| | ಒಟ್ಟು | 65.00 |
| | **ಹೈ-ಮಾಸ್ಟ್ ಸ್ಟ್ರೀಟ್ ಲೈಟ್** | |
| 1 | ತಿಪ್ಪೂರು | 5.50 |
| 2 | ಮೇಲೂರು | 5.50 |
| 3 | ಬಂಡಹಳ್ಳಿ | 5.50 |
| 4 | ಸಾಲಿಗ್ರಾಮ | 5.50 |
| 5 | ಚಿಕ್ಕನಾಯಕನಹಳ್ಳಿ | 5.50 |
| 6 | ಹೆಬ್ಬಾಳು | 5.50 |
| 7 | ಹರದನಹಳ್ಳಿ | 5.50 |
| 8 | ಚಿಕ್ಕಭೇರ್ಯ | 5.50 |
| | ಒಟ್ಟು | 44.00 |
| | **ಬಸ್ ನಿಲ್ದಾಣ(ಬಸ್ ಶೆಲ್ಟರ್)** | |
| 1 | ಕರ್ಪೂರವಳ್ಳಿ | 11.10 |
| 2 | ಸಿದ್ದಾಪುರ | 11.10 |
| 3 | ನಾರಾಯಣಪುರ | 11.10 |
| 4 | ಬಂಡಹಳ್ಳಿ | 11.10 |
| 5 | ದೊಡ್ಡವಡ್ಡರಗುಡಿ ಗೇಟ್, | 11.10 |
| 6 | ಸಾಲಿಗ್ರಾಮ ಕೆ.ಇ.ಬಿ. ಬಡಾವಣೆ, | 11.10 |
| 7 | ಕಗ್ಗೆರೆ | 11.10 |
| 8 | ಕೋಳೂರು ಗೇಟ್ | 11.10 |
| | ಒಟ್ಟು | 88.80 |



## 24.04.2026, ಶುಕ್ರವಾರ, 3.00 ಗಂಟೆಗೆ ಹೆಬ್ಬೂರು

**ಪ್ರಕಟಣೆ: ಸಾ.ರಾ. ಮಹೇಶ್, ಮಾಜಿ ಸಚಿವರು, ಕೆ.ಆರ್.ನಗರ.**

VISMAYA 8050302424

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಏಪ್ರಿಲ್ 24 ಶುಕ್ರವಾರ 2026

ಸಂಪುಟ: 47 | ಸಂಚಿಕೆ: 9 | ಪುಟಗಳು: 12+IV

₹4



ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

## ನಕ್ಕರೆ ಅದೇ ಸ್ವರ್ಗ

ಹುಡುಗಿ : ನಂದ ಒಂದು ಆಸೆ ಇದೆ.
ಹುಡುಗ : ಹೇಳು ಏನು ಆಸೆ?
ಹುಡುಗಿ : ಯಾರು ನನ್ನ ಆಸೆ ಈಡೇರಿಸುತ್ತಾರೆ ಅವರಿಗೆ ನಾನು ಒಂದು ಲಕ್ಷ ಕೊಡುವೆ.
ಹುಡುಗ : ಹೌದಾ! ಏನ್ ಆಸೆ ಬೇಗ ಹೇಳು.
ಹುಡುಗಿ : ಯಾರು ನನಗೆ 2 ಲಕ್ಷ ಕೊಡುತ್ತಾರೆ ಅವರಿಗೆ ನಾನು ವಾಪಸ್ 1 ಲಕ್ಷ ಕೊಡ್ತಿನಿ.


ಮೈಸೂರು ಮಿತ್ರ

ಶುಕ್ರವಾರ, ಏಪ್ರಿಲ್ 24, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.


## ಅಮೃತ ವಾಹಿನಿ..........

ಸಾಸಿವೆಯಷ್ಟು ಪ್ರೀತಿ ಕೊಟ್ಟರೆ ಬೆಟ್ಟದಷ್ಟು ಪ್ರೀತಿ ಕೊಡುವವು ಮೂಕ ಪ್ರಾಣಿಗಳು !! ಬೆಟ್ಟದಷ್ಟು ಪ್ರೀತಿ ಕೊಟ್ಟರೆ ಸಮುದ್ರದಷ್ಟು ನೋವನ್ನು ಕೊಡುವವರು ಮನುಷ್ಯರು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಭಂಗಿ ದೇವರಿಗೆ ಹೆಂಡಗುಡುಕ ಪೂಜಾರಿ

## ನಿಮ್ಮ ಪತ್ರಗಳು

### ಎಲ್ಐಸಿಯಿಂದ ಪರಿಹಾರ, ವೈದ್ಯಕೀಯ ನೆರವು ನೀಡಲು ಮನವಿ

ಮಾನ್ಯರೇ

ಎಲ್ಐಸಿಯ ತಾತ್ಕಾಲಿಕ ಉದ್ಯೋಗಿಗಳಾಗಿದ್ದ ನಾವು 1985 ರಿಂದ ಡಿಸೆಂಬರ್ 1995 ರವರೆಗೆ ದಕ್ಷತೆಯಿಂದ ಹಾಗೂ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದೇವೆ. ನಿಗದಿಯಾದ ಕಮ್ಮಿ ವೇತನದಲ್ಲಿ ದುಡಿದ ನಮ್ಮನ್ನು 90 ದಿನಗಳಾದರೆ ಖಾಯಂಗೊಳಿಸಬೇಕಾಗುತ್ತದೆ ಎಂದು ಆ ಅವಧಿಯ ಒಳಗೆ ನಮ್ಮನ್ನು ಸೇವೆಯಿಂದ ಬಿಡುಗಡೆಗೊಳಿಸಿದರು. ಆ ನಂತರ ಮತ್ತೆ ನಮ್ಮನ್ನು ಸೇವೆಗೆ ನೇಮಕ ಮಾಡಿ ಮತ್ತೆ ಅದೇ ರೀತಿ ಸೇವೆಯಿಂದ ಬಿಡುಗಡೆಗೊಳಿಸಿದರು. ಹಾಗಾಗಿ ನಾವುಗಳು ಜೀವನದಲ್ಲಿ ಸಾಕಷ್ಟು ನೊಂದು, ಕಷ್ಟದ ಜೀವನವನ್ನು ನಡೆಸುತ್ತಿದ್ದೇವೆ. ದಿನ ನಿತ್ಯ ಅವಶ್ಯಕ ವಸ್ತುಗಳು ಹಾಗೂ ಔಷಧಿಗಳನ್ನು ಖರೀದಿಸಲು, ವೈದ್ಯಕೀಯ ವೆಚ್ಚವನ್ನು ಭರಿಸಲು ಕಷ್ಟವಾಗಿದೆ.

ನಮ್ಮಲ್ಲಿ ಬಹಳಷ್ಟು ಮಂದಿ ನಿವೃತ್ತಿ ವಯಸ್ಸನ್ನು ದಾಟಿದ್ದಾರೆ ಹಾಗೂ ಕೆಲವರು ಆ ವಯಸ್ಸಿಗೆ ಹತ್ತಿರವಾಗಿದ್ದಾರೆ. ಸುಮಾರು 41 ವರ್ಷಗಳ ಸುದೀರ್ಘ ಅವಧಿಯ ನಂತರ ತಾತ್ಕಾಲಿಕ ಉದ್ಯೋಗಿಗಳಾಗಿದ್ದ ನಮಗೆ ಸೂಕ್ತ ಪರಿಹಾರದ ಮೊತ್ತ ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಪ್ರಕ್ರಿಯೆಯು ನಡೆಯುತ್ತಿದೆ.

ಈ ಸಂದರ್ಭದಲ್ಲಿ ಜೀವನದಲ್ಲಿ ನೊಂದಿರುವ ನಾವುಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕೆಳಗಿನ ಸೌಲಭ್ಯ ಒದಗಿಸಿಕೊಡುವಂತೆ ಆದೇಶ ನೀಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇವೆ.

1. ನಮ್ಮ ಸೇವಾ ನೇಮಕಾತಿ ವರ್ಷದಿಂದ ನಿವೃತ್ತಿಯ ವಯಸ್ಸಿನ ವರ್ಷದವರೆಗಿನ ಒಟ್ಟು ಅವಧಿಯನ್ನು ಪರಿಗಣಿಸಿ ಹೆಚ್ಚಿನ ಪರಿಹಾರದ ಮೊತ್ತವನ್ನು ನೀಡಬೇಕಾಗುತ್ತದೆ.

2.ಎಲ್ಐಸಿಯ ಉದ್ಯೋಗಿಗಳು ಹಾಗೂ ಅವರ ಕುಟುಂಬಕ್ಕೆ ನೀಡುವ ವೈದ್ಯಕೀಯ ನಗದು ರಹಿತ ಚಿಕಿತ್ಸಾ ಯೋಜನೆಯನ್ನು ನಮ್ಮೆಲ್ಲರಿಗೂ ಹಾಗೂ ನಮ್ಮ ಕುಟುಂಬದವರಿಗೂ ಎಲ್ಐಸಿಯವರು ವಿಸ್ತರಿಸಬೇಕಾಗುತ್ತದೆ.

ಮೇಲ್ಕಂಡ ವಿಚಾರಗಳಿಗೆ ಸಂಬಂಧಿಸಿದಂತೆ ಮಾನವೀಯತೆ ಆಧಾರದ ಮೇಲೆ ಶೀಘ್ರ ಆದೇಶವನ್ನು ನಾವುಗಳು ಎದುರು ನೋಡುತ್ತಿದ್ದೇವೆ.

–ಅಖಿಲ ಭಾರತ ಎಲ್ಐಸಿ ತಾತ್ಕಾಲಿಕ ಉದ್ಯೋಗಿಗಳು

### ಹಾರ್ಡಿಂಗ್ ವೃತ್ತದ ಬಸ್ ನಿಲ್ದಾಣದಲ್ಲೇ ಬಸ್ ನಿಲ್ಲಿಸಲಿ



ಮಾನ್ಯರೆ,

ಮೈಸೂರಿನ ಹಾರ್ಡಿಂಗ್ ವೃತ್ತದಲ್ಲಿ ಮೈಸೂರಿ ನಿಂದ – ಚಾಮರಾಜನಗರ, ಗುಂಡ್ಲುಪೇಟೆ, ಹಾಸನ, ಮಂಗಳೂರು, ಮಡಿಕೇರಿ, ಚಿಕ್ಕಮಗಳೂರು ಹಾಗೂ ಇನ್ನಿತರ ಸ್ಥಳಗಳಿಗೆ ತೆರಳುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್ಆರ್ಟಿಸಿ) ಬಸ್ಸುಗಳು ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಬಸ್ ನಿಲ್ದಾಣ ನಿರ್ಮಾಣ ಮಾಡಿರುವುದು ಸರಿಯಷ್ಟೆ.

ಆದರೆ ಚಾಲಕರು ಬಸ್ ನಿಲ್ದಾಣದಿಂದ ಸುಮಾರು 50–100 ಮೀಟರ್ಗಳಷ್ಟು ಹಿಂದೆ ಅಥವಾ ಮುಂದೆ ರಸ್ತೆಯಲ್ಲಿ ನಿಲ್ಲಿಸುವುದನ್ನು ರೂಢಿಸಿಕೊಂಡಿದ್ದಾರೆ. ಬಸ್ಸುಗಳು ರಸ್ತೆಯಲ್ಲಿ ನಿಲ್ಲುವುದರಿಂದ ಸುಡು ಬಿಸಿಲಿನಲ್ಲಿಯೂ ಮಹಿಳೆಯರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಮತ್ತು ಮಕ್ಕಳು ಸಹ ಬಸ್ಸುಗಳು ನಿಂತ ಕಡೆಯಲ್ಲಿ ಬಸ್ ಹತ್ತುವುದರಿಂದ ಬಸ್ಸುಗಳ ಹಿಂಬದಿ ವಾಹನ ಸವಾರರಿಗೆ ಸಮಸ್ಯೆ ಉಂಟಾಗುತ್ತಿದೆ. ಏಕೆಂದರೆ ಈ ವೃತ್ತದಲ್ಲಿ ಹೆಚ್ಚು ವಾಹನಗಳು ಸಂಚರಿಸುವುದರಿಂದ ವೃತ್ತದ ಮಧ್ಯದಲ್ಲಿ ವಾಹನಗಳ ಹಿಂದೆ ವಾಹನಗಳು ನಿಲ್ಲುವುದರಿಂದ ಎಲ್ಲಾ ವಾಹನಗಳು ಹಾರನ್ ಮಾಡುತ್ತಾರೆ. ಇದರಿಂದ ಈ ಸ್ಥಳದಲ್ಲಿ ಸಾರ್ವಜನಿಕರು ಅನೇಕ ಗೊಂದಲಗಳಿಗೆ ಒಳಗಾಗುತ್ತಾರೆ. ಈ ಸ್ಥಳದಲ್ಲಿ ಪ್ರತಿ ದಿನ ಕರ್ತವ್ಯ ನಿರ್ವಹಿಸುವ ಸಂಚಾರಿ ಪೋಲಿಸರು ಈ ಸಮಸ್ಯೆಯನ್ನು ಕಂಡು ಕಾಣದಂತೆ ಕರ್ತವ್ಯ ನಿರ್ವಹಿಸುತ್ತಿರುವುದು ವಿಪರ್ಯಾಸದ ಸಂಗತಿ. ಆದ್ದರಿಂದ ಸಂಬಂಧಪಟ್ಟ ಮೈಸೂರು ನಗರದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್ಆರ್ಟಿಸಿ ಬಸ್) ಅಧಿಕಾರಿಗಳು ಮತ್ತು ಮೈಸೂರು ನಗರದ ಪೊಲೀಸ್ ಆಯುಕ್ತರು ಹಾಗೂ ಸಂಚಾರ ಪೊಲೀಸರು ಬಸ್ ನಿಲ್ದಾಣಗಳಲ್ಲಿ ಬಸ್ಸನ್ನು ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.


### ಕನ್ನಡಿಗರಿಗೆ ವರವಾಗಿ ಬಂದ ವರನಟ

ಮಾನ್ಯರೆ,

ಇಂದಿನ ಮುಂದಿನ ಪೀಳಿಗೆಗೆ ಆದರ್ಶ ನಾಯಕ,
ನಟಸಾರ್ವಭೌಮ ಅಭಿನಯ ಕಲಾ ಕುಲತಿಲಕ,
ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ ಸರ್ವಜ್ಞಮೂರ್ತಿ,
ಬಡವರ ಬಂಧು ನಿಮ್ಮಯ ಪಾತ್ರಗಳಿಗೆ ಸಾವಿಲ್ಲ ಎಂದೆಂದೂ,
ಗಾಜನೂರು ಗಂಡು ಮುತ್ತುರಾಜ್ ಬಂಗಾರದ ಮನುಷ್ಯ,
ಬಹದ್ದೂರ್ ಗಂಡು ಮಿಸ್ಟರ್ ರಾಜಕುಮಾರ್ ದೇವತಾ ಮನುಷ್ಯ,

ಬೇಡರ ಕಣ್ಣಪ್ಪನಾಗಿ ಉದಯಿಸಿದ ನವತಾರೆ,
ಅಣ್ಣಾವ್ರು ಕನ್ನಡ ಚಿತ್ರರಂಗದ ಧ್ರುವತಾರೆ,
ಡಾ॥ ರಾಜ್ ಭಾರತೀಯ ಚಿತ್ರರಂಗದ ಮೇರು ನಟ,
ಕನ್ನಡಿಗರಿಗೆ ವರವಾಗಿ ಬಂದ ವರನಟ,
ನೀವು ಜನಿಸಿದ್ದು ಈ ನಾಡಿನ ಭಾಗ್ಯ,
ನಿಮ್ಮನ್ನು ಪಡೆದ ಕನ್ನಡಿಗರು ನಾವೇ ಭಾಗ್ಯವಂತರು.

ಅಹಲ್ಯ .ಸಿ.ನಾ. ಚಂದ್ರ
ಜನತಾ ನಗರ 7ನೇ ಅಡ್ಡರಸ್ತೆ,
ಸಾಹುಕಾರ್ ಚೆನ್ನಯ್ಯ ಮುಖ್ಯ ರಸ್ತೆ, ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

## ಅನುಭಾವದ ಚಿಂತನೆಗಳು

# ಜೀವನದಲ್ಲಿ ಅದೃಷ್ಟ ಎಷ್ಟು ಮುಖ್ಯ...?

ಅದೃಷ್ಟವನ್ನು ನಂಬಿಕೊಂಡವರು ಯಾವಾಗಲೂ ನಕ್ಷತ್ರಗಳು, ಗ್ರಹಗಳು, ಸ್ಥಳಗಳು, ಅದೃಷ್ಟದ ಚಪ್ಪಲಿ, ಅದೃಷ್ಟದ ಸೋಪ್‌ಗಳು, ಅದೃಷ್ಟದ ಸಂಖ್ಯೆಗಳು ಇನ್ನೂ ಅನೇಕ ರೀತಿಯ ವಸ್ತುಗಳಿಗೆ ಇಳಿಬಿದ್ದಿರುತ್ತಾರೆ. ಅದೃಷ್ಟದ ಹುಡುಕಾಟದಲ್ಲಿ ಮತ್ತು ಅದಕ್ಕಾಗಿ ಕಾಯುವ ಪ್ರಕ್ರಿಯೆಯಲ್ಲಿ, ಅವರು ತಾವಾಗಿಯೇ ಸುಲಭವಾಗಿ ಸೃಷ್ಟಿಸಬಹುದಾದ ವಿಷಯಗಳನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾರೆ. ಜೀವನದ ಎಲ್ಲಾ ವಿಷಯಗಳನ್ನು ನಿರ್ಮಿಸಿಕೊಳ್ಳಬೇಕಾದವರು ನೀವೇ. ನಿಮ್ಮ ಶಾಂತಿ ಮತ್ತು ನಿಮ್ಮ ಗೊಂದಲಗಳು, ನಿಮ್ಮ ವಿವೇಕ ಮತ್ತು ಹುಚ್ಚುತನ, ನಿಮ್ಮ ಸಂತೋಷ ಮತ್ತು ದುಃಖಗಳೆಲ್ಲವೂ ನಿಮ್ಮದೇ ಜವಾಬ್ದಾರಿಯಾಗಿದೆ. ನಿಮ್ಮೊಳಗಿನ ದೆವ್ವವೂ, ದೈವವೂ ನಿಮ್ಮದೇ ಜವಾಬ್ದಾರಿ.

ಆಕಸ್ಮಿಕವಾಗಿ ಕೆಲವು ಒಳ್ಳೆಯ ವಿಷಯಗಳು ಘಟಿಸಬಹುದು. ಆದರೆ ನೀವು ಆ ಅವಕಾಶಕ್ಕಾಗಿ ಕಾಯುತ್ತಾ ಕುಳಿತರೆ, ಆ ಒಳ್ಳೆಯ ವಿಷಯಗಳು ನೀವು ನಿಮ್ಮ ಗೋರಿಯಲ್ಲಿರುವಾಗ ಮಾತ್ರ ಸಂಭವಿಸಬಹುದು, ಏಕೆಂದರೆ ಅವು ತಮ್ಮದೇ ಆದ ಸಮಯವನ್ನು ತೆಗೆದುಕೊಳ್ಳುತ್ತವೆ. ನಿಮ್ಮ ಶಕ್ತಿಗಳಿಗೆ ಅವುಗಳ ಸಂಪೂರ್ಣ ಸಾಮರ್ಥ್ಯಕ್ಕೆ ವ್ಯಕ್ತವಾಗುವ ಅವಕಾಶ ಮಾಡಿಕೊಡುವ ಬದಲು, ನಿಮ್ಮ ಸುತ್ತಲು ಅಗತ್ಯವಾದ ಆಂತರ್ಯ ಹಾಗೂ ಬಾಹ್ಯ ವಾತಾವರಣವನ್ನು ಸೃಷ್ಟಿಸುವ ಮೂಲಕ ಸರಿಯಾದ ಸನ್ನಿವೇಶಗಳು ಸೃಷ್ಟಿಯಾಗುವಂತೆ ಮಾಡುವ ಬದಲು, ದುರದೃಷ್ಟವಶಾತ್, ಅದನ್ನು ನಮಗೆ ಒದಗಿಸಬಹುದಾದ ಬೇರೆ ಇನ್ನೇನಕ್ಕಾಗೋ ನಾವು ಯಾವಾಗಲೂ ಹುಡುಕುತ್ತಿರುತ್ತೇವೆ.

ಇಂದಿನ ದಿನವನ್ನು, ಬೆಳಗ್ಗೆಯಿಂದ ಸಂಜೆಯವರೆಗೆ ನೀವು ಹೇಗೆ ಅನುಭವಿಸಿದಿರಿ ಎನ್ನುವುದು ಖಂಡಿತವಾಗಿಯೂ ನಿಮ್ಮ ಕೈಯಲ್ಲೇ ಇದೆ. ನಿಮ್ಮ ಸುತ್ತಲಿನ ಜನರೊಂದಿಗೆ ನೀವೆಷ್ಟು ಘರ್ಷಣೆಯನ್ನು ಮಾಡಿಕೊಂಡಿರಿ ಎನ್ನುವುದು, ಕೇವಲ ಆ ಸನ್ನಿವೇಶಗಳು ಹಾಗೂ ಜನರನ್ನು, ಅವರೊಳಗಿನ ಮಿತಿ ಮತ್ತು ಸಾಧ್ಯತೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ನೀವೆಷ್ಟು ವಿವೇಚನಾರಹಿತವಾಗಿರುತ್ತೀರಿ ಎನ್ನುವುದರ ಮೇಲೆ ಅವಲಂಬಿತವಾಗಿದೆ. ನೀವು ಧರಿಸಿರಬಹುದಾದಂತಹ ಯಾವುದೇ ಅದೃಷ್ಟದ ಯಂತ್ರಗಳಿಂದ ಖಂಡಿತವಾಗಿಯೂ ಅದು ನಿರ್ಧಾರವಾಗುವುದಿಲ್ಲ. ನೀವೆಷ್ಟು ವಿವೇಚನೆಯಿಂದ, ಬುದ್ಧಿವಂತಿಕೆಯಿಂದ, ಮತ್ತು ನಿಮ್ಮ ಸುತ್ತಲಿನ ಜೀವನವನ್ನು ಎಷ್ಟು ಕಾಳಜಿಯಿಂದ ನೋಡುತ್ತೀರಿ ಎಂಬುದರ ಮೇಲೆ ಮಾತ್ರ ಅದು ಅವಲಂಬಿಸಿರುತ್ತದೆ.

ಒಮ್ಮೆ, ಇಬ್ಬರು ವ್ಯಕ್ತಿಗಳು ಏರ್ಪೋರ್ಟ್‌ನಲ್ಲಿ ಭೇಟಿಯಾದರು. ಒಬ್ಬ ನಿಜವಾಗಿಯೂ ದುಃಖಿತನಾಗಿ ಕಾಣುತ್ತಿದ್ದ. ಹಾಗಾಗಿ ಇನ್ನೊಬ್ಬ "ಯಾಕೆ ಹೀಗಿದ್ದೀಯ? ನಿನಗೇನಾಯ್ತು?" ಎಂದು ಕೇಳಿದ. ಅದಕ್ಕೆ ಆ ವ್ಯಕ್ತಿ, "ನನ್ನ ಮೊದಲನೇ ಹೆಂಡತಿ ಕ್ಯಾನ್ಸರ್‌ನಿಂದ ಸತ್ತಳು. ನನ್ನ ಎರಡನೇ ಹೆಂಡತಿ ನನ್ನ ನೆರೆಮನೆಯವನ ಜೊತೆ ಓಡಿ ಹೋದಳು. ನನ್ನ ಮಗ ನನ್ನನ್ನು ಕೊಲ್ಲಲು ಪ್ರಯತ್ನಿಸಿದ್ದರಿಂದ ಜೈಲಿನಲ್ಲಿದ್ದಾನೆ. ನನ್ನ ಹದಿನಾಲ್ಕು ವರ್ಷದ ಮಗಳು ಈಗ ಗರ್ಭಿಣಿ. ನನ್ನ ಮನೆಗೆ ಸಿಡಿಲು ಬಡಿಯಿತು. ಇವತ್ತು ಶೇರ್ ಮಾರ್ಕೆಟ್ಟಲ್ಲಿ ನನ್ನೆಲ್ಲಾ ಶೇರ್‌ಗಳು ಬಿದ್ದು ಹೋದವು ಮತ್ತು ನನ್ನ ವೈದ್ಯಕೀಯ ವರದಿ ನನಗೆ ಏಡ್ಸ್ ಇದೆ ಎಂದು ಹೇಳುತ್ತಿದೆ." ಎಂದನು.

ಇದನ್ನು ಕೇಳಿದ ಇನ್ನೊಬ್ಬ ವ್ಯಕ್ತಿ "ಅಬ್ಬಾ! ಎಂಥಾ ದುರಾದೃಷ್ಟ ಬಂದಿದೆ ನಿಮಗೆ! ಅಂದಹಾಗೆ, ನೀವೇನು ಮಾಡಿಕೊಂಡಿದ್ದೀರಿ? ನಿಮ್ಮ ವೃತ್ತಿ ಏನು?" ಎಂದು ಕೇಳಿದ. ಅದಕ್ಕೆ ಆ ವ್ಯಕ್ತಿ "ನಾನು ಅದೃಷ್ಟದ ಹರಳುಗಳನ್ನ ಮಾರುತ್ತೇನೆ". ಎಂದ.

ಇಲ್ಲಿ ವಿಷಯ ಏನೆಂದರೆ, ನೀವೊಂದು ನಿರ್ದಿಷ್ಟ ರೀತಿಯಲ್ಲಿದ್ದರೆ,



> ಇದು ನಿಮ್ಮ ಜೀವನವನ್ನು ನೀವು ಪ್ರಜ್ಞಾಪೂರ್ವಕವಾಗಿ ರೂಪಿಸಿಕೊಳ್ಳುವ ಸಮಯ. ಅದೃಷ್ಟ, ನಕ್ಷತ್ರಗಳು, ಗ್ರಹಗಳಿಗೆ ಜೋತುಬೀಳಬೇಡಿ. ಇವೆಲ್ಲಾ ನಿರ್ಜೀವ ವಸ್ತುಗಳು. ಮಾನವ ಸ್ವಭಾವವು ನಿರ್ಜೀವ ವಸ್ತುಗಳ ಹಣೆಬರಹವನ್ನು ನಿರ್ಧರಿಸಬೇಕೆ ಅಥವಾ ನಿರ್ಜೀವ ವಸ್ತುಗಳು ಮಾನವ ಸ್ವಭಾವದ ಹಣೇಬರಹವನ್ನು ನಿರ್ಣಯಿಸಬೇಕೇ? ಅದು ಯಾವ ರೀತಿಯಲ್ಲಿರಬೇಕು? ನಿರ್ಜೀವ ವಸ್ತುಗಳಿಗೆ ಏನಾಗಬೇಕು ಎಂಬುದನ್ನು ಮಾನವ ಸ್ವಭಾವವು ನಿರ್ಧರಿಸಬೇಕು ಅಲ್ಲವೇ? ಆದರೆ ಒಂದು ನಕ್ಷತ್ರವು ನಿಮ್ಮ ಭವಿಷ್ಯವನ್ನು ನಿರ್ಧರಿಸುತ್ತಿದ್ದೇ ಆದರೆ, ನಿರ್ಜೀವ ವಸ್ತುಗಳು ನಿಮ್ಮ ವಿಧಿ ನಿರ್ಧರಿಸುತ್ತಿವೆ ಎಂದರ್ಥ.

ಕೆಲವು ವಿಷಯಗಳು ನಿಮ್ಮತ್ತ ಆಕರ್ಷಿತವಾಗುತ್ತವೆ. ನೀವು ಮತ್ತಿನ್ಯಾವುದೋ ರೀತಿಯಲ್ಲಿದ್ದರೆ, ಕೆಲವು ಇತರ ವಿಷಯಗಳು ನಿಮ್ಮ ಕಡೆಗೆ ಆಕರ್ಷಿತವಾಗುತ್ತವೆ. ಒಂದು ಹೂಬಿಡುವ ಪೊದೆ ಮತ್ತು ಒಂದು ಒಣಗಿದ ಮುಳ್ಳಿನ ಪೊದೆ ಒಂದು ಕಡೆ ಇದ್ದರೆ, ಎಲ್ಲಾ ಜೇನ್ನೊಣಗಳು ಹೂಬಿಡುವ ಪೊದೆಯ ಕಡೆಗೆ ಆಕರ್ಷಿತವಾಗುತ್ತವೆ. ಹೂಬಿಡುವ ಪೊದೆ ಅದೃಷ್ಟವನಲ್ಲ, ಬದಲಾಗಿ, ಸುಗಂಧವನ್ನು ಹೊಂದಿದೆ. ನೀವು ಆ ಸುಗಂಧವನ್ನು ನೋಡಲು ಸಾಧ್ಯವಾಗದೇ ಇರಬಹುದು, ಆದರೆ ಅದು ಎಲ್ಲವನ್ನೂ ತನ್ನತ್ತ ಸೆಳೆಯುತ್ತದೆ. ಜನರು ಮುಳ್ಳು ಪೊದೆಗಳಿಂದ ದೂರ ಸರಿಯುತ್ತಾರೆ. ಏಕೆಂದರೆ ಅದು ಇನ್ನೊಂದು ರೀತಿಯ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ಬಹುಶಃ ಇವೆರಡಕ್ಕೂ ತಾವು ನಿರ್ಮಿಸುತ್ತಿರುವ ವಾತಾವರಣದ ಬಗ್ಗೆ ಪ್ರಜ್ಞೆ ಇಲ್ಲದಿರಬಹುದು, ಆದರೆ ನಡೆಯಬೇಕಾದ ಸಂಗತಿಗಳು ಅವು ನಡೆಯಬೇಕಾದ ರೀತಿಯಲ್ಲೇ ನಡೆಯುತ್ತಿವೆ.

ಹಾಗಾಗಿ, ನಿಮ್ಮ ಜೀವನದಲ್ಲಿ ಉತ್ತಮವಾದ ಸಂಗತಿಗಳು ನಡೆಯುತ್ತಿದ್ದು, ಅದರ ಕಾರಣ ನಿಮಗೆ ಗೊತ್ತಿಲ್ಲದೇ ಇದ್ದರೆ, ನೀವು ಹಳಸಿದ ಆಹಾರವನ್ನು ತಿನ್ನುತ್ತಿದ್ದೀರಿ ಎಂದು ನಾನು ಹೇಳುತ್ತೇನೆ. ಇದರರ್ಥ ನಿಮ್ಮ ಆಹಾರವನ್ನು ನೀವು ಬೇರೆಲ್ಲೋ, ಬಹಳ ಹಿಂದೆಯೇ ಬೇಯಿಸಿದ್ದೀರಿ ಮತ್ತು ಈಗಲೂ ಒಳ್ಳೆಯ ಆಹಾರವನ್ನೇ ತಿನ್ನುತ್ತಿದ್ದೀರಿ. ಆದರೆ ಅದು ಹಳಸಿದೆ, ಮತ್ತು ದಿನದಿಂದ ದಿನಕ್ಕೆ, ಹೆಚ್ಚೆಚ್ಚು ಹಳಸಿಹೋಗುತ್ತಿದೆ. ಅದೇ ನಿಮ್ಮ ಜೀವನದಲ್ಲಿ ಉತ್ತಮವಾದ ಸಂಗತಿಗಳು ನಡೆಯುತ್ತಿದ್ದು, ಅದರ ಕಾರಣ ನಿಮಗೆ ತಿಳಿದಿದ್ದರೆ, ನೀವು ನಿಮ್ಮ ಆಹಾರವನ್ನು ಇಂದು ಪ್ರಜ್ಞಾಪೂರ್ವಕವಾಗಿ ಬೇಯಿಸಿದ್ದೀರಿ ಎಂದರ್ಥ. ಆದರೆ ನಿಮ್ಮ ಜೀವನದಲ್ಲಿ ನಿಜವಾಗಿಯೂ ಕೆಟ್ಟ ಪರಿಸ್ಥಿತಿಗಳು ಎದುರಾಗುತ್ತಿದ್ದು, ಮತ್ತು ಏಕೆ ಹಾಗಾಗುತ್ತಿದೆ ಎಂದು ನಿಮಗೆ ಗೊತ್ತಿಲ್ಲದೇ ಇದ್ದರೆ, ನೀವು ಹಳಸಿ ಕೊಳೆತುಹೋಗಿರುವ ಆಹಾರವನ್ನು ತಿನ್ನುತ್ತಿದ್ದೀರಿ ಎಂದರ್ಥ.

#### ಅದೃಷ್ಟ ನೀವು ಕುರುಡಾದಾಗ

'ದೃಷ್ಟಿ' ಎಂದರೆ 'ನೋಡುವುದು', 'ಅದೃಷ್ಟಿ' ಎಂದರೆ 'ನೋಡಲು ಸಾಧ್ಯವಾಗದಿರುವುದು' ಎಂದರ್ಥ. ಸದ್ಯದಲ್ಲಿ ನೀವು ನಿಮ್ಮ ದೃಷ್ಟಿಯನ್ನು ಕಳೆದುಕೊಂಡಿದ್ದೀರಿ. ನಿಮಗೆ ನೋಡಲು ಸಾಧ್ಯವಿದ್ದಿದ್ದರೆ, ಯಾವ ಸಂಗತಿ ಘಟಿಸಿದರೂ ಸಹ ಅದು ಯಾವ ಕಾರಣಕ್ಕಾಗಿ ನಡೆಯಿತು ಎನ್ನುವುದು ನಿಮಗೆ ತಿಳಿದಿರುತ್ತಿತ್ತು. ನಿಮಗೆ ನೋಡಲು ಸಾಧ್ಯವಾಗದಿದ್ದಾಗ, ಯಾವುದೇ ವಿಷಯಗಳಾಗಲಿ, ಅವು ಗೊತ್ತು ಗುರಿಯಿಲ್ಲದೆ ಅಥವಾ ಆಕಸ್ಮಿಕವಾಗಿ ಸಂಭವಿಸುತ್ತಿವೆ ಎಂದು ನೀವು ಭಾವಿಸುತ್ತೀರಿ. ಅದೊಂದು ಅದೃಷ್ಟ ಅಥವ ದುರದೃಷ್ಟವೆಂದು ನೀವು ತಿಳಿಯುತ್ತೀರಿ. ಇದು ಅದೃಷ್ಟಕ್ಕೆ ನೀಡಬಹುದಾದ ಸೂಕ್ತವಾದ ವಿವರಣೆ.

ಆಧ್ಯಾತ್ಮಿಕರಾಗುವುದರ ಅರ್ಥ ನೀವು ನಿಮ್ಮ ಜೀವನವನ್ನು 100% ನಿಮ್ಮ ಕೈಗೆ ತೆಗೆದುಕೊಂಡಿದ್ದೀರಿ ಎಂದು. ನಿಮ್ಮ ಜೀವನವನ್ನು 100% ನಿಮ್ಮ ಕೈಗೆ ತೆಗೆದುಕೊಂಡಾಗ ಮಾತ್ರ, ನೀವು 100% ಜಾಗ್ರತರಾಗುತ್ತೀರಿ. ನಿಮ್ಮ ಜೀವನದಲ್ಲಿ ದೈವವು ಉದ್ಭವಿಸುವ ಸಾಧ್ಯತೆ ಸೃಷ್ಟಿಯಾಗುತ್ತದೆ.

ಇದು ನಿಮ್ಮ ಜೀವನವನ್ನು ನೀವು ಪ್ರಜ್ಞಾಪೂರ್ವಕವಾಗಿ ರೂಪಿಸಿಕೊಳ್ಳುವ ಸಮಯ. ಅದೃಷ್ಟ, ನಕ್ಷತ್ರಗಳು ಮತ್ತು ಗ್ರಹಗಳಿಗೆ ಜೋತುಬೀಳಬೇಡಿ. ಇವೆಲ್ಲಾ ನಿರ್ಜೀವ ವಸ್ತುಗಳು. ಮಾನವ ಸ್ವಭಾವವು ನಿರ್ಜೀವ ವಸ್ತುಗಳ ಹಣೆಬರಹವನ್ನು ನಿರ್ಧರಿಸಬೇಕೆ ಅಥವಾ ನಿರ್ಜೀವ ವಸ್ತುಗಳು ಮಾನವ ಸ್ವಭಾವದ ಹಣೆಬರಹ ವನ್ನು ನಿರ್ಣಯಿಸಬೇಕೇ? ಅದು ಯಾವ ರೀತಿಯಲ್ಲಿರಬೇಕು? ನಿರ್ಜೀವ ವಸ್ತುಗಳಿಗೆ ಏನಾಗಬೇಕು ಎಂಬುದನ್ನು ಮಾನವ ಸ್ವಭಾವವು ನಿರ್ಧರಿಸಬೇಕು ಅಲ್ಲವೇ? ಆದರೆ ಒಂದು ನಕ್ಷತ್ರವು ನಿಮ್ಮ ಭವಿಷ್ಯವನ್ನು ನಿರ್ಧರಿಸುತ್ತಿದ್ದೇ ಆದರೆ, ನಿರ್ಜೀವ ವಸ್ತುಗಳು ನಿಮ್ಮ ವಿಧಿ ನಿರ್ಧರಿಸುತ್ತಿವೆ ಎಂದರ್ಥ.

ನಿಮ್ಮ ಮೇಲೆ ಪ್ರಭಾವ ಬೀರಲು ಇಂತಹ ವಿಷಯಗಳಿಗೆ ಅವಕಾಶ ಮಾಡಿಕೊಡಬೇಡಿ. ಏಕೆಂದರೆ ಒಮ್ಮೆ ನೀವದರಲ್ಲಿ ಸಿಲುಕಿಕೊಂಡಾಗ, ನೀವೊಂದು ರೀತಿಯ ತುಳಿತಕ್ಕೆ ಒಳಗಾಗುತ್ತೀರಿ ಮತ್ತು ನಿಮ್ಮ ಜೀವನದಲ್ಲಿ ನೀವು ಮಾಡಬಹುದಾದ ಸಂಗತಿಗಳು ಸೀಮಿತವಾಗಿಬಿಡುತ್ತವೆ. ಅದನ್ನು ಮೀರಿ ಹೋಗಲು ನಿಮಗೆ ಸಾಧ್ಯವಾಗುವುದಿಲ್ಲ. ಅದು ನಿಮ್ಮ ಬೆಳವಣಿಗೆ ಮತ್ತು ಸಾಧ್ಯತೆಯನ್ನು ನಿರ್ಬಂಧಿಸುತ್ತದೆ.

ನಿಮ್ಮ ಸುತ್ತಲಿನ ಜನರೊಂದಿಗೆ ನೀವೆಷ್ಟು ಘರ್ಷಣೆಯನ್ನು ಮಾಡಿಕೊಂಡಿರಿ ಎನ್ನುವುದು, ಕೇವಲ ಆ ಸನ್ನಿವೇಶಗಳು ಹಾಗೂ ಜನರನ್ನು, ಅವರೊಳಗಿನ ಮಿತಿ ಮತ್ತು ಸಾಧ್ಯತೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ನೀವೆಷ್ಟು ವಿವೇಚನಾರಹಿತವಾಗಿರುತ್ತೀರಿ ಎನ್ನುವುದರ ಮೇಲೆ ಅವಲಂಬಿತವಾಗಿದೆ.

ನೀವು ಆಕಸ್ಮಿಕವಾಗಿ ನಿಮ್ಮ ಜೀವನವನ್ನು ನಡೆಸಿದಾಗ, ನೀವು ಭಯ ಮತ್ತು ಆತಂಕದಲ್ಲಿ ಜೀವಿಸುತ್ತೀರಿ. ಅದೇ ನೀವು ಜೀವನದ ಮೇಲಿನ ಪ್ರೀತಿ ಹಾಗೂ ಸಾಮರ್ಥ್ಯದ ಮೂಲಕ ಬದುಕಿದಾಗ, ಏನು ನಡೆಯುತ್ತಿದೆ ಅಥವಾ ನಡೆಯುತ್ತಿಲ್ಲ ಎನ್ನುವುದು ನಿಮಗೆ ಮುಖ್ಯವಾಗುವುದಿಲ್ಲ. ಕನಿಷ್ಠಪಕ್ಷ ನಿಮಗೇನಾಗುತ್ತಿದೆ ಎಂಬುದರ ಮೇಲೆ ನೀವು ನಿಯಂತ್ರಣವನ್ನು ಹೊಂದಿರುತ್ತೀರಿ. ಹಾಗಿದ್ದಾಗ ಅದು ಹೆಚ್ಚು ಸ್ಥಿರವಾದ ಜೀವನವಾಗಿರುತ್ತದೆ.

## ಟಿವಿ, ಮೊಬೈಲ್‌ಗಳು ಪುಸ್ತಕಗಳ ಶತ್ರು: ಪ್ರೊ.ರಾಜಪ್ಪ ದಳವಾಯಿ



ಸಂವಾದ ಕಾರ್ಯಕ್ರಮದಲ್ಲಿ ಪ್ರೊ.ರಾಜಪ್ಪ ದಳವಾಯಿ ಮಾತನಾಡಿದರು.

ಮೈಸೂರು, ಏ.23(ಜಿಎ)–ಪತ್ರಿಕೆ ದಿನನಿತ್ಯದ ಜೀವನಾಡಿ, ಪುಸ್ತಕ ತಾಯಿಗೆ ಸಮಾನ, ಹೀಗಾಗಿ ಪತ್ರಿಕೆಗಳಲ್ಲಿ ಕೆಲಸ ಮಾಡುವವರು ಪುಸ್ತಕಗಳ ಓದಿನ ಮೂಲಕ ಹೆಚ್ಚು ಸಕ್ರಿಯವಾಗಬೇಕಾದ ಅಗತ್ಯವಿದೆ ಎಂದು ವಿಮರ್ಶಕ ಪ್ರೊ. ರಾಜಪ್ಪ ದಳವಾಯಿ ಸಲಹೆ ನೀಡಿದರು.

ಚಿಂತನ ಚಿತ್ತಾರ ವೇದಿಕೆ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಏರ್ಪಡಿಸಿದ್ದ 'ಪತ್ರಕರ್ತರು ಮತ್ತು ಪುಸ್ತಕ ಸಾಂಗತ್ಯ' ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪುಸ್ತಕಗಳು ನಮಗೆ ಜೀವನದ ಸಂಗಾತಿ ಆಗಬೇಕು, ಟಿವಿ, ಈಚೆಗಿನ ಮೊಬೈಲ್‌ಗಳು ಪುಸ್ತಕಗಳ ಶತ್ರುವಾಗಿವೆ. ಹೀಗಿರುವಾಗ ಪುಸ್ತಕಗಳನ್ನು ಉಳಿಸುವುದು ಹೇಗೆಂಬ ಬಗ್ಗೆ ಚಿಂತಿಸಬೇಕಾಗಿದೆ. ದಿನನಿತ್ಯದ ಜಂಜಾಟಗಳಿಂದ ಪುಸ್ತಕಗಳು ಬಿಡುಗಡೆ ಕೊಡಬಹುದಾಗಿವೆ ಎಂದರು.

ಚಿಂತನ ಚಿತ್ತಾರ ವೇದಿಕೆಯ ನಿಂಗಣ್ಣ ಚಿತ್ತಣ್ಣನವರ್‌ರ ಪುಸ್ತಕ ಪ್ರಕಾಶನ ಪ್ರೇಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಕನ್ನಡ ಪುಸ್ತಕ ನಾಗರಿಕ ಸಮಾಜಕ್ಕೆ ಮಾದಕ ವಸ್ತುಗಳನ್ನು ಮಾರಾಟ ಮಾಡುವವರ ಮಧ್ಯೆ ಪುಸ್ತಕ ಮಾರುವವರೇ ಲೇಸು. ಪತ್ರಿಕೋದ್ಯಮ ಮತ್ತು ಪುಸ್ತಕ ಅವಳಿ ಜವಳಿಗಳು. ಪುಸ್ತಕ ನಮ್ಮೊಟ್ಟಿಗೆ ಮಾತನಾಡುತ್ತವೆ. ಮನುಷ್ಯ ಚರಿತ್ರೆ ಹಾಗೂ–ಹೋಗುಗಳು ಬಗ್ಗೆ ಉತ್ತಮ ಸಂಗಾತಿ ಪುಸ್ತಕಗಳಾಗಿವೆ ಎಂದರು.

ಪತ್ರಿಕೋದ್ಯಮಿ ರಶ್ಮಿ ಕೋಟಿ ಮಾತನಾಡಿ, ನಮ್ಮ ಜೀವನವನ್ನು ಸ್ಕ್ರೀನ್ ಟೈಂ ಆವರಿಸಿದೆ. ಮಕ್ಕಳು ಸಹ ಮೊಬೈಲ್ ಚಟದಿಂದಾಗಿ ಕೇವಲ 15 ನಿಮಿಷ ಸಹಾ ಏಕಾಗ್ರತೆಯಿಂದ ಓದಲು ಸಾಧ್ಯವಾಗದಷ್ಟು ಸಾಮರ್ಥ್ಯ ಕಳೆದುಕೊಂಡಿದ್ದಾರೆ.

#### ಪುಸ್ತಕಗಳ ಉಳಿಸಲು ಚಿಂತಿಸಬೇಕಾಗಿದೆ

ಪ್ರಸ್ತುತ ಸಮಾಜ ಜಾತಿ, ಧರ್ಮ, ಅಧಿಕಾರದ ಅಂತಸ್ತುಗಳಲ್ಲಿ ಮುಳುಗಿದೆ. ಇವುಗಳ ನಡುವೆ ತಮಗೆ ಬಂದ ಯಾವುದೋ ಮೆಸೇಜನ್ನು ಅವುಗಳ ಸತ್ಯಾಸತ್ಯತೆ ತಿಳಿಯದೇ ಎಲ್ಲರಿಗೂ ಕಳಿಸುವವರ ಸಂಖ್ಯೆ ಕಡಿಮೆಯೇನಲ್ಲ ಎಂದರು.

ಮುಖ್ಯ ಮಾಧ್ಯಮಗಳು ಪ್ರಧಾನಿ ಮೋದಿ ಯಾವುದೋ ಅಂಗಡಿಯಲ್ಲಿ ಬೇಲ್ ಪೂರಿ ತಿಂದರೆ ಅದನ್ನೇ ದೊಡ್ಡ ಸುದ್ದಿ ಮಾಡುತ್ತವೆ. ಆದರೆ ಮಣಿಪುರದಲ್ಲಿ ಮತ್ತೆ ಭುಗಿಲೆದ್ದ ಹಿಂಸಾಚಾರ, ನಾಡು, ನುಡಿ, ನೆಲ, ಜಲಕ್ಕಾಗಿ ಹೋರಾಟ ಮಾಡುವವರನ್ನು ಕಡೆಗಣಿಸುತ್ತವೆ. ಇದಕ್ಕೆ ಮುಖ್ಯ ಕಾರಣ ಓದಿನ ಕೊರತೆಯಿಂದಾಗಿ ವಿವೇಚನಾ ಶಕ್ತಿ ಕಳೆದುಕೊಂಡಿರುವುದಾಗಿದೆ ಎಂದರು. ಕಾರ್ಯಕ್ರಮದಲ್ಲಿ ಪತ್ರಕರ್ತ ಕೆ.ನರಸಿಂಹ ಮೂರ್ತಿ, ಚಿಂತನ ಚಿತ್ತಾರದ ನಿಂಗರಾಜು ಚಿತ್ತಣ್ಣನರ್ ಉಪಸ್ಥಿತರಿದ್ದರು.

## ಮೈಸೂರು ಜಿಲ್ಲೆಯ ಕೆರೆಗಳ ಒತ್ತುವರಿ ವಾರದಲ್ಲಿ ತೆರವುಗೊಳಿಸಿ: ಎಡಿಸಿ



ಡಾ.ಶಿವರಾಜು

ಮೈಸೂರು, ಏ.23(ಎಂಕೆ)– ಜಿಲ್ಲೆಯ ಎಲ್ಲಾ ಕೆರೆಗಳ ಸರ್ವೆ ನಡೆಸಿ, ವಾರದಲ್ಲಿ ಒತ್ತುವರಿ ತೆರವುಗೊಳಿಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಪಿ ಶಿವರಾಜು ಸೂಚನೆ ನೀಡಿದರು.

ಮೈಸೂರು ಜಿಪಂನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಗುರುವಾರ ಮೈಸೂರು ಜಿಲ್ಲಾ ಮಟ್ಟದ ಕೆರೆ ಸಂರಕ್ಷಣಾ ಪಡೆಯ ಸಭೆ ನಡೆಸಿದ ಅವರು, ಜಿಲ್ಲೆಯಲ್ಲಿ ಕೆರೆಗಳ ಸಂರಕ್ಷಣೆಯಾಗಬೇಕಿದೆ. ಈ ನಿಟ್ಟಿನಲ್ಲಿ ಕೆರೆಗಳ ಸರ್ವೆ ನಡೆಸಿ, ಒತ್ತುವರಿ ತೆರವುಗೊಳಿಸಿ ವರದಿ ನೀಡುವಂತೆ ತಿಳಿಸಿದರು.

ಗ್ರಾಮೀಣ ಭಾಗದಲ್ಲಿ ಕೃಷಿ ಮತ್ತು ಜಾನುವಾರುಗಳಿಗೆ ಕೆರೆಗಳೇ ಆಸರೆ. ಬೇಸಿಗೆಯಲ್ಲಿ ಜಾನುವಾರುಗಳಿಗೆ ನೀರಿನ ಕೊರತೆಯುಂಟಾಗಬಾರದು. ಈ ನಿಟ್ಟಿನಲ್ಲಿ ಕೆರೆಗಳ ಸಂರಕ್ಷಣೆ ಅಗತ್ಯವಾಗಿದ್ದು, ಒತ್ತುವರಿ ತೆರವುಗೊಳಿಸಿ ಕೆರೆಗಳನ್ನು ಉತ್ತಮ ಸ್ಥಿತಿಯಲ್ಲಿರುವಂತೆ ಕಾಪಾಡಿಕೊಳ್ಳಬೇಕು ಜಿಲ್ಲೆಯ ಎಲ್ಲಾ ತಾಲೂಕಿನ ತಹಶೀಲ್ದಾರರು ಒಂದು ವಾರದೊಳಗೆ ಕೆರೆ ಒತ್ತುವರಿ ತೆರವುಗೊಳಿಸಬೇಕು. ಸರ್ವೆ ಇಲಾಖೆ ಅಧಿಕಾರಿಗಳು ಎಲ್ಲಾ ಕೆರೆಗಳ ಸರ್ವೆಗಳನ್ನು ಕೂಡಲೇ ಮಾಡಿ ದಾಖಲೀಕರಣ ಮಾಡುವಂತೆ ಸೂಚಿಸಿದರು.

**ಶುದ್ಧತೆ ಪರಿಶೀಲನೆಯಾಗಬೇಕು:** ಪರಿಸರ ಸಂರಕ್ಷಣೆ ಇಲಾಖೆಯ ಅಧಿಕಾರಿಗಳು ಕೆರೆಗಳಿಗೆ ಭೇಟಿ ನೀಡಿ ಕೆರೆ ನೀರಿನ ಶುದ್ಧತೆ ಬಗ್ಗೆ ಮತ್ತು ಅಲ್ಲಿನ ನೈರ್ಮಲ್ಯ ಕಾಪಾಡಿಕೊಳ್ಳುವ ಬಗ್ಗೆ ಸೂಕ್ತ ಕ್ರಮ ವಹಿಸಬೇಕು. ಮೈಸೂರು ನಗರದ ಎಲ್ಲಾ ಕೆರೆಗಳು ಶುದ್ಧೀಕರಣಗೊಳ್ಳಲು ಸೂಕ್ತ ಕ್ರಮ ಕೈಗೊಳ್ಳಬೇಕು. ಹಾಗೆಯೇ ಕಾರ್ಖಾನೆಗಳಿಂದ ಮತ್ತು ಇನ್ನಿತರ ಮೂಲಗಳಿಂದ ಕೆರೆಗಳಿಗೆ ಅಶುದ್ಧ ನೀರು ಸೇರುತ್ತಿದ್ದಲ್ಲಿ ಅದನ್ನು ತಪ್ಪಿಸಲು ಕೂಡಲೇ ಕ್ರಮ ವಹಿಸಬೇಕೆಂದು ಹೇಳಿದರು. ಸಭೆಯಲ್ಲಿ ತಹಶೀಲ್ದಾರರು, ಪರಿಸರ ಇಲಾಖೆ, ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳು ಮತ್ತು ಅಧಿಕಾರೇತರ ಸದಸ್ಯರು ಉಪಸ್ಥಿತರಿದ್ದರು.

## ಮಹಿಳಾ ಮೀಸಲಾತಿ ಜಾರಿಗೆ ಆಗ್ರಹಿಸಿ ಮಹಿಳಾ ಕಾಂಗ್ರೆಸ್ಸಿಗರ ಪ್ರತಿಭಟನೆ

ಮೈಸೂರು, ಏ.23(ಎಂಟಿವೈ)– ಮಹಿಳಾ ಮೀಸಲಾತಿ ಕೂಡಲೇ ಜಾರಿಗೊಳಿಸಬೇಕೆಂದು ಆಗ್ರಹಿಸಿ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ದಾಸಪ್ಪ ವೃತ್ತದ ಬಳಿಯಿರುವ ಇಂದಿರಾಗಾಂಧಿ ಕಾಂಗ್ರೆಸ್ ಭವನದ ಬಳಿ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿ, ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಮಹಿಳಾ ಕಾಂಗ್ರೆಸ್ ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ತ್ರಿವೇಣಿ ಮಾತನಾಡಿ, ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡಲು 2010ರಲ್ಲಿ ಯುಪಿಎ ಸರ್ಕಾರ ಬಿಲ್ ಪಾಸ್ ಮಾಡಿತ್ತು. ಆದರೆ, ಆ ಬಿಲ್ ಅನ್ನು ಜಾರಿಗೊಳಿಸದೇ ಮಹಿಳೆಯರಿಗೆ ವಂಚಿಸಲಾಗುತ್ತಿದೆ. 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಬಿಜೆಪಿ ಮಹಿಳಾ ಮೀಸಲಾತಿ ಜಾರಿಗೊಳಿಸುವ ಭರವಸೆ ನೀಡಿತ್ತು. ಆದರೆ ಇದುವರೆಗೂ ಮಹಿಳಾ ಮೀಸಲಾತಿ ಜಾರಿಗೊಳಿಸಿಲ್ಲ.




ಮೈಸೂರಿನ ಕಾಂಗ್ರೆಸ್ ಭವನದ ಮುಂದೆ ಮಹಿಳಾ ಮೀಸಲಾತಿ ಜಾರಿಗೊಳಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಗುರುವಾರ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಇದೀಗ ಚುನಾವಣಾ ಕಾರಣಕ್ಕಾಗಿ ಮಹಿಳಾ ಮೀಸಲಾತಿ ಜಾರಿಗೆ ತರುವ ಹುಸಿ ಮಾತಿಗೆ ಕಾಂಗ್ರೆಸ್ ಮೀಸಲಾತಿ ಜಾರಿಗೆ ವಿರೋಧ ಮಾಡಿದೆ ಎಂದರು.

ಕೇವಲ ಮಹಿಳಾ ಮೀಸಲಾತಿ ಜಾರಿಗೆ ತಂದಿದ್ದರೆ ಸ್ವಾಗತಿಸುತ್ತಿದ್ದೆವು. ಆದರೆ, ಬಿಜೆಪಿ ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆಗೆ ಮುಂದಾಗಿದೆ. ಇದರಿಂದ ಉತ್ತರ ಭಾರತದಲ್ಲಿ ಎಂದಿನಂತೆ ಹೆಚ್ಚಿನ ಕ್ಷೇತ್ರಗಳು ಮಾರ್ಪಾಡಾಗಿ ದಕ್ಷಿಣ ಭಾರತಕ್ಕೆ ಭಾರೀ ಅನ್ಯಾಯ ಆಗಲಿದೆ. ಈ ಹಿನ್ನೆಲೆಯಲ್ಲಿ ಕ್ಷೇತ್ರ ಮರು ವಿಂಗಡಣೆಗೆ ನಮ್ಮ ವಿರೋಧವಿದೆ. ಒಬಿಸಿ ಮಹಿಳಾ ಮೀಸಲಾತಿ ಪ್ರತ್ಯೇಕ ಮೀಸಲಾತಿ ಆಗಬೇಕು. ಜನಗಣತಿ ನಂತರ ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆ ಮಾಡಬೇಕು. ಇದೆಲ್ಲವನ್ನು ಮರೆಮಾಚಿ ಬಿಜೆಪಿ ಇದರಲ್ಲೂ ರಾಜಕೀಯ ಮಾಡುತ್ತಿರುವುದನ್ನು ಖಂಡಿಸಿ ಪ್ರತಿಭಟಿಸುತ್ತಿರುವುದಾಗಿ ಹೇಳಿದರು.

ಮೈಸೂರು ಜಿಲ್ಲಾ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಡಿ.ಪ್ರೇಮಾ ಮಾತನಾಡಿ, ಕೇಂದ್ರ ಸರ್ಕಾರದ ಮಹಿಳಾ ಮೀಸಲಾತಿ ಕಪಟ ನಾಟಕವನ್ನು ಬಯಲು ಮಾಡಲು ಜಿಲ್ಲಾ ಮಹಿಳಾ ಕಾಂಗ್ರೆಸ್‌ನಿಂದ ಪ್ರತಿಭಟಿಸಲಾಯಿತು. 2023ರಿಂದಲೂ ಮಹಿಳಾ ಮೀಸಲಾತಿ ಜಾರಿ ಮಾಡದೇ ಬಿಜೆಪಿ ನಾಟಕ ಮಾಡುತ್ತಿದೆ. ಈ ನಡುವೆ ಕ್ಷೇತ್ರ ವಿಂಗಡಣೆಯ ನಾಟಕ ಆಗುತ್ತಿದೆ. ಹೀಗಾಗಿ ಕೇಂದ್ರ ಬಿಜೆಪಿ ಈ ಕೂಡಲೇ ಮಹಿಳಾ ಮೀಸಲು ಜಾರಿಗೊಳಿಸಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮಹಿಳಾ ಕಾಂಗ್ರೆಸ್ ರಾಜ್ಯ ಕಾರ್ಯದರ್ಶಿ ಪರ್ವೀನ್ ತಾಜ್, ಸಹಕಾರ ಘಟಕದ ಮಹಿಳಾ ಅಧ್ಯಕ್ಷೆ ತಾರಾ, ಮೈಸೂರು ಗ್ರಾಮಾಂತರ ಜಿಲ್ಲಾ ಕಾರ್ಯದರ್ಶಿ ಶ್ರೀಲಕ್ಷ್ಮಿ, ಜಿಲ್ಲೆಯ ವಿವಿಧ ಬ್ಲಾಕ್ ಹಾಗೂ ಮಹಿಳಾ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಸಂಸ್ಥಾಪಕರು
ಶ್ರೀ ಗುರಿಕಾರ್ ಮರಿಮಲ್ಲಪ್ಪನವರು

# ಮರಿಮಲ್ಲಪ್ಪ ಪ್ರೌಢಶಾಲೆ

ಸೀತಾವಿಲಾಸ ರಸ್ತೆ, ಮೈಸೂರು–24. ಫೋನ್: 2423939



ಭಾಗ್ಯಶಿಲ್ಪಿ
ಶ್ರೀ ಕೆ.ಎನ್. ಶಿವಲಿಂಗಯ್ಯನವರು



ಮೇಘನ ಬಿ.
619 / 625

ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ
೧೫೦ ರ ಸಂಭ್ರಮ

## 2025–26ನೇ ಸಾಲಿನ ಎಸ್.ಎಸ್.ಎಲ್.ಸಿ. ಫಲಿತಾಂಶ

ಅತ್ಯುನ್ನತ ಶ್ರೇಣಿಗಳು 118



ಅಕ್ಷತ ಜಿ.
618 / 625

## 150ನೇ ಸಂವತ್ಸರ – ಸಾಧನೆ ನಿರಂತರ....



ಸಿಂಚನ ಆರ್. 617 | ಸಿಂಚನ ಎಸ್. 613 | ನಂದನ್‌ಕುಮಾರ್ ಎಂ. 608 | ಶ್ವೇತ ಎಂ. 607 | ಅಭಿನವ್ 603 | ಸಹಲ ಫಾತಿಮಾ 603 | ನೇಹ ಸಿ. ಶ್ರಾಫ್ 601 | ಪುಷ್ಕಲ್ ರಾಜ್ ಎನ್.ಎ. 601 | ಹಿರಣ್ಮಯಿ ಟಿ. 600 | ಪೂರ್ವಾಣಿ ಶಿವ 600




ಶ್ರೀಧರ್ ಕೌಶಿಕ್ ಎನ್. – 599 | ದೀಕ್ಷಾ ಸಾನ್ವಿ ಕೆ. – 598 | ಲತಾಕ್ಷ ಕನ್ವರ್ 597 | ನವ್ಯ ಎಲ್.ವೈ. 596 | ಶ್ರೇಯಸ್ ಆರ್. 596 | ಸುರಭಿ ಎಸ್. 595 | ಯಜ್ನೇಶ್ ಎಲ್. 595 | ತನುಶ್ರೀ ಎಸ್. 593 | ವರ್ಷ ವಿ. 593 | ತನುಶ್ರೀ ಎಂ. 592 | ವರ್ಣಿತ್ ಎಸ್. 592 | ಸೈಯದ್ ಮೊಹಮ್ಮದ್ ಫನಿ – 591 | ಅಮಿತ್ ಎಸ್. 590



ಯಶಸ್ ಕೆ.ಜೆ. 590 | ಶಮಿತ ಎಸ್. 589 | ಮನೋಜ್ ಎಂ. ಪಾಟೀಲ್ – 586 | ಮಿಥುನ್ ಕುಮಾರ್ ಎಸ್. – 586 | ಅಕ್ಷತ ಎಂ.ಎನ್. 585 | ಲ್ಯಾನ್ಸಿ ಡಯಾಸ್ 585 | ಸ್ಪರ್ಶ ಆರ್.ಸಿ. 585 | ಯಶ್ವಂತ್ ಎಂ.ಆರ್. 585 | ವಿನುತ ಬಿ. 584 | ಶ್ರೇಯಾ ಜಿ. 583 | ಯತಿರಾಜ್ ಡಿ. ಗೌಡ – 582 | ಅಜಿತ್ ಎಸ್. 581 | ಹಂಸ ಎಸ್. 581




ಚಿನ್ಮಯಿ ಸಿ.ಆರ್. 580 | ಹೃತ್ವಿಕ್ ಎಸ್. 580 | ಯುವರಾಜ್ ಪಿ. 579 | ಅಯನ್ ಅಹ್ಮದ್ 578 | ಜೀವಿತ 578 | ಪುನೀತ್ ಡಿ.ಜೆ. 578 | ಗಣೇಶ್‌ರಾವ್ ಎಂ. – 577 | ತರುಣ್ ಜಿ. 577 | ಲಾಂಚನ್ ಆರ್. ಪಂಡಿತ್ – 575 | ಅನಂತಲಕ್ಷ್ಮಿ ಆರ್. – 573 | ಲೇಖನ ಪಿ.ಎಸ್. 573 | ವರ್ಣಿತಾಶ್ರೀ ಎಸ್. 571 | ತಿಲಕ್ ಆರ್.ವಿ. 570




ವರ್ಷ ಜಿ. 570 | ಹರ್ಷಿತ ಎಂ. 569 | ಸುಬ್ರಹ್ಮಣ್ಯ ಕಶ್ಯಪ್ ಟಿ.ಯು. – 569 | ಪ್ರಜ್ವಲ್ ಕೆ. 566 | ಕಾವ್ಯಶ್ರೀ ಎನ್. 563 | ಸ್ವಪ್ನ 562 | ದೀಕ್ಷಿತ್ ಎಂ.ಆರ್. 560 | ನಂಜುಂಡಸ್ವಾಮಿ ಆರ್. – 560 | ನಿಮ್ರಹ ಫರ್ಹಿನ್ ಎ.ಕೆ. – 560 | ಸಂಧ್ಯ ಎಂ. 560 | ತುಳಸಿ 559 | ರಿತ್ವಿಕ್ ರಾಜ್ ಕೊಂಡಯ್ಯ–558 | ಚಿನ್ಮಯ್‌ಗೌಡ ಕೆ.ಎಂ.– 557 | ಯಶ್ವಂತ್ ಎಂ. 557



ಆರ್. ಶಾಲಿನಿ 556 | ನಂದಿತ 555 | ಯಶ್ವಂತ್ ಡಿ. ಶೆಟ್ಟಿ – 555 | ಪ್ರಕಾಶ್ ಆರ್. 554 | ರಾಹುಲ್ ಕುಮಾರ್ ದೇವಾಸಿ – 554 | ಸಿಂಚನ ಎನ್. 554 | ವರ್ಷ ಬಿ. 554 | ಗೌತಮ್ ಜೆ. 553 | ಜೀವನ್ ಎಸ್. 553 | ಗಾನವಿ ಎನ್. 552 | ರಕ್ಷ ಎನ್. 552 | ತನಿಷಾ ಎಂ. 552 | ಬಾಲಕೃಷ್ಣ ಹೆಚ್.ಆರ್.–551 | ಮನೋಜ್ ಭರಣಿ – 551



ತನುಶ್ರೀ ಸಿ. 551 | ವಿಶಾಲ್ ಎನ್. 551 | ಪುನೀತ್ ಎನ್. 550 | ವಿಶ್ರುತ ಎಸ್. 549 | ರಾಹುಲ್ ಸಿಂಗ್ 547 | ವಿಸ್ಮಯಿ ಆರ್. 546 | ಮೊಹಮ್ಮದ್ ಇದ್ರಿಸ್ ಬೇಗ್–545 | ಮೊಹಮದ್ ಜೈದ್ 545 | ರಿಶಿಕಾ ಎಸ್. 545 | ಶರಣ್ಯ ಸಿ. 545 | ತರುಣ್ ಕೆ. 545 | ಮೊಹಮ್ಮದ್ ಐಸಾಖ್ ಅಹಮದ್– 544 | ಪ್ರಾಪ್ತಿ ಎಸ್.ಬಿ. 544 | ತ್ರಿಶ್ನಾ ಮೆತ್ಯಾ 544



ಮೊಹಮದ್ ಅಬ್ದುಲ್ಲ – 539 | ಹರಿಕೃಷ್ಣ ಎನ್. 538 | ಸಂಜನ ಸಿ.ಆರ್. 538 | ದಿಗಂತ್ ವಿ. 535 | ಹರ್ಷಿಣಿ ಪಿ. 535 | ಸಾರ್ಥಕ್ ಅಜಯ್ ತೋರಟ್ – 535 | ವಿಜಯ್ ಕುಮಾರ್ ಎಂ. – 535 | ಸುಹಾಸ್ ಕೆ.ಸಿ. 534 | ಪ್ರತಿಭಾ 533 | ತೃಪ್ತಿ ಎಂ.ಎ. 533 | ಭುವನೇಶ್ವರಿ ಎಸ್. 532 | ಧನುಷ್ ಎಸ್. 532 | ಕುಶಾಲ್ ಪಿ.ಎಸ್. 532 | ನಿಶ್ಚಲ್ ದಯಾನಂದ್ ಎಸ್. – 532



ವಿಕಾಸ್ 600 | ನೇಹ ಎಂ. 589 | ಹರ್ಷಿತ್ ಎಂ. 587 | ಪುಷ್ಕಲ್ ಸಿ. 570 | ಶ್ರೇಯಾ ವಿ. 566 | ಚೈತನ್ಯ ಎನ್. 556



ಆರ್. ದುಶ್ಯಂತ್ 552 | ಭುವನ ಕೆ. 546 | ಲಾವಣ್ಯ ಮಂಜುನಾಥ್ 545 | ಸುಹಾಸ್ ಎಂ. 541 | ಚಿರಾಗ್ ಎಸ್.ಎಲ್. 533

ಸಾಧಕ ವಿದ್ಯಾರ್ಥಿಗಳಿಗೆ, ಬೋಧಕ ಬೋಧಕೇತರ ವೃಂದ
ಹಾಗೂ ಪೋಷಕರಿಗೆ ಅಭಿನಂದನೆ ಸಲ್ಲಿಸುವ

### ಗೌ. ಕಾರ್ಯದರ್ಶಿಗಳು ಹಾಗೂ ಆಡಳಿತ ಮಂಡಳಿಯ ಸದಸ್ಯರು



ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ ಎಂ.ಎ.
ಗೌರವ ಕಾರ್ಯದರ್ಶಿಗಳು



ಶ್ರೀಮತಿ ಎಸ್. ಮಮತ, ಮುಖ್ಯೋಪಾಧ್ಯಾಯಿನಿಯವರು, ಮರಿಮಲ್ಲಪ್ಪ ಪ್ರೌಢಶಾಲೆ ಮೈಸೂರು | ಶ್ರೀಮತಿ ಮಂಗಳ ಮುದ್ದು ಮಾದಪ್ಪ, ಶೈಕ್ಷಣಿಕ ಅಧಿಕಾರಿಗಳು, ಮರಿಮಲ್ಲಪ್ಪ ಪ್ರೌಢಶಾಲೆ ಮೈಸೂರು | ಶ್ರೀ ಹೆಚ್. ಎಸ್. ಮಹೇಶ್, ಸಹ ಮುಖ್ಯೋಪಾಧ್ಯಾಯರು, ಮರಿಮಲ್ಲಪ್ಪ ಪ್ರೌಢಶಾಲೆ ಮೈಸೂರು | ಶ್ರೀಮತಿ ಸುಬ್ಬಮ್ಮ .ಎನ್, ಮುಖ್ಯೋಪಾಧ್ಯಾಯಿನಿ

### 8ನೇ ತರಗತಿಯ ಪ್ರವೇಶಕ್ಕಾಗಿ ಸಂಪರ್ಕಿಸಿ

☏ : 9916706215, 9449084886

# ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದಲ್ಲಿ ದಾಖಲೆಯ ಶೇ.91ರಷ್ಟು ಮತದಾನ



ಪಶ್ಚಿಮ ಬಂಗಾಳದಲ್ಲಿ ಮತ ಹಾಕಲು ಸಾಲಾಗಿ ನಿಂತಿರುವ ಮಹಿಳೆಯರು

ಕೊಲ್ಕತ್ತಾ, ಏ.23– ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದ ಮತದಾನ ಮುಕ್ತಾಯವಾಗಿದೆ. ಈ ಬಾರಿ ಶೇ.91ಕ್ಕಿಂತ ಹೆಚ್ಚು ಮತದಾನವಾಗಿದೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ 152 ಕ್ಷೇತ್ರಗಳಲ್ಲಿ ಇಂದು ಸಂಜೆ 6 ಗಂಟೆಗೆ ಮತದಾನ ಮುಕ್ತಾಯ ಗೊಂಡಿದೆ. ನಿಗದಿತ ಮುಕ್ತಾಯದ ಮೊದಲು ಮತದಾನ ಕೇಂದ್ರಗಳನ್ನು ತಲುಪಿದ ಮತದಾರರಿಗೆ ತಮ್ಮ ಮತದಾನವನ್ನು ಚಲಾಯಿಸಲು ಅವಕಾಶ ನೀಡಲಾಗಿತ್ತು.

ಚುನಾವಣಾ ಆಯೋಗದ ಪ್ರಕಾರ, 3.60 ಕೋಟಿ ಮತದಾರರಲ್ಲಿ ಶೇ. 91.46ರಷ್ಟು ಜನರು ಸಂಜೆ 6 ಗಂಟೆಯವರೆಗೆ ಮತ ಚಲಾಯಿಸಿದ್ದಾರೆ. ರಾಜ್ಯದ ಇತ್ತೀಚಿನ ಚುನಾವಣಾ ಇತಿಹಾಸದಲ್ಲಿ ಇಂದಿನ ಮತದಾನ ಅತ್ಯಧಿಕವಾಗಿದೆ.

294 ಬಲದ ಪಶ್ಚಿಮ ಬಂಗಾಳ ವಿಧಾನಸಭೆಯ 152 ಕ್ಷೇತ್ರಗಳಲ್ಲಿ 167 ಮಹಿಳೆಯರು ಸೇರಿದಂತೆ 1,478 ಅಭ್ಯರ್ಥಿಗಳ ಚುನಾವಣಾ ಭವಿಷ್ಯವನ್ನು ನಿರ್ಧರಿಸಲು ಬಿಗಿ ಭದ್ರತೆಯ ನಡುವೆ ಇಂದು ಬೆಳಿಗ್ಗೆ 7 ಗಂಟೆಗೆ 16 ಜಿಲ್ಲೆಗಳಲ್ಲಿ ಮತದಾನ ಪ್ರಾರಂಭವಾಯಿತು. ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಬಿಜೆಪಿ ನಡುವೆ ಪೈಪೋಟಿ ನಡೆದಿದೆ. ಇಂದು ಸಂಜೆ 6 ಗಂಟೆಗೆ ಪಶ್ಚಿಮ ಬಂಗಾಳದ ಎಲ್ಲಾ 152 ವಿಧಾನಸಭಾ ಕ್ಷೇತ್ರಗಳಲ್ಲಿ ಮೊದಲ ಹಂತದ ಮತದಾನ ಅಧಿಕೃತವಾಗಿ ಕೊನೆಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಿಗದಿತ ಮುಕ್ತಾಯದ ಸಮಯದಲ್ಲಿ ಇನ್ನೂ ಸರತಿ ಸಾಲಿನಲ್ಲಿ ನಿಂತಿದ್ದವರಿಗೆ ಮತ ಚಲಾಯಿಸಲು ಅವಕಾಶ ನೀಡಲಾಗಿದೆ. ಇದರಿಂದಾಗಿ ಮತಗಟ್ಟೆಯಲ್ಲಿ ಹಾಜರಿರುವ ಪ್ರತಿಯೊಬ್ಬ ಅರ್ಹ ಮತದಾರರೂ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದ್ದಾರೆ.

2026ರ ಮತದಾನವು 2011ರ ದಾಖಲೆಯನ್ನು ಮೀರಿಸಿದೆ. 2011ರಲ್ಲಿ, ಶೇ.84ರಷ್ಟು ಮತದಾನವಾಗಿತ್ತು 2016ರಲ್ಲಿ ಶೇ.82.66ರಷ್ಟು ಮತದಾನವಾಗಿತ್ತು. 2021ರಲ್ಲಿ, ಶೇ. 81.56ರಷ್ಟು ಮತದಾನವಾಗಿತ್ತು. ಈ ಬಾರಿ ಶೇ.91.46ರಷ್ಟು ಮತದಾನವಾಗಿದೆ.

# 74 ವರ್ಷದ ದಾಖಲೆ ಮುರಿದ ತಮಿಳುನಾಡು; ಈ ಬಾರಿ ಶೇ.84ರಷ್ಟು ಮತದಾನ



ಮತಗಟ್ಟೆಯಲ್ಲಿ ಮತ ಚಲಾಯಿಸುತ್ತಿರುವ ತಮಿಳುನಾಡಿನ ಮತದಾರರು

ಚೆನ್ನೈ, ಏ.23– ತಮಿಳುನಾಡು ವಿಧಾನಸಭಾ ಚುನಾವಣೆ ಇಂದು ಸಂಜೆ 6 ಗಂಟೆಗೆ ಮುಕ್ತಾಯವಾಯಿತು. ಅಧಿಕಾರಿಗಳು ಮುಕ್ತಾಯದ ಸಮಯಕ್ಕಿಂತ ಮೊದಲು ಮತಗಟ್ಟೆಗಳನ್ನು ತಲುಪಿದ ಮತದಾರರಿಗೆ ತಮ್ಮ ಮತಪತ್ರಗಳನ್ನು ಚಲಾಯಿಸಲು ಅವಕಾಶ ನೀಡಿದರು. ಇದೇ ಮೊದಲ ಬಾರಿಗೆ ದಾಖಲೆಯ ಶೇ. 84ರಷ್ಟು ಮತದಾನ ದಾಖಲಾಗಿದೆ. 5.73 ಕೋಟಿ ಅರ್ಹ ಮತದಾರರಲ್ಲಿ ಸುಮಾರು ಶೇ.84ರಷ್ಟು ಜನರು ತಮ್ಮ ಮತದಾನ ಮಾಡಿದರು. 75,064 ಮತಗಟ್ಟೆಗಳಲ್ಲಿ ಮತದಾನ ನಡೆಯಿತು. 4,023 ಅಭ್ಯರ್ಥಿಗಳು ಇಂದಿನ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. 74 ವರ್ಷಗಳ ಬಳಿಕ ತಮಿಳುನಾಡಿನಲ್ಲಿ ಇಷ್ಟು ದೊಡ್ಡ ಪ್ರಮಾಣದ ಮತದಾನ ನಡೆದಿದೆ.

ತಮಿಳುನಾಡಿನ 8 ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ 30 ಜಿಲ್ಲೆಗಳಲ್ಲಿ ಶೇ.80ಕ್ಕಿಂತ ಹೆಚ್ಚು ಮತದಾನ ನಡೆದಿದೆ. ತಮಿಳುನಾಡು ರಾಜ್ಯದ ಪಶ್ಚಿಮ ಜಿಲ್ಲೆಗಳು ರಾಜ್ಯದ ಇತರ ಭಾಗಗಳಿಗಿಂತ ಹೆಚ್ಚಿನ ಮತಗಳನ್ನು ದಾಖಲಿಸಿವೆ. ಕರೂರ್‌ನಲ್ಲಿ ಗರಿಷ್ಠ ಶೇ.89ರಷ್ಟು ಮತಗಳು ದಾಖಲಾಗಿವೆ. 16 ಕ್ಷೇತ್ರಗಳ ಪೈಕಿ ಚೆನ್ನೈ ಜಿಲ್ಲೆಯಲ್ಲಿ ಶೇ. 83.44ರಷ್ಟು ಮತಗಳು ಮತ್ತು 12 ಕ್ಷೇತ್ರಗಳಲ್ಲಿ ಶೇ.80ಕ್ಕಿಂತ ಹೆಚ್ಚು ಮತಗಳನ್ನು ಚಲಾಯಿಸಲಾಗಿದೆ.

ತಮಿಳುನಾಡಿನ ಎಲ್ಲಾ 234 ಕ್ಷೇತ್ರಗಳಿಗೆ ಇಂದು ಒಂದೇ ಹಂತದಲ್ಲಿ ಚುನಾವಣೆ ನಡೆದಿದ್ದು, ರಾಜ್ಯದಾದ್ಯಂತ ಜನರು ಬೆಳಗಿನ ಜಾವದಿಂದಲೇ ಹೆಚ್ಚಿನ ಉತ್ಸಾಹದಿಂದ ಮತ ಚಲಾಯಿಸಿದ್ದಾರೆ. ತಮಿಳುನಾಡಿನಲ್ಲಿ ಈ ಹಿಂದೆ 2011ರ ವಿಧಾನಸಭಾ ಚುನಾವಣೆಯಲ್ಲಿ ಶೇ.78.29ರಷ್ಟು ಮತದಾನ ದಾಖಲಾಗಿತ್ತು. ಇಂದಿನ ಶೇ.84ರಷ್ಟು ಮತದಾನವು ಆ ದಾಖಲೆಯನ್ನು ಮೀರಿಸಿದೆ. ಇಂದು ಸರಿಸುಮಾರು 4.71 ಕೋಟಿ ಜನರು ತಮ್ಮ ಮತದಾನವನ್ನು ಚಲಾಯಿಸಿದ್ದಾರೆ.

ಕರೂರು ಜಿಲ್ಲೆಯಲ್ಲಿ ಶೇ.89ರಷ್ಟು ಮತದಾನವಾಗಿದ್ದು, ರಾಜ್ಯದಲ್ಲಿ ಅತಿ ಹೆಚ್ಚು ಮತದಾನವಾಗಿದೆ. ಚೆನ್ನೈ ಜಿಲ್ಲೆಯಲ್ಲಿ ಶೇ.81.34ರಷ್ಟು ಮತದಾನವಾಗಿದ್ದರೆ, ಕನ್ಯಾಕುಮಾರಿಯಲ್ಲಿ ಶೇ.73.44ರಷ್ಟು ಮತದಾನವಾಗಿದೆ. ಎಡಪ್ಪಾಡಿ ಪಳನಿಸ್ವಾಮಿ ಅವರ ಕ್ಷೇತ್ರ ಎಡಪ್ಪಾಡಿಯಲ್ಲಿ ಶೇ.89.09ರಷ್ಟು ಮತದಾನ ದಾಖಲಾಗಿದೆ. ದಳಪತಿ ವಿಜಯ್ ಅವರ ಪೆರಂಬೂರ್ ಕ್ಷೇತ್ರದಲ್ಲಿ ಶೇ.86.72ರಷ್ಟು ಮತದಾನವಾಗಿದ್ದರೆ, ಅವರ ಇನ್ನೊಂದು ಕ್ಷೇತ್ರವಾದ ತಿರುಚ್ಚಿ ಪೂರ್ವದಲ್ಲಿ ಶೇ.79.32ರಷ್ಟು ಮತದಾನವಾಗಿದೆ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಕೊಳತ್ತೂರು ಕ್ಷೇತ್ರದಲ್ಲಿ ಶೇ.83.58ರಷ್ಟು ಮತ್ತು ಸೀಮನ್ ಅವರ ಕಾರೈಕುಡಿ ಕ್ಷೇತ್ರದಲ್ಲಿ ಶೇ.71.88ರಷ್ಟು ಮತದಾನ ದಾಖಲಾಗಿದೆ.

# ರಂಗರಾವ್ ಸ್ಮಾರಕ ಅಂಗವಿಕಲರ ಶಾಲೆಗೆ ಶೇ.100ರಷ್ಟು ಫಲಿತಾಂಶ; ಮಾನಸ 617 ಅಂಕ ಗಳಿಕೆ



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾದ ರಂಗರಾವ್ ಸ್ಮಾರಕ ಅಂಗವಿಕಲರ ಶಾಲೆಯ ಮಾನಸ, ಚಂದನ, ತನುಶ್ರೀ ಎಂ.ಗೌಡ, ಹೆಚ್.ವಿ.ಪ್ರಿಯ, ರಾಧ, ಸುವರ್ಣ(ನಿಂತಿರುವವರು ಎಡದಿಂದ), ಪ್ರಿಯ, ಹರ್ಷಿತ, ಗಾಯತ್ರಿ ಹಾಗೂ ಗಾಯತ್ರಿ ಫಕೀರಪ್ಪ ಮೇಟಿ ಚಿತ್ರದಲ್ಲಿದ್ದಾರೆ.

ಮೈಸೂರು, ಏ.23– ಮೈಸೂರಿನ ಮೇಟಗಳ್ಳಿಯಲ್ಲಿರುವ ರಂಗರಾವ್ ಸ್ಮಾರಕ ಅಂಗವಿಕಲರ ಶಾಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಸಾಧಿಸಿದೆ.

ಶಾಲೆಯ ವಿದ್ಯಾರ್ಥಿನಿ ಮಾನಸ ಅವರು 625ಕ್ಕೆ 617(ಶೇ.98.72) ಅಂಕಗಳೊಂದಿಗೆ ಶಾಲೆಯ ಟಾಪರ್ ಆಗಿದ್ದಾರೆ. ನಂಜನಗೂಡು ತಾಲೂಕು ಮಾಕನಪುರದ ದಿವಂಗತ ಎಂ.ಸಿ. ಮಹೇಶ್ ಮತ್ತು ಶ್ರೀಮತಿ ಸುಜಾತ ದಂಪತಿಯ ಅವರ ಪುತ್ರಿಯಾದ ಇವರು, ಬಡತನದ ನಡುವೆಯೂ ಅವರು 2021ರಲ್ಲಿ ತಮ್ಮ 6ನೇ ತರಗತಿಗೆ ಆರ್‌ಎಂಎಸ್‌ಡಿಗೆ ಸೇರಿ, ಅಂದಿನಿಂದ ಗಮನಾರ್ಹ ಶೈಕ್ಷಣಿಕ ಶ್ರೇಷ್ಠತೆಯನ್ನು ಕಾಯ್ದುಕೊಂಡಿದ್ದಾರೆ. ಶಿಕ್ಷಣದ ಜೊತೆಗೆ ಅಂಧರ ಕ್ರಿಕೆಟ್, ಚೆಸ್ ಮತ್ತು ರಿಲೇ, ನೃತ್ಯ, ಓದು ಇನ್ನಿತರ ಪಠ್ಯೇತರ ಚಟುವಟಿಕೆಗಳಲ್ಲೂ ಗಮನಾರ್ಹ ಸಾಧನೆ ಮಾಡಿದ್ದಾರೆ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮೂಲಕ ನಾಗರಿಕ ಸೇವೆಗೆ ಸೇರಬೇಕೆಂಬ ಆಕಾಂಕ್ಷೆ ಹೊಂದಿದ್ದಾರೆ.

ಹರ್ಷಿತಾ 556(ಶೇ.89), ಹೆಚ್.ವಿ.ಪ್ರಿಯಾ 539(ಶೇ.86), ತನುಶ್ರೀ ಗೌಡ 533 (ಶೇ.85), ಪ್ರಿಯಾ 501(ಶೇ.80), ಚಂದನ 463 (ಶೇ.74), ಗಾಯತ್ರಿ 493(ಶೇ.79), ಗಾಯತ್ರಿ ಫಕೀರಪ್ಪ ಮೇಟಿ 462(ಶೇ.74), ರಾಧಾ 429(ಶೇ.69) ಹಾಗೂ ಸುವರ್ಣ 356(ಶೇ.57) ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ.

## ಮಾನ್ವಿಗೆ 617 ಅಂಕ



ಮೈಸೂರು, ಏ.23– ನಗರದ ನಿರ್ಮಲಾ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿ ಎ.ಎಸ್.ಮಾನ್ವಿ 625ಕ್ಕೆ 617(ಶೇ.98.72) ಅಂಕ ಪಡೆದಿದ್ದಾಳೆ.

ಕನ್ನಡದಲ್ಲಿ 124, ಹಿಂದಿ, ವಿಜ್ಞಾನ ಹಾಗೂ ಸಮಾಜ ವಿಜ್ಞಾನದಲ್ಲಿ ಶೇ.100, ಇಂಗ್ಲಿಷ್ 98 ಹಾಗೂ ಗಣಿತದಲ್ಲಿ 95 ಅಂಕ ಗಳಿಸಿ, ಎ+ ಗ್ರೇಡ್‌ನೊಂದಿಗೆ ಉತ್ತೀರ್ಣಳಾಗಿದ್ದಾಳೆ. ಈಕೆ ಮೇಟಗಳ್ಳಿ ಬಿಎಂಶ್ರೀ ನಗರದ ಎ.ಎಸ್.ಸತೀಶ್ ಹಾಗೂ ಸೌಮ್ಯ ದಂಪತಿಯ ಪುತ್ರಿ.

ಇಷ್ಟು ಅಂಕ ಗಳಿಸುತ್ತೇನೆಂಬ ವಿಶ್ವಾಸವಿತ್ತು. ಶಾಲೆಯ ಶಿಕ್ಷಕರು ಹಾಗೂ ನನ್ನ ಪೋಷಕರ ಬೆಂಬಲದಿಂದ ಇದು ಸಾಧ್ಯವಾಗಿದೆ ಎಂದು ಮಾನ್ವಿ ಸಂತಸ ಹಂಚಿಕೊಂಡಿದ್ದಾಳೆ.

# ಬಂಗಾಳದಲ್ಲಿ ಮತದಾನ ವೇಳೆ ಮಾರಾಮಾರಿ; ಬಿಜೆಪಿ ಅಭ್ಯರ್ಥಿಯ ಅಟ್ಟಾಡಿಸಿಕೊಂಡು ಹಲ್ಲೆ



ಪಶ್ಚಿಮ ಬಂಗಾಳ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಅಭ್ಯರ್ಥಿ ಸುವೇಂದು ಸರ್ಕಾರ್ ಮೇಲೆ ಅಟ್ಟಾಡಿಸಿ ಹಲ್ಲೆ ನಡೆಸಲಾಗಿದೆ. ಪೊಲೀಸರ ಸಮ್ಮುಖದಲ್ಲಿ ಟಿಎಂಸಿ ಕಾರ್ಯಕರ್ತರು ಈ ಹಲ್ಲೆ ನಡೆಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಹೀಗಾಗಿ ಕುಮಾರ್‌ಗಂಜ್‌ನಲ್ಲಿ ಮತದಾನದ ವೇಳೆ ಹಿಂಸಾಚಾರದ ಕರಿನೆರಳು ಆವರಿಸಿತ್ತು. ಆ ಪ್ರದೇಶದಲ್ಲಿ ಗಲಭೆ ಆಗಿದೆ ಎಂಬ ವರದಿಗಳ ನಂತರ ಸರ್ಕಾರ್ ಮತಗಟ್ಟೆಯತ್ತ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ.

ಬಿಜೆಪಿ ಅಭ್ಯರ್ಥಿಯನ್ನು ತಡೆದು ಥಳಿಸಲಾಗಿದ್ದು, ತದನಂತರ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪೊಲೀಸರ ಸಮ್ಮುಖದಲ್ಲಿ ಈ ದಾಳಿ ನಡೆದಿದೆ ಎಂದು ಪಕ್ಷ ಹೇಳಿಕೊಂಡಿದೆ.

ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಭಾರತೀಯ ಚುನಾವಣಾ ಆಯೋಗ, ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. ಹಲ್ಲೆಗೆ ಸಂಬಂಧಿಸಿದ ವೀಡಿಯೊ ದೃಶ್ಯಗಳಲ್ಲಿ ಕಂಡುಬರುವ ವ್ಯಕ್ತಿಗಳನ್ನು ಬಂಧಿಸಲು ಆದೇಶಿಸಿದೆ.

ಬಿಜೆಪಿಯ ಮತಗಟ್ಟೆ ಏಜೆಂಟ್ ಅನ್ನು ಟಿಎಂಸಿ ಕಾರ್ಯಕರ್ತರು ಮತಗಟ್ಟೆಗೆ ಪ್ರವೇಶಿಸದಂತೆ ತಡೆದಿದ್ದಾರೆ. ಇದು ಕ್ಷೇತ್ರದಲ್ಲಿ ಉದ್ವಿಗ್ನತೆಯನ್ನು ಹೆಚ್ಚಿಸಿದೆ ಎಂದು ಬಿಜೆಪಿ ಆರೋಪಿಸಿದೆ. ಆದಾಗ್ಯೂ, ಆಡಳಿತಾರೂಢ ಟಿಎಂಸಿ ಆರೋಪಗಳನ್ನು ನಿರಾಕರಿಸಿದೆ.

ಪಶ್ಚಿಮ ಬಂಗಾಳದ 152 ಕ್ಷೇತ್ರಗಳಲ್ಲಿ ಮೊದಲ ಹಂತದ ಮತದಾನದ ವೇಳೆ ಹಲವು ಕಡೆಗಳಲ್ಲಿ ಹಿಂಸಾಚಾರ ಮತ್ತು ಘರ್ಷಣೆಯ ಘಟನೆಗಳು ವರದಿಯಾಗಿವೆ.

## ಸಹೀನಾ ತುಬಾಗೆ ಅತ್ಯುತ್ತಮ ಅಂಕ



ಮೈಸೂರು, ಏ.23– ನಗರದ ಬನ್ನಿಮಂಟಪ ಸೇಂಟ್ ಜೋಸೆಫ್ ಶಾಲೆಯ ವಿದ್ಯಾರ್ಥಿನಿ ಸಾಹೀನಾ ತುಬಾ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳೊಂದಿಗೆ ಉತ್ತೀರ್ಣಳಾಗಿದ್ದಾಳೆ.

ಕನ್ನಡದಲ್ಲಿ 125ಕ್ಕೆ 125 ಅಂಕ, ಇಂಗ್ಲಿಷ್‌ನಲ್ಲಿ 99, ಹಿಂದಿ ಹಾಗೂ ವಿಜ್ಞಾನದಲ್ಲಿ 98, ಸಮಾಜ ವಿಜ್ಞಾನ 95 ಹಾಗೂ ಗಣಿತದಲ್ಲಿ 94 ಸೇರಿ ಒಟ್ಟು 625ಕ್ಕೆ 609(ಶೇ.97.44) ಅಂಕ ಗಳಿಸಿದ್ದಾಳೆ. ಈಕೆ ಪೂಜಾರಿ ಫಿಶ್ ಲ್ಯಾಂಡ್‌ನ ಸಿಬ್ಬಂದಿ, ರಾಜೀವ್‌ನಗರ 2ನೇ ಹಂತದ ನಿವಾಸಿ ನದೀಮ್ ಅಹ್ಮದ್ ಖಾನ್ ಹಾಗೂ ಬದರ್ ಜಹಾನ್ ದಂಪತಿ ಪುತ್ರಿ.

## ಎಸ್‌ಎಸ್‌ಎಲ್‌ಸಿ: 621 ಅಂಕ ಪಡೆದ ಅಪೇಕ್ಷಾ



ಮೈಸೂರು, ಏ.23– ಮೈಸೂರಿನ ಜಾಕಿ ಕ್ವಾಟ್ರರ್ಸ್‌ನ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ಎ.ಪಿ.ಅಪೇಕ್ಷಾ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 621(99.36) ಅಂಕ ಗಳಿಸಿದ್ದಾಳೆ. ಪ್ರಥಮ ಭಾಷೆ ಇಂಗ್ಲಿಷ್‌ನಲ್ಲಿ 124, ಹಿಂದಿ ಹಾಗೂ ಗಣಿತದಲ್ಲಿ ಶೇ.100, ಕನ್ನಡ, ವಿಜ್ಞಾನ ಹಾಗೂ ಸಮಾಜ ವಿಜ್ಞಾನದಲ್ಲಿ ತಲಾ 99 ಅಂಕ ಪಡೆದಿದ್ದಾಳೆ. ಈಕೆ ಕುವೆಂಪುನಗರದ ಎ.ಎ.ಪ್ರಸನ್ನ ಹಾಗೂ ಎ.ಎಂ.ಅನಸೂಯ ದಂಪತಿ ಪುತ್ರಿ.

# ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದ 8ನೇ ವಾರ್ಷಿಕೋತ್ಸವಕ್ಕೆ ಚಾಲನೆ

## ಪಂಡಿತ ಬಾದರಾಯಣಾಚಾರ್ಯರಿಂದ ಗಾಯತ್ರಿ ಚಿಂತನ ವಿಶೇಷ ಪ್ರವಚನ



ಶ್ರೀರಾಮಪುರದಲ್ಲಿರುವ ಉತ್ತರಾದಿ ಮಠದ ಶಾಖೆಯ ಶ್ರೀವೆಂಕಟೇಶ್ವರ ಧ್ಯಾನ ಕೇಂದ್ರದ 8ನೇ ವಾರ್ಷಿಕೋತ್ಸವ ನಿಮಿತ್ತ ಹಮ್ಮಿಕೊಂಡಿರುವ 10 ದಿನಗಳ ಕಾರ್ಯಕ್ರಮ ಸರಣಿಗೆ ಗುರುವಾರ ಪಂಡಿತ ಬಾದರಾಯಣಾಚಾರ್ಯ ಚಾಲನೆ ನೀಡಿದರು.

ಮೈಸೂರು, ಏ.23– ಸಕಲ ದೋಷ ನಿವಾರಣೆಗೆ ಗಾಯತ್ರಿ ಮಂತ್ರವೇ ಪರಿಹಾರ ಎಂದು ಪಂಡಿತ ಬಾದರಾಯಣಾಚಾರ್ಯ ಹೇಳಿದರು.

ಮೈಸೂರಿನ ಶ್ರೀರಾಮಪುರದಲ್ಲಿರುವ ಉತ್ತರಾದಿ ಮಠದ ಶಾಖೆಯ ಶ್ರೀವೆಂಕಟೇಶ್ವರ ಧ್ಯಾನ ಕೇಂದ್ರದ 8ನೇ ವಾರ್ಷಿಕೋತ್ಸವ ನಿಮಿತ್ತ ಹಮ್ಮಿಕೊಂಡಿರುವ 10 ದಿನಗಳ ವೈವಿಧ್ಯಮಯ ಕಾರ್ಯಕ್ರಮ ಸರಣಿಗೆ ಗಾಯತ್ರಿ ಚಿಂತನ ವಿಶೇಷ ಪ್ರವಚನದ ಮೂಲಕ ಗುರುವಾರ ಚಾಲನೆ ನೀಡಿ, ಅವರು ಮಾತನಾಡಿದರು.

ಜಪ ಮಾಡುವ ಮೊದಲು ದೈಹಿಕ ಮತ್ತು ಮಾನಸಿಕ ಶುದ್ಧಿ ಬಹು ಅಗತ್ಯ. ಅವುಗಳನ್ನು ಪಾಲಿಸಿದಾಗಲೇ ಮಂತ್ರ ಸಿದ್ಧಿಯಾಗುತ್ತದೆ. ನಿತ್ಯವೂ ನಿರಂತರವಾಗಿ ಭಗವಂತನ ಚಿಂತನೆ ಮಾಡಬೇಕು. ಪ್ರಪಂಚದಲ್ಲಿ ಬೆಲೆ ಕಟ್ಟಲಾಗದ ದೇಹವನ್ನು, ಅಂಗಾಂಗಗಳನ್ನು ದೇವರು ಕೊಟ್ಟಿದ್ದಾನೆ. ಪ್ರತಿಯೊಬ್ಬರ ಮನವನ್ನು ಭಗವಂತ ನಿಯಂತ್ರಣ ಮಾಡುತ್ತಾನೆ. ಗಾಯತ್ರಿ ಮಂತ್ರದ ರೂಪದಲ್ಲಿ ಅವನನ್ನು ಸ್ಮರಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಪಂಡಿತ ಹೇಮಂತಾಚಾರ್ಯ ಗುಡಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಾರ್ಥಕ 8 ವರ್ಷಗಳನ್ನು ಪೂರ್ಣಗೊಳಿಸಿರುವ ಧ್ಯಾನ ಕೇಂದ್ರವು ನಿತ್ಯ ಒಂದಿಲ್ಲೊಂದು ಧಾರ್ಮಿಕ, ಅಧ್ಯಾತ್ಮಿಕ ಚಟುವಟಿಕೆಗಳಿಗೆ ವೇದಿಕೆಯಾಗಿದೆ. ಜ್ಞಾನಸತ್ರಗಳ ಆಯೋಜನೆ, ಭಾರತೀಯ ಗೋವು ತಳಿ ಸಂರಕ್ಷಣೆ, ಸಾಮಾಜಿಕ ಸೇವಾ ಕಾರ್ಯ, ಪಾದಯಾತ್ರೆ ಆಯೋಜನೆ ಮೂಲಕ ಧ್ಯಾನ ಕೇಂದ್ರವು ಭಕ್ತರ ಕ್ರಿಯಾಶೀಲತೆಗೆ ಪ್ರೇರಣೆ ನೀಡಿದೆ ಎಂದರು.

ಏ.23ರಿಂದ 25ರವರೆಗೆ ನಿತ್ಯ ಸಂಜೆ 4ರಿಂದ 7.30 ರವರೆಗೆ ಪಂಡಿತ ಬಾದರಾಯಣಾಚಾರ್ಯರಿಂದ ಗಾಯತ್ರಿ ಚಿಂತನ ವಿಶೇಷ ಪ್ರವಚನವಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಅವರು ಮನವಿ ಮಾಡಿದರು. ಈ ವೇಳೆ ಹಿರಿಯರಾದ ಮೂರ್ತಿರಾವ್, ವಾಸುದೇವ, ಹುಚ್ಚಾಚಾರ್, ಅನಂತ ಜೋಷಿ ಮತ್ತಿತರರು ಹಾಜರಿದ್ದರು.

# ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶ್ರವಣ ದೋಷ ಮಕ್ಕಳ ಸಾಧನೆ



ಮೈಸೂರು.ಏ.23– ಮೈಸೂರಿನ ಬನ್ನಿಮಂಟಪದಲ್ಲಿರುವ ಸಾಯಿರಂಗ ವಿದ್ಯಾಸಂಸ್ಥೆಯ ಕಿವುಡು ಗಂಡು ಮಕ್ಕಳ ವಸತಿ ಶಾಲೆ 2025–26 ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಶೇ.100 ರಷ್ಟು ಸಾಧನೆ ಮಾಡಿದೆ.

ಪರೀಕ್ಷೆ ಬರೆದಿದ್ದ 20 ವಿದ್ಯಾರ್ಥಿಗಳ ಪೈಕಿ 12 ವಿದ್ಯಾರ್ಥಿಗಳು ಪ್ರಥಮ ದರ್ಜೆ, 7 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

# ಅಪಘಾತದಲ್ಲಿ ಗಾಯಗೊಂಡಿದ್ದ ವಿದ್ಯಾರ್ಥಿ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಸಾಧನೆ



ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾದ ನಗರ ಪಾಲಿಕೆ ಮಾಜಿ ಸದಸ್ಯ ರಘು ರಾಜೇ ಅರಸ್ ಅವರ ಪುತ್ರ

ಮೈಸೂರು, ಏ.23– ಶಾಲಾ ಪ್ರವಾಸದ ವೇಳೆ ಬಸ್ ಅಪಘಾತಕ್ಕೀಡಾಗಿ ಗಂಭೀರವಾಗಿ ಗಾಯಗೊಂಡಿದ್ದ ವಿದ್ಯಾರ್ಥಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸುವ ಮೂಲಕ ಓದುವ ಛಲವಿದ್ದರೆ ನೋವು–ಕಷ್ಟ ನಗಣ್ಯ ಎಂಬುದನ್ನು ಸಾಬೀತುಪಡಿಸಿದ್ದಾನೆ.

ಮೈಸೂರಿನ ತರಳಬಾಳು ವಿದ್ಯಾ ಸಂಸ್ಥೆಯ ವಿದ್ಯಾರ್ಥಿ ಎಂ.ಆರ್. ಗಾಯಕ್ ರಾಜೇ ಅರಸ್ ಅಪಘಾತದಲ್ಲಿ ಗಾಯಗೊಂಡು ಸುಮಾರು 2 ತಿಂಗಳು ಶಾಲೆಗೆ ಗೈರಾದರೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ 123, ಇಂಗ್ಲಿಷ್ ಹಾಗೂ ಹಿಂದಿ ಶೇ.100, ಗಣಿತ 99, ಸಮಾಜ ವಿಜ್ಞಾನ 98 ಹಾಗೂ ವಿಜ್ಞಾನ 93 ಸೇರಿದಂತೆ ಒಟ್ಟು 625ಕ್ಕೆ 613 (ಶೇ.98) ಅಂಕ ಗಳಿಸಿದ್ದಾನೆ. ಈತ ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾದ ನಗರ ಪಾಲಿಕೆ ಮಾಜಿ ಸದಸ್ಯ ರಘು ರಾಜೇ ಅರಸ್ ಅವರ ಪುತ್ರ

ಸಂಸ್ಥೆಯ ಮಕ್ಕಳು ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ಖಾಸಗಿ ಬಸ್ ಕಳೆದ ನವೆಂಬರ್ 30ರಂದು ಹೊನ್ನಾವರದ ಬಳಿ ಅಪಘಾತಕ್ಕೀಡಾಗಿತ್ತು. ದುರ್ಘಟನೆಯಲ್ಲಿ ಓರ್ವ ವಿದ್ಯಾರ್ಥಿ ಸಾವನ್ನಪ್ಪಿ, ಗಾಯಕ್ ಸೇರಿದಂತೆ 25ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗಾಯಗೊಂಡಿದ್ದರು.

# ಉದ್ಯಮಿಗೆ ಲಕ್ಷಾಂತರ ರೂ. ವಂಚಿಸಿದ ಆರೋಪ: ಪೇದೆ ವಿರುದ್ಧ ಎಫ್‌ಐಆರ್ ದಾಖಲು

**●ಗಿರವಿ ಇಟ್ಟಿರುವ ಒಡವೆ ಬಿಡಿಸಿ ಮಾರಾಟ ಮಾಡಿ ಹಣ ಕೊಡುವುದಾಗಿ ನಂಬಿಸಿದ ಪೊಲೀಸ್ ಪೇದೆ ●ಮೊಬೈಲ್ ನಂಬರ್‌ಗಳು ಸ್ವಿಚ್ಡ್ ಆಫ್ ●15 ದಿನಗಳಿಂದ ಮನೆಗೆ ಬಾರದ ಪೇದೆ**

ಮೈಸೂರು, ಏ.23(ಜಿಎ)–ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹಣವನ್ನು ಹಿಂದಿರುಗಿಸುವುದಾಗಿ ಹೇಳಿ ಸಿಎಆರ್ ಸಿಬ್ಬಂದಿಯೊಬ್ಬರು ಲಕ್ಷಾಂತರ ರೂ. ಪಡೆದು ಉದ್ಯಮಿಗೆ ವಂಚಿಸಿರುವ ಆರೋಪದಡಿ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಆರ್.ಎಸ್.ರಾಜೇಶ್ ಎಂಬ ಉದ್ಯಮಿಗೆ 8 ವರ್ಷದಿಂದ ಸಿಎಆರ್ ಸಿಬ್ಬಂದಿ ಬಿ.ವಿ.ಮಹದೇವ ಎಂಬುವರ ಪರಿಚಯವಿದ್ದು, ಏ.13ರಂದು ಮಧ್ಯಾಹ್ನ 3ಗಂಟೆಗೆ ರಾಜೇಶ್ ಕಚೇರಿಯಲ್ಲಿ ಇದ್ದಾಗ ಮಹಾದೇವ ಭೇಟಿ ಮಾಡಿ ತಾನು 29.9 ಗ್ರಾಂ ಚಿನ್ನವನ್ನು ಹೂಟಗಳ್ಳಿಯಲ್ಲಿರುವ ಮುತ್ತೂಟ್ ಫಿನ್‌ಕಾರ್ಪ್ ಕಂಪನಿಯಲ್ಲಿ ಅಡವಿಟ್ಟಿದ್ದು, ಅದನ್ನು ಬಿಡಿಸಿಕೊಳ್ಳಲು 3.60 ಲಕ್ಷ ರೂ. ಅವಶ್ಯಕತೆ ಇದೆ. ನಾನು ಅದನ್ನು ಬಿಡಿಸಿಕೊಂಡು ನನಗೆ ಇನ್ನೂ ಹಣದ ಅವಶ್ಯಕತೆ ಇರುವುದರಿಂದ ಹೆಚ್ಚಿನ ಹಣಕ್ಕೆ ಮಾರಾಟ ಮಾಡಿ ನೀವು ಕೊಟ್ಟಿರುವ ಹಣ ವಾಪಾಸ್ ನೀಡುತ್ತೇನೆ ಎಂದು ನಂಬಿಸಿದ್ದಾನೆ. ರಾಜೇಶ್ ಮಹದೇವು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವದರಿಂದ ಆತನನ್ನು ನಂಬಿದ್ದಾರೆ.

ಈಗಲೇ ತಮ್ಮ ಎಸ್‌ಬಿಐ ಖಾತೆಗೆ ಹಣ ಹಾಕಲು ಕೇಳಿಕೊಂಡಿದ್ದಾರೆ. ನಂತರ 4 ಗಂಟೆಗೆ ಹೂಟಗಳ್ಳಿಯಲ್ಲಿರುವ ಎಸ್‌ಬಿಐ ಕ್ಯಾಶ್ ಡೆಪಾಜಿಟ್ ಮಿಷನ್‌ಗೆ ಮಹದೇವು ಅಕೌಂಟಿಗೆ ಹಣ ಜಮೆ ಮಾಡಲು ಮುಂದಾದಾಗ ಸರ್ವರ್ ಸಮಸ್ಯೆ ಕಂಡು ಬಂದಿದೆ. ನಂತರ ಅದೇ ಎಟಿಎಂಗೆ ಹಣ ತೆಗೆದುಕೊಳ್ಳಲು ಬಂದಿದ್ದ ವ್ಯಕ್ತಿ ಬಳಿ ನಾವು ನಿಮಗೆ ಹಣ ನೀಡುತ್ತೇವೆ ನೀವು ಫೋನ್ ಪೇ ಮೂಲಕ ಹಣ ವರ್ಗಾವಣೆ ಮಾಡುವಂತೆ ಕೇಳಿದ್ದಾರೆ. ತಕ್ಷಣ ಆ ವ್ಯಕ್ತಿ ಒಪ್ಪಿಕೊಂಡು ಒಂದು ಖಾತೆಯಿಂದ 40 ಸಾವಿರ ರೂ. ಮತ್ತು ಮತ್ತೊಂದು ಖಾತೆಯಿಂದ 70 ಸಾವಿರ ರೂ. ವರ್ಗಾವಣೆ ಮಾಡಿದ್ದಾರೆ.

ತದನಂತರ 4.45ಕ್ಕೆ ವಿಜಯನಗರ 4ನೇ ಹಂತದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ಎಟಿಎಂ ಬಳಿ ಬಂದು ಅಲ್ಲಿ 1,86,500 ರೂ ಹಣ ಜಮೆ ಮಾಡಿದ್ದಾರೆ. ಬಾಕಿ ಹಣ ಹಾಕಲು ಮುಂದಾದಾಗ ಸರ್ವರ್ ಸಮಸ್ಯೆ ಉಂಟಾಗಿದೆ. ಮಹದೇವ ಕೈಯಿಗೆ 3500 ಹಣ ನೀಡಿ ನಂತರ ಬಾಕಿ ಹಣವನ್ನು ಕಚೇರಿಯಲ್ಲಿ ನೀಡುವುದಾಗಿ ತಿಳಿಸಿ, 5.43ಕ್ಕೆ ಉಳಿದ 60 ಸಾವಿರ ರೂ. ಹಣವನ್ನು ನಗದು ರೂಪದಲ್ಲಿ ನೀಡಿದ್ದಾರೆ. ಈ ಸಂದರ್ಭದಲ್ಲಿ ಇತರರು ಅದನ್ನು ನೋಡಿದ್ದಾರೆ.

ಈ ನಡುವೆ ಮುತ್ತೂಟ್ ಫಿನ್ ಕಾರ್ಪ್ ಕಂಪನಿ ಅವಧಿ ಮುಗಿದ ಕಾರಣ ಅವರ ಗಿರವಿ ಇಟ್ಟಿದ್ದ ಅಸಲು ರಶೀದಿಯನ್ನು ನೀಡಿ ಏ.14ರಂದು ಬೆಳಗ್ಗೆ 11 ಗಂಟೆಗೆ ಕಂಪನಿಗೆ ಬರುವಂತೆ ತಿಳಿಸಿ ಹೋಗಿದ್ದಾರೆ. ಅವರ ಮಾತಿನಂತೆ ಮರುದಿನ 11 ಗಂಟೆಗೆ ಮುತ್ತೂಟ್ ಫಿನ್‌ಕಾರ್ಪ್ ಕಂಪನಿ ಬಳಿಬಂದು ಸುಮಾರು ಹೊತ್ತು ಕಾದಿದ್ದು ಮಹದೇವು ಬಾರದ ಕಾರಣ ಅವರ ಮೊಬೈಲ್ ನಂಬರ್‌ಗೆ ಕರೆ ಮಾಡಿದಾಗ ಎರಡು ನಂಬರ್‌ಗಳು ಸ್ವಿಚ್ ಆಫ್ ಆಗಿದೆ. ತಮ್ಮ ಕಚೇರಿಗೆ ಬಂದು ಹಣ ಹಿಂದಿರುಗಿಸಬಹುದು ಎಂದು ಕಚೇರಿಯಲ್ಲಿ ಕಾಯಲು ಆರಂಭಿಸಿದ್ದಾರೆ. ನಂತರ ಅವರ ಮನೆ ಬಳಿ ಹೋಗಿ ವಿಚಾರಿಸಿದಾಗ ಮಹದೇವ ಇದೇ ರೀತಿ ಇತರರಿಗೂ ಮೋಸ ಮಾಡಿರುವುದು ತಿಳಿದು ಬಂದಿದ್ದು, ಕಳೆದ 15 ದಿನದಿಂದ ಮನೆಗೆ ಬರುತ್ತಿಲ್ಲ ಎಂದು ಮನೆಯವರು ತಿಳಿಸಿದ್ದಾರೆ. ಈ ಸಂಬಂಧ ಉದ್ಯಮಿ ರಾಜೇಶ್ ದೇವರಾಜ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

# ನಿರ್ಮಾಣದ ದೃಷ್ಟಿಯಿಂದಷ್ಟೇ ಇದ್ದರೆ 'ಗ್ರೇಟರ್ ಮೈಸೂರು' ಸೂಕ್ತವಲ್ಲ

## ಎಂಜಿಪಿ ಸಭೆಯಲ್ಲಿ ಹಿರಿಯ ನಟ ಪ್ರಕಾಶ್ ಬೆಳವಾಡಿ ಅಭಿಮತ



ಮೈಸೂರಿನ ಎಂಜಿಪಿ ಕಚೇರಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಗ್ರೇಟರ್ ಮೈಸೂರು ಕುರಿತ ಸಭೆಯಲ್ಲಿ ಹಿರಿಯ ರಂಗಕರ್ಮಿ ಪ್ರಕಾಶ್ ಬೆಳವಾಡಿ ಮಾತನಾಡಿದರು.

ಮೈಸೂರು,ಏ.23(ಪಿಎಂ)– ಮೈಸೂರಿನ ವಿವಿಧ ಕ್ಷೇತ್ರದ ಜನರ ಪ್ರಾತಿನಿಧ್ಯ ಇಲ್ಲದೆ ಹಾಗೂ ಕೇವಲ ಭೌಗೋಳಿಕ ಮತ್ತು ನಿರ್ಮಾಣದ ದೃಷ್ಟಿಯಿಂದ ಗ್ರೇಟರ್ ಮೈಸೂರು ಯೋಜನೆಯ ಪ್ರಸ್ತಾವನೆ ಸಿದ್ಧಗೊಂಡಿದ್ದರೆ ಅದು ಸೂಕ್ತವಲ್ಲ ಎಂದು ರಂಗಕರ್ಮಿ ಹಾಗೂ ನಟ ಪ್ರಕಾಶ್ ಬೆಳವಾಡಿ ಅಭಿಪ್ರಾಯಪಟ್ಟರು.

ಮೈಸೂರಿನ ಯಾದವಗಿರಿಯಲ್ಲಿರುವ ಮೈಸೂರು ಗ್ರಾಹಕರ ಪರಿಷತ್ತು (ಎಂಜಿಪಿ) ಕಚೇರಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಗ್ರೇಟರ್ ಮೈಸೂರು ; ಮೈಸೂರು ಸೌಂದರ್ಯ ಸಂರಕ್ಷಿಸುವ ನಿಟ್ಟಿನಲ್ಲಿ ಕಾರ್ಯತಂತ್ರದ ದೃಷ್ಟಿಕೋನ' ಕುರಿತ ಸಭೆಯಲ್ಲಿ ಅತಿಥಿಯಾಗಿ ಪಾಲ್ಗೊಂಡು ವಿಷಯ ಕುರಿತಂತೆ ವಿಚಾರಗಳ ಮಂಡಿಸಿದ ಅವರು, ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದರು.

ಗ್ರೇಟರ್ ಎನ್ನುವ ಪದವನ್ನು ವಿದೇಶಗಳಿಂದ ನಾವು ತೆಗೆದುಕೊಂಡಿದ್ದು, ಗ್ರೇಟರ್ ಟೊರೊಂಟೊ ಏರಿಯಾ, ಗ್ರೇಟರ್ ಸಿಯಾಟಲ್ ಏರಿಯಾ ಈ ರೀತಿಯ ಮಾದರಿಗಳು ಇವೆ. ಗ್ರೇಟರ್ ಟೊರೊಂಟೊ ಏರಿಯಾ ಅಂದರೆ ಕೆನಡಾನಲ್ಲಿನ ಇದರಲ್ಲಿ 28 ಮೇಯರ್‌ಗಳು ಇರುತ್ತಾರೆ. ಆ ಪರಿಕಲ್ಪನೆಯ ಗ್ರೇಟರ್ ಎಂಬುದನ್ನೇ ಇಲ್ಲಿಯೂ ಅನುಷ್ಠಾನಗೊಳಿಸಲು ಹೊರಟಿರುವುದೇ ಎಂಬ ಪ್ರಶ್ನೆ ಇದೆ. ಅವು ಟೊರೊಂಟೊ 28 ಸ್ವಾಯತ್ತ ಪ್ರದೇಶಗಳನ್ನು ಹೊಂದಿದೆ. ಅಲ್ಲಿನ ಆಯಾ ಪ್ರದೇಶಗಳನ್ನು ಅವರೇ ನಿರ್ವಹಣೆ ಮಾಡಿಕೊಳ್ಳಬಹುದು. ಅಲ್ಲಿ ಮೇಯರ್ ಇರುತ್ತಾರೆ. ಅವರೇ ತಮ್ಮ ಪ್ರದೇಶದ ಅಭಿವೃದ್ಧಿ ಹೇಗಾಗಬೇಕು, ವಿಕಾಸ ಮಾಡುವಾಗ ರೀತಿಗಳು ಏರಬೇಕು ಎಂಬಿತ್ಯಾದಿ ನಿರ್ಧಾರ ಮಾಡಿಕೊಳ್ಳುತ್ತಾರೆ ಎಂದು ತಿಳಿಸಿದರು.

ಅದೇ ಮಾದರಿಯನ್ನು ಇಲ್ಲಿಗೆ ಅನ್ವಯಿಸಲಾಗುತ್ತಿದೆಯೇ ಅಥವಾ ಮೈಸೂರಿನ ಪಕ್ಕದಲ್ಲಿ ಇನ್ನೊಂದು ಲೇಔಟ್ ಮಾಡಿ, ಸುತ್ತಲು ವಿಸ್ತರಿಸುತ್ತೇವೆ ಎಂಬುದಾ? ಎಂಬ ಪ್ರಶ್ನೆಗಳಿವೆ. ಗ್ರೇಟರ್ ಮೈಸೂರು ಅಂದರೆ ಯಾವ ಪರಿಕಲ್ಪನೆಯಲ್ಲಿ ಆಲೋಚನೆ ಮಾಡಲಾಗಿದೆ ಎಂಬುದನ್ನು ಜನತೆಗೆ ತಿಳಿಸಬೇಕು. ಜೊತೆಗೆ ಯಾವ್ಯಾವ ತಜ್ಞರೊಂದಿಗೆ ಈ ಪ್ರಸ್ತಾವನೆ ಸಿದ್ಧಪಡಿಸಲಾಗಿದೆ ಎಂಬುದನ್ನು ಹೇಳಬೇಕು ಎಂದರು.

ಮೈಸೂರಿನಲ್ಲಿರುವ ಜನರ ಪ್ರತಿಭೆ, ಅವರ ಸಾಮರ್ಥ್ಯ, ಆರ್ಥಿಕತೆ, ಉತ್ಪನ್ನ, ಸೇವೆಗೆ ಸಂಬಂಧಿಸಿದಂತೆ ಯೋಜನೆ ರೂಪಿಸಲಾಗಿದೆಯೇ, ಎಂತಹ ಟ್ಯಾಲೆಂಟ್ ಮೈಸೂರಿಗೆ ಆಕರ್ಷಣೆ ಮಾಡಬೇಕು ಎಂಬಿತ್ಯಾದಿ ಸೂಕ್ತ ಯೋಚನೆ ಮಾಡಿ ಗ್ರೇಟರ್ ಮೈಸೂರು ಎಂದು ಮಾಡಿದರೆ ಸೂಕ್ತವಾಗುತ್ತದೆ. ಇದರ ಹೊರತಾಗಿ ಕೇವಲ ಭೌಗೋಳಿಕವಾಗಿ ಮೈಸೂರು ಒಂದು ಸರ್ಕಲ್ ಇದೆ ಅದರ ಸುತ್ತಲು ಇನ್ನೊಂದು ಸರ್ಕಲ್ ಮಾಡುತ್ತೇವೆ ಎಂದರೆ ಅದು ಗ್ರೇಟರ್ ಅಲ್ಲ ಎಂದು ಪ್ರತಿಪಾದಿಸಿದರು.

ಗ್ರೇಟರ್ ಮೈಸೂರು ಯೋಜನೆಯ ಪ್ರಸ್ತಾವನೆಯನ್ನು ಯಾರ ಅಭಿಪ್ರಾಯ ಪಡೆದು ಮಾಡಲಾಗುತ್ತಿದೆ ಎಂಬುದು ಮುಖ್ಯ. ಮೈಸೂರು ಜನಕ್ಕೆ ಬೇಕಾಗಿರುವುದು ಮಾಡುತ್ತಿದ್ದಾರಾ? ಮೈಸೂರು ಜನರ ಅಭಿಪ್ರಾಯ ಪಡೆದು ಮಾಡುತ್ತಿದ್ದಾರಾ? ಇಲ್ಲಿನ ಅಗತ್ಯಗಳೇನಿವೆ. ಭವಿಷ್ಯದಲ್ಲಿ ಯಾವ್ಯಾವ ಹೊಸ ಅಗತ್ಯಗಳು ಬರಬಹುದು. ಅದರ ಪೂರೈಕೆ ಹೇಗೆ ಆಗಬೇಕು. ಯಾವ್ಯಾವ ಹೊಸ ಅವಕಾಶಗಳು ನಮಗೆ ಕಾಣಿಸುತ್ತಿವೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ ಎಂದರು.

ಮೈಸೂರಿನ ಅಭಿವೃದ್ಧಿ ವೇಗಗತಿಯಲ್ಲಿ ಆಗಲು ಯಾರಿಂದ ಅಭಿಪ್ರಾಯ ಪಡೆಯಲಾಗಿದೆ. ಯಾವ ತಜ್ಞರನ್ನು ಮಾತನಾಡಿಸಿದ್ದಾರೆ? ಯಾವ್ಯಾವ ರೀತಿಯ ತಜ್ಞರನ್ನು ಗ್ರೇಟರ್ ಮೈಸೂರು ಯೋಜನೆಯ ಪ್ರಸ್ತಾವನೆ ಸಮಿತಿ ಒಳಗೊಂಡಿದೆ. ಅವರೆಲ್ಲಾ ಮೈಸೂರಿಗೆ ಸಂಬಂಧಿಸಿದವರೇ? ಮತ್ತು ಮೈಸೂರಿನ ಬಗ್ಗೆ ಅಭಿಮಾನ ಹೊಂದಿರುವ ಜನರೇ? ಎಂಬುದು ಅಗತ್ಯ. ಪ್ರಾತಿನಿಧ್ಯ ಇಲ್ಲದವರು ಒಳಗೊಂಡವರಿಂದ ಪ್ರಸ್ತಾವನೆ ಸಿದ್ಧಪಡಿಸಿದರೆ ಅದು ಪ್ರಯೋಜನವಿಲ್ಲ. ನಮ್ಮ ಊರು ಎಂಬ ಪ್ರೀತಿ, ಭಾವನೆ ಹೊಂದಿರುವ ಮೈಸೂರು ಜನರ ಪ್ರಾತಿನಿಧ್ಯವೇ ಇಲ್ಲವಾದರೆ ಅದು ಸೂಕ್ತವಾಗದು ಎಂದು ತಿಳಿಸಿದರು.

ಎಂಜಿಪಿ ಕಾರ್ಯಕಾರಿ ಸಮಿತಿ ಸದಸ್ಯರೂ ಆದ ನಿವೃತ್ತ ಮೇಜರ್ ಜನರಲ್ ಸುಧೀರ್ ಒಂಬತ್ಕೆರೆ, ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು, ಎಂಜಿಪಿ ಅಧ್ಯಕ್ಷ ರಾಯ್ ಜೋಸೆಫ್, ಕಾರ್ಯಾಧ್ಯಕ್ಷ ಎಸ್.ಕೆ. ದಿನೇಶ್, ಸಂಚಾಲಕ ಡಿ.ವಿ.ದಯಾನಂದ ಸಾಗರ್, ಸಿವಿಲ್ ಇಂಜಿನಿಯರ್ ಪವಿತ್ರಾ ಮೋಹನ್, ಎಎಪಿ ಪಕ್ಷದ ಮಾಳವಿಕಾ ಗುಬ್ಬಿವಾಣಿ, ಎನ್‌ಐಇ ಕಾಲೇಜು ಪ್ರಾಧ್ಯಾಪಕ ಶ್ಯಾಮಸುಂದರ್ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

### 73, 74ನೇ ಸಾಂವಿಧಾನಿಕ ತಿದ್ದುಪಡಿ ಅನುಗುಣವಾಗಿ ಪ್ರಸ್ತಾವನೆ ಸಿದ್ಧಗೊಂಡಂತೆ ಇಲ್ಲ

ಅನೇಕ ಕಾನೂನುಗಳ ಜೊತೆಗೆ ಕೇಂದ್ರ, ರಾಜ್ಯ ಸರ್ಕಾರಗಳ ನೀತಿಗಳು ಇವೆ. ಈ ಎಲ್ಲವನ್ನೂ ಕ್ರೋಢೀಕರಿಸಿ ಆ ಯಾವುದಕ್ಕೂ ಧಕ್ಕೆಯಾಗದಂತೆ ಮಾಡಲಾಗಿದೆಯೇ? ಎಂಬುದು ಮುಖ್ಯ. ಈ ಪ್ರಶ್ನೆಗಳು ಉಳಿದಿವೆ. ಅಂದರೆ ನಾನು ಮೈಸೂರು ಬಗ್ಗೆ ಮಾತ್ರ ಹೇಳುತ್ತಿಲ್ಲ. ನಾವು ಟೌನ್ ಪ್ಲಾನಿಂಗ್ ಎಂದು ಎಲ್ಲೇ ಮಾಡಿದರೂ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ 73 ಮತ್ತು 74ನೇ ಸಾಂವಿಧಾನಿಕ ತಿದ್ದುಪಡಿಗಳಿಗೆ ಅನುಗುಣವಾಗಿ ಮಾಡಬೇಕಾಗುತ್ತದೆ. ಅದಕ್ಕೆ ಅನುಗುಣವಾಗಿ ಈ ಪ್ರಸ್ತಾವನೆ ಸಿದ್ಧಪಡಿಸಲಾಗಿದೆಯೇ ಎಂಬ ಪ್ರಶ್ನೆ ಬರುತ್ತದೆ. ನಮಗೆ ಅನ್ನಿಸುತ್ತದೆ, ಈ ರೀತಿ ಮಾಡಲಾಗಿಲ್ಲ. ಒಂದು ವೇಳೆ ಈ ಬಗ್ಗೆ ನಮ್ಮ ತಿಳುವಳಿಕೆ ತಪ್ಪು ಇದ್ದರೆ ಎಲ್ಲಾ ನಿಯಮಾವಳಿಗಳನ್ನು ಪಾಲಿಸಿರುವ ಬಗ್ಗೆ ಜನತೆ ಮುಂದೆ ಮಾಹಿತಿ ನೀಡಬೇಕಾಗುತ್ತದೆ. ಜನರು ಹಾಗೂ ತಜ್ಞರ ಅಭಿಪ್ರಾಯದೊಂದಿಗೆ ನೈಜ ಹಾಗೂ ಸುಸ್ಥಿರ ಅಗತ್ಯತೆಗಳನ್ನು ಒಳಗೊಂಡಂತೆ ಮಾಡಿದರೆ ಯಾರೂ ವಿರೋಧಿಸುವುದಿಲ್ಲ. ಯಾರನ್ನೂ ಕೇಳದೇ ಮಾಡಿದರೆ ಈ ರೀತಿಯ ಗೊಂದಲ, ಸಂಶಯ ಜನರಲ್ಲಿ ಉದ್ಭವವಾಗುವ ಸಾಧ್ಯತೆ ಹೆಚ್ಚಾಗುತ್ತದೆ.

-ಪ್ರಕಾಶ್ ಬೆಳವಾಡಿ, ಹಿರಿಯ ರಂಗಕರ್ಮಿ.

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 24 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 9 | ಪುಟಗಳು: 12 + IV
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




# SSLC; ಈ ಸಲ ದಾಖಲೆಯ ಶೇ.94.10 ಫಲಿತಾಂಶ

**ಹಾಸನ– 4, ಮಂಡ್ಯ– 5, ಕೊಡಗು– 8, ಮೈಸೂರು– 20, ಚಾಮರಾಜನಗರ– 30ನೇ ಸ್ಥಾನ**

**• ಕಳೆದ ಸಾಲಿಗಿಂತ ಶೇ.14 ರಷ್ಟು ಅಧಿಕ ತೇರ್ಗಡೆ • 7 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಸಾಧನೆ • ದಕ್ಷಿಣ ಕನ್ನಡ ಶೇ.98.4 ಗಳಿಸಿ ಪ್ರಥಮ; ಶೇ.85.06 ಫಲಿತಾಂಶದೊಂದಿಗೆ ಕಲಬುರಗಿ ಕಡೇ ಸ್ಥಾನ • ಶೇ.96.18 ರಷ್ಟು ಬಾಲಕಿಯರು; ಶೇ.91.94 ರಷ್ಟು ಬಾಲಕರು ತೇರ್ಗಡೆ**


ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಸಚಿವ ಮಧುಬಂಗಾರಪ್ಪ


ಬೃಂದಾ ಎಂ. ತಾಪ್ಸೆ


ಧನುಷ್ ಸುಧೀರ್


ಪ್ರಾರ್ಥನಾ ನಾಗಪ್ಪ


ಪ್ರೀತಂ ಜಿ. ಪೂಜಾರಿ


ಭರತ್ .ಜಿ


ಸೌಜನ್ಯ ಬಸವರಾಜ


ಸುಖದೇವ್

ಬೆಂಗಳೂರು, ಏ. 23(ಕೆಎಂಶಿ)– ಕಳೆದ ಮಾರ್ಚ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡ 94.10 ವಿದ್ಯಾರ್ಥಿಗಳು ತೇರ್ಗಡೆಯಾಗಿ ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ. ಕಳೆದ ವರ್ಷ ಶೇಕಡ 80.04 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದರು, ಈ ಬಾರಿ ಅದಕ್ಕಿಂತ ಶೇ.14ರಷ್ಟು ಹೆಚ್ಚಿಗೆ ಫಲಿತಾಂಶ ಬಂದಿದೆ.

**625 ಅಂಕ ಸಾಧನೆ:** ಈ ಬಾರಿ 7,70,209 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದು ಅದರಲ್ಲಿ 7,24,794 ಮಂದಿ ತೇರ್ಗಡೆಗೊಂಡಿದ್ದು, 625ಕ್ಕೆ 625 ಅಂಕ ಪಡೆಯುವುದರೊಂದಿಗೆ 7 ವಿದ್ಯಾರ್ಥಿಗಳು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಫಲಿತಾಂಶದ ಮಾಹಿತಿ ನೀಡಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಇಲಾಖೆ ಪ್ರಾರಂಭದಿಂದಲೇ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವತ್ತ ಗಮನ ಹರಿಸಿತ್ತು, ಇದರ ಪರಿಣಾಮ ಹೆಚ್ಚಿನ ತೇರ್ಗಡೆ ಸಾಧ್ಯವಾಯಿತು ಎಂದರು.

ಸರ್ಕಾರ 20 ಅಂಶಗಳ ಸಮಗ್ರ ಸುತ್ತೋಲೆಯನ್ನು ಅಧಿಕಾರಿಗಳು ಮತ್ತು ಶಿಕ್ಷಕರಿಗೆ ನೀಡಿದ್ದಲ್ಲದೆ, ಮಕ್ಕಳ ಶಿಕ್ಷಣದಲ್ಲಿ ತೊಂದರೆ ಆಗದಂತೆ ಶಿಕ್ಷಕರ ನೇಮಕ ಕೈಗೊಂಡಿದ್ದರಿಂದ ಇಂತಹ ಫಲಿತಾಂಶ ಸಾಧ್ಯವಾಯಿತು.

■10ನೇ ಪುಟಕ್ಕೆ

## ಮೈಸೂರು ಜಿಲ್ಲೆಯಲ್ಲಿ 32,105 ವಿದ್ಯಾರ್ಥಿಗಳು ಉತ್ತೀರ್ಣ; ಶೇಕಡ 94ರಷ್ಟು ಫಲಿತಾಂಶ

# ಇಲವಾಲದ ಕರ್ನಾಟಕ ಪಬ್ಲಿಕ್ ಶಾಲೆಯ ಮಾಧುರಿ, ವಿಜಯ ವಿಠಲದ ಮನಸ್ವಿನಿಗೆ 625ಕ್ಕೆ 624 ಅಂಕ; ರಾಜ್ಯಕ್ಕೆ 2ನೇ, ಜಿಲ್ಲೆಗೇ ಟಾಪರ್

**■ 703 ಶಾಲೆಗಳಲ್ಲಿ 247ರಲ್ಲಿ ಶೇ.100 ಫಲಿತಾಂಶ ■ 16 ವಿದ್ಯಾರ್ಥಿಗಳಿಗೆ 620 ಅಂಕ ■ ಕಳೆದ ಬಾರಿ 11 ಸಾವಿರ, ಈ ಬಾರಿ 1,870 ಅನುತ್ತೀರ್ಣ ■ ಹಿಂದಿನ ವರ್ಷ 15ನೇ ಸ್ಥಾನ; ಈ ಬಾರಿ 20ನೇ ಸ್ಥಾನಕ್ಕೆ ಕುಸಿತ**

ಮೈಸೂರು, ಏ.23(ಬಿಎಲ್‌ಯು)– ಇಂದು ಪ್ರಕಟವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಮೈಸೂರು ಜಿಲ್ಲೆಯಲ್ಲಿ 32,105 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇಕಡ 94.49ರಷ್ಟು ಫಲಿತಾಂಶ ಬಂದಿದೆ. ಕಳೆದ ವರ್ಷಕ್ಕಿಂತ ಈ ಬಾರಿ ಮೈಸೂರು ಜಿಲ್ಲೆ ಶೇಕಡ 27ರಷ್ಟು ಹೆಚ್ಚು ಫಲಿತಾಂಶ ಗಳಿಸಿದರೂ ಪಟ್ಟಿಯಲ್ಲಿ, 20ನೇ ಸ್ಥಾನಕ್ಕೆ ಕುಸಿದಿದೆ.

ಕಳೆದ ವರ್ಷ ಮೈಸೂರು ಜಿಲ್ಲೆ 67ರಷ್ಟು ಫಲಿತಾಂಶದೊಂದಿಗೆ 15ನೇ ಸ್ಥಾನ ಪಡೆದಿತ್ತು. ಈ ಬಾರಿ ಶೇಕಡ 94.49ರಷ್ಟು ಫಲಿತಾಂಶ ಪಡೆದರೂ 20ನೇ ಸ್ಥಾನಕ್ಕೆ ಕುಸಿದಿದೆ. ಒಟ್ಟಾರೆ ಫಲಿತಾಂಶದಲ್ಲಿ ಚೇತರಿಕೆ ಕಂಡರೂ ಸ್ಥಾನ ಆಧಾರದ ಮೇಲೆ 5 ಸ್ಥಾನವನ್ನು ಕಳೆದುಕೊಂಡಂತಾಗಿದೆ.

ಮೈಸೂರು ಜಿಲ್ಲೆಯಲ್ಲಿ ಒಟ್ಟು 33,976 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದರು. ಇವರಲ್ಲಿ 32,105 ಮಂದಿ ಉತ್ತೀರ್ಣರಾಗಿದ್ದಾರೆ. ಕಳೆದ ವರ್ಷ ಮೈಸೂರು ಜಿಲ್ಲೆಯಲ್ಲಿ 11 ಸಾವಿರ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರು. ಆದರೆ ಈ ಬಾರಿ 1,870 ಮಂದಿ ಅನುತೀರ್ಣರಾಗಿದ್ದಾರೆ.

■10ನೇ ಪುಟಕ್ಕೆ


ಮನಸ್ವಿನಿ (624)


ಮಾಧುರಿ (624)


ವಿನುತಾ (623)


ಲಕ್ಷಣ್ (622)

### ಮೈಸೂರಿಗೆ 20ನೇ ಸ್ಥಾನ, ಸುಲಭದ ಮಾತಲ್ಲ

ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಫಲಿತಾಂಶ ಉತ್ತಮಗೊಳಿಸಲು ವಿದ್ಯಾರ್ಥಿಗಳನ್ನು ಸರ್ವ ರೀತಿಯಲ್ಲೂ ಸಜ್ಜುಗೊಳಿಸಿದ್ದೆವು. ಮೂರು ಪೂರ್ವಭಾವಿ ಪರೀಕ್ಷೆ ನಡೆಸಿದ್ದೆವು. ಇದರಿಂದ ಮೈಸೂರು ಜಿಲ್ಲೆ ಶೇಕಡ 94.49ರಷ್ಟು ಫಲಿತಾಂಶ ಪಡೆಯಲು ಸಾಧ್ಯವಾಯಿತು. ಪರೀಕ್ಷಾರ್ಥಿಗಳಿಗೆ ಗುಂಪು ಅಧ್ಯಯನ ಮಾಡಿಸಿದ್ದೆವು, ಪರಿಶ್ರಮ ವಹಿಸಿದರೆ ಹೆಚ್ಚು ಅಂಕ ಬರುತ್ತದೆ ಎಂಬ ವಿಶ್ವಾಸ ಹಾಗೂ ಮನೋಸ್ಥೈರ್ಯ ತುಂಬಿದ್ದೆವು. ಕಳೆದ ವರ್ಷ ಮೈಸೂರು ಜಿಲ್ಲೆ 15 ನೇ ಸ್ಥಾನ ಪಡೆದಿತ್ತು, ಆದರೆ ಈ ಬಾರಿ 20 ಸ್ಥಾನ ಪಡೆದಿದೆ. ಕೆಲವು ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ ಇರುವ ಕಾರಣ 1 ರಿಂದ 10 ಸ್ಥಾನ ಪಡೆದಿವೆ. ಆದರೆ ಮೈಸೂರಿನಲ್ಲಿ 33 ಸಾವಿರ ವಿದ್ಯಾರ್ಥಿಗಳಿದ್ದು, ಈ ಸಲ 20ನೇ ಸ್ಥಾನ ಬಂದಿದೆ. ಇಷ್ಟು ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳಲ್ಲಿ ಶೇಕಡ 94 ರಷ್ಟು ಫಲಿತಾಂಶ ಬಂದಿರುವುದು ಸುಲಭದ ಮಾತಲ್ಲ.

– ಜಿ.ಉದಯಕುಮಾರ್, ಡಿಡಿಪಿಐ, ಮೈಸೂರು.

## ಮಾಜಿ ಎಂಎಲ್‌ಸಿ ಸಿದ್ದರಾಜುಗೆ ಸೇರಿದ 24 ನಿವೇಶನ ಅಕ್ರಮ ಮಾರಾಟ ಯತ್ನ ಪ್ರಕರಣ

# ಮೈಸೂರು ಪಶ್ಚಿಮ ಸಬ್‌ರಿಜಿಸ್ಟ್ರಾರ್ ಶ್ರೀಕಾಂತ್ ಅಮಾನತು

ಮೈಸೂರು, ಏ.23– ಸರ್ಕಾರದ ಸುತ್ತೋಲೆಗಳು ಹಾಗೂ ಇಲಾಖೆಯ ನಿರ್ದೇಶನಗಳನ್ನು ಉಲ್ಲಂಘಿಸಿ, ಕೋರ್ಟ್ ಡಿಕ್ರಿ ಅಥವಾ ಆದೇಶದ ಸಬ್ ಆರ್ಟಿಕಲ್ ಅನ್ನು ದುರ್ಬಳಕೆ ಮಾಡಿಕೊಂಡು 24 ನಿವೇಶನಗಳ ದಸ್ತಾವೇಜುಗಳನ್ನು ನೋಂದಾಯಿಸಿದ ಆರೋಪ ದಡಿ ಮೈಸೂರು ಪಶ್ಚಿಮ ಉಪ ನೋಂದಣಿ ಕಚೇರಿಯ ಉಪನೋಂದಣಾಧಿಕಾರಿ (ಸಬ್ ರಿಜಿಸ್ಟ್ರಾರ್) ಎನ್. ಶ್ರೀಕಾಂತ್ ಅವರನ್ನು ಅಮಾನತುಗೊಳಿಸಿ, ಶಿಸ್ತು ಪ್ರಾಧಿಕಾರ ಹಾಗೂ ನೋಂದಣಿ ಮಹಾಪರಿವೀಕ್ಷಕರು ಆದೇಶ ಹೊರಡಿಸಿದ್ದಾರೆ.

ಎನ್.ಶ್ರೀಕಾಂತ್ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಮುಂದಿನ ಆದೇಶದವರೆಗೆ ಅಮಾನತ್ತಿನಲ್ಲಿಟ್ಟಿದ್ದು, ಅವರನ್ನು ಪ್ರಸ್ತುತ ಸ್ಥಳದಲ್ಲೇ ಮುಂದುವರೆಸಿದರೆ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಸಾಧ್ಯತೆ ಇರುವುದರಿಂದ ಅವರ ಲೀನ್ ಅನ್ನು ಕೇಂದ್ರ ಕಚೇರಿಗೆ ವರ್ಗಾಯಿಸಿ ಆದೇಶಿಸಲಾಗಿದೆ.

ಅಮಾನತಿನ ಅವಧಿಯಲ್ಲಿ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡುವಂತಿಲ್ಲ ಎಂದು ಅಮಾನತು ಆದೇಶದಲ್ಲಿ ತಿಳಿಸಲಾಗಿದೆ.

ಮೈಸೂರಿನ ಪಶ್ಚಿಮ ಉಪನೋಂದಣಿ ಕಚೇರಿಯಲ್ಲಿ ಕಳೆದ ಡಿಸೆಂಬರ್‌ನಲ್ಲಿ ತಮ್ಮ ನಿವೇಶನವನ್ನು ಅಕ್ರಮವಾಗಿ ಅನ್ಯರಿಗೆ ನೋಂದಣಿ ಮಾಡುತ್ತಿರುವುದಾಗಿ ಮಾಜಿ ಎಂಎಲ್‌ಸಿ ಸಿದ್ದರಾಜು ಅವರು ಕಚೇರಿಗೆ ಧಾವಿಸಿ, ಆಕ್ರೋಶ ವ್ಯಕ್ತಪಡಿಸಿದ್ದರು. ಇಲ್ಲಿನ ಉಪ ನೊಂದನಾಧಿಕಾರಿ ಶ್ರೀಕಾಂತ್ ಹಾಗೂ ಅಲ್ಲಿನ ಸಿಬ್ಬಂದಿ ಶಾಮೀಲಾಗಿ, ತಮಗೆ ಸೇರಿದ, ಮೈಸೂರು ತಾಲೂಕು ಕೇರ್ಗಳ್ಳಿ ಗ್ರಾಮ ವ್ಯಾಪ್ತಿಯ 24 ನಿವೇಶನಗಳ ದಾಸ್ತಾವೇಜುಗಳನ್ನು ಅಕ್ರಮವಾಗಿ ಸಂಪಾದಿಸಿ, ತಿದ್ದುಪಡಿ ಮಾಡಿ ಕಾನೂನು ಬಾಹಿರವಾಗಿ ಅನ್ಯರ ಹೆಸರಿನಲ್ಲಿ ಕೂರಿಸಿ ನೋಂದಣಿ ಮಾಡಲು ಮುಂದಾಗಿದ್ದಾರೆ. ಈ ನಿಟ್ಟಿನಲ್ಲಿ ನೋಂದಣಿಗಾಗಿ ದಿನಾಂಕ ಪಡೆಯಲು ದಾಸ್ತಾವೇಜುಗಳನ್ನು ಅಪ್ಲೋಡ್ ಮಾಡಿ, ನಿವೇಶನಗಳ ಮಾಲೀಕರ ಅರಿವಿಗೆ ಬಾರದ ರೀತಿಯಲ್ಲಿ ನೋಂದಣಿ ಪ್ರಕ್ರಿಯೆ ನಡೆಸಿದ್ದಾಗಿ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಅಲ್ಲದೆ ಈ ಸಂಬಂಧ ಸಿದ್ದರಾಜು ಅವರು ಸರ್ಕಾರಕ್ಕೂ ಪತ್ರ ಬರೆದು, ಕ್ರಮಕ್ಕೆ ಆಗ್ರಹಿಸಿದ್ದರು.


ಸಬ್ ರಿಜಿಸ್ಟ್ರಾರ್ ಶ್ರೀಕಾಂತ್

■10ನೇ ಪುಟಕ್ಕೆ

# ನಿರೀಕ್ಷಿತ ಅಂಕ ಬಾರದ್ದಕ್ಕೆ ವಿದ್ಯಾರ್ಥಿನಿ ಆತ್ಮಹತ್ಯೆ; ಪಾಸಾದ ಖುಷಿಯಲ್ಲಿ ಈಜುವಾಗ ವಿದ್ಯಾರ್ಥಿ ಸಾವು

ಮೈಸೂರು/ಕೋಲಾರ, ಏ.23– ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದ ಬೆನ್ನಲ್ಲೇ ಉತ್ತೀರ್ಣರಾದ ಇಬ್ಬರು ವಿದ್ಯಾರ್ಥಿಗಳು, ದುರಂತ ಸಾವನ್ನಪ್ಪಿರುವ ಪ್ರತ್ಯೇಕ ಪ್ರಕರಣಗಳು ವರದಿಯಾಗಿವೆ.


ಮೈಸೂರು ಜಿಲ್ಲೆ, ನಂಜನಗೂಡು ತಾಲೂಕಿನ ಕುರಹಟ್ಟಿ ಗ್ರಾಮದ ತ್ರಿಶಾಲಾ ನಿರೀಕ್ಷಿತ ಅಂಕ ಬರಲಿಲ್ಲ ಎಂಬ ಕಾರಣಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರೆ, ಕೋಲಾರದ ಕಿರಣ್ ಪರೀಕ್ಷೆಯಲ್ಲಿ ಪಾಸ್ ಆದ ಖುಷಿಯಲ್ಲಿ ಈಜಲು ಹೋಗಿ ಬಾವಿಯಲ್ಲಿ ಮುಳುಗಿ ಮೃತಪಟ್ಟಿದ್ದಾನೆ.


ತ್ರಿಶಾಲಾ


ಕಿರಣ್

**ಮನನೊಂದು ಆತ್ಮಹತ್ಯೆ:** ಕುರಹಟ್ಟಿ ಗ್ರಾಮದ ಮಂಜು ಅಲಿಯಾಸ್ ಶಿವಕುಮಾರ್ ಮತ್ತು ಸವಿತಾ ದಂಪತಿ ಪುತ್ರಿ, ನಂಜನಗೂಡಿನ ಶ್ರೀ ಗುರುಮಲ್ಲೇಶ್ವರ ಖಾಸಗಿ ಪ್ರೌಢಶಾಲೆಯ ವಿದ್ಯಾರ್ಥಿನಿ ತ್ರಿಶಾಲಾ, 440 ಅಂಕಗಳೊಂದಿಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾಗಿದ್ದಳು. ಆದರೆ ಈ ಫಲಿತಾಂಶ ಆಕೆಗೆ ಸಮಾಧಾನ ತಂದಿರಲಿಲ್ಲ.

■10ನೇ ಪುಟಕ್ಕೆ



# ಮೈಸೂರಲ್ಲಿ ವಿಷ್ಣುವಿನ ಕೋಟಿಗೊಬ್ಬ

25 ವರ್ಷಗಳ ಹಿಂದೆ ತೆರೆಕಂಡಿದ್ದ ಸಾಹಸಸಿಂಹ ವಿಷ್ಣುವರ್ಧನ್ ಅಭಿನಯದ 'ಕೋಟಿಗೊಬ್ಬ' ಚಿತ್ರ ಇವತ್ತಿಗೂ ತನ್ನ ಜನಪ್ರಿಯತೆ ಉಳಿಸಿಕೊಂಡಿದೆ. ವಿಷ್ಣು ಅವರ ಅದ್ಭುತ ಅಭಿನಯ ಹಾಗೂ ಜನಪ್ರಿಯ ಹಾಡುಗಳಿಂದಲೇ ಈ ಚಿತ್ರ ರಾಜ್ಯಾದ್ಯಂತ ಗೆಲುವಿನ ಪತಾಕೆ ಹಾರಿಸಿತ್ತು. ಆಗ ಹಲವು ದಾಖಲೆಗಳನ್ನು ಬರೆದಿದ್ದ ಈ ಚಿತ್ರ ಎರಡೂವರೆ ದಶಕಗಳ ನಂತರ ರಾಜಧಾನಿ ಬೆಂಗಳೂರಿನಲ್ಲಿ ರಿಲೀಸಾಗಿ ಯಶಸ್ವೀ ಎರಡನೇ ವಾರದ ಪ್ರದರ್ಶನ ಕಾಣುತ್ತಿದೆ. ಇದೀಗ ಮೈಸೂರಿನ ಗಾಯತ್ರಿ, ಹಾಸನದ ಸಹ್ಯಾದ್ರಿ ಅಲ್ಲದೆ ಮಂಡ್ಯದಲ್ಲೂ ತೆರೆಕಂಡಿದೆ. ಆ ಭಾಗದ ಸಾವಿರಾರು ವಿಷ್ಣು ಅಭಿಮಾನಿಗಳು, ನಿರ್ಮಾಪಕರನ್ನು ಸಂಪರ್ಕಿಸಿ ತಮ್ಮ ನೆಚ್ಚಿನ ನಾಯಕನ ಚಿತ್ರವನ್ನು ನಮ್ಮಲ್ಲಿ ಏಕೆ ರಿಲೀಸ್ ಮಾಡಿಲ್ಲ ಎಂದು ಒತ್ತಾಯ ಮಾಡಿ ಕೋಟಿಗೊಬ್ಬ ಚಿತ್ರವನ್ನು ತಮ್ಮೂರ ಥಿಯೇಟರ್‌ಗಳಲ್ಲಿ ಹಾಕಿಸಿಕೊಂಡಿದ್ದಾರೆ. ಅಭಿಮಾನಿಗಳ ಆಗ್ರಹದ ಮೇರೆಗೆ ಈ ಶುಕ್ರವಾರದಿಂದ ಮೈಸೂರು, ಹಾಸನ ಭಾಗದಲ್ಲಿ ಕೋಟಿಗೊಬ್ಬ ಚಿತ್ರ ಬಿಡುಗಡೆಯಾಗಿದ್ದು, ಈ ಭಾಗದಲ್ಲೂ ಸಹ ಚಿತ್ರ ಅದ್ಭುತ ಓಪನಿಂಗ್ ಪಡೆದುಕೊಂಡಿದೆ, ವಿಷ್ಣುವರ್ಧನ್ ಅವರ ಆಪ್ತರಲ್ಲಿ ಒಬ್ಬರಾಗಿದ್ದ ಸೂರಪ್ಪಬಾಬು (ಎಂ.ಬಿ.ಬಾಬು) ಅವರ ನಿರ್ಮಾಣದ ಈ ಚಿತ್ರಕ್ಕೆ ಹಿರಿಯ ನಿರ್ದೇಶಕ ನಾಗಣ್ಣ ಅವರು ಆಕ್ಷನ್‌ಕಟ್ ಹೇಳಿದ್ದರು. ಈ ಚಿತ್ರದ 'ಕಾವೇರಿಗೇ ಕಾಲುಂಗುರ ತೊಡಿಸಿ' ಹಾಗೂ 'ವರ್ಧನಾ ವಿಷ್ಣುವರ್ಧನಾ' ಹಾಡುಗಳನ್ನು ಜನ ಈಗಲೂ ಇಷ್ಟಪಟ್ಟು ಕೇಳುತ್ತಿದ್ದಾರೆ,


ಸೂರಪ್ಪಬಾಬು

ಕಳೆದ ವಾರ ಬೆಂಗಳೂರಲ್ಲಿ ಮುಂಗಡ ಬುಕ್ಕಿಂಗ್ ಶುರುವಾದ ಕೆಲವೇ ಗಂಟೆಗಳಲ್ಲಿ ಶುಕ್ರವಾರದ ಎಲ್ಲಾ ಟಿಕೆಟ್‌ಗಳು ಮಾರಾಟವಾಗಿದ್ದವು. ಅಲ್ಲದೆ ಭಾನುವಾರವೂ ಪ್ರಸನ್ನ ಚಿತ್ರಮಂದಿರ ಹೌಸ್‌ಫುಲ್ ಆಗಿತ್ತು, ಅಭಿಮಾನಿಗಳ ಮನದಲ್ಲಿ ವಿಷ್ಣುವರ್ಧನ್ ಇನ್ನೂ ಜೀವಂತವಾಗಿದ್ದಾರೆ ಎನ್ನುವುದಕ್ಕೆ ಇದಕ್ಕಿಂತ ಉದಾಹರಣೆ ಬೇಕೇ.!?

ಈ ಚಿತ್ರದಲ್ಲಿ ಸಾಹಸಸಿಂಹ ವಿಷ್ಣುವರ್ಧನ್ ಹಾಗೂ ಪ್ರಿಯಾಂಕಾ ಉಪೇಂದ್ರ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದರು. ಬಿಡುಗಡೆಯಾಗಿ 25 ವರ್ಷ ತುಂಬಿದ ಹಿನ್ನೆಲೆಯಲ್ಲಿ ನೆಗೆಟಿವ್ ರೂಪದಲ್ಲಿದ್ದ ಕೋಟಿಗೊಬ್ಬ ಚಿತ್ರವನ್ನು ಸಂಪೂರ್ಣ ಆಧುನೀಕರಣಗೊಳಿಸಿ ಡಿಜಿಟಲ್ ರೂಪದಲ್ಲಿ ಬಿಡುಗಡೆ ಮಾಡುತ್ತಿದ್ದಾರೆ ಚಿತ್ರದ ನಿರ್ಮಾಪಕ ಸೂರಪ್ಪಬಾಬು. 2001ರ ನ.16ರಂದು ಈ ಚಿತ್ರ ತೆರೆಗೆ ಬಂದಿತ್ತು, ಆಗ ರಾಜ್ಯಾದ್ಯಂತ ಯಶಸ್ವೀ ಪ್ರದರ್ಶನ ಕಂಡು ನೂರು ದಿನಗಳನ್ನು ಸಹ ಪೂರೈಸಿತ್ತು.



# 'ಜೆರಾಕ್ಸ್' ಪ್ರತಿಗಳಿಗೆ ಜೀವ ಬಂದಾಗ..!

## ಇಂದಿನಿಂದ ಡಾರ್ಕ್‌ಕಾಮಿಡಿ ವೆಬ್‌ಸರಣಿ

ನಟ, ನಿರ್ಮಾಪಕ ಡಾಲಿ ಧನಂಜಯ ಅವರ ಡಾಲಿ ಪಿಕ್ಚರ್ಸ್ ನಿರ್ಮಾಣ ಹಾಗೂ ಬ್ಲಿಂಕ್ ಖ್ಯಾತಿಯ ಶ್ರೀನಿಧಿ ಅವರ ನಿರ್ದೇಶನದ ಡಾರ್ಕ್‌ಕಾಮಿಡಿ ವೆಬ್‌ಸರಣಿ 'ಜೆರಾಕ್ಸ್' ಇಂದಿನಿಂದ ಜೀ5ನಲ್ಲಿ ಪ್ರಸಾರವಾಗಲಿದೆ, ನಟ ನಾಗಭೂಷಣ್, ಪಾಯಲ್ ಚೆಂಗಪ್ಪ, ಮಂಜು ಪಾವಗಡ, ಓಂಪ್ರಕಾಶ್ ರಾವ್, ಶ್ರೀವತ್ಸ, ವಿಜಯ್‌ಪ್ರಸಾದ್, ತುಕಾಲಿ ಸಂತು, ಜಗ್ಗಪ್ಪ ಈ ಸರಣಿಯ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಆರು ಸಂಚಿಕೆಗಳಲ್ಲಿ ಮೂಡಿಬರಲಿರುವ ಈ ಸರಣಿಯ ಕುರಿತಂತೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ಹಂಚಿಕೊಳ್ಳಲಾಯಿತು. ರಾಯದುರ್ಗದ ಪ್ರಕಾಶ ಜೆರಾಕ್ಸ್ ಅಂಗಡಿ ಕೆಲಸಗಾರ. ಅವನ ಜೆರಾಕ್ಸ್ ಯಂತ್ರಕ್ಕೆ ಒಂದು ತಾಯಿತ ಸೇರಿದಾಗ ಅವನ ಜೀವನವೇ ಬದಲಾಗುತ್ತದೆ. ಆ ಜೆರಾಕ್ಸ್ ಕಾಪಿಗಳಿಗೆ ಜೀವ ಬಂದು, ಪ್ರಕಾಶನ ಜೀವನ ಉಲ್ಟಾಪಲ್ಟಾ ಆಗುತ್ತದೆ. ಇದರಿಂದಾಗುವ ಅಚಾನಕ್ ಬದಲಾವಣೆಗಳು, ಊರಿನಲ್ಲಾಗುವ ಆಶ್ಚರ್ಯಕರ ಘಟನೆಗಳು, ಕುತೂಹಲಕಾರಿ ಸನ್ನಿವೇಶಗಳನ್ನು ಜೆರಾಕ್ಸ್ ಎಳೆಎಳೆಯಾಗಿ ಬಿಚ್ಚಿಡಲಿದೆ. ವೇದಿಕೆಯಲ್ಲಿ ನಿರ್ಮಾಪಕ ಡಾಲಿ ಧನಂಜಯ ಮಾತನಾಡಿ, ಜೆರಾಕ್ಸ್ ಕಾಪಿಗಳಿಗೆ ಜೀವ ಬಂದಾಗ, ಜನರು ತಮ್ಮ ಪ್ರತಿಬಿಂಬವನ್ನೇ ಸ್ವೀಕರಿಸಲು ಹೇಗೆ ನಿರಾಕರಿಸುತ್ತಾರೆ. ಇವೆಲ್ಲವೂ ನನ್ನನ್ನು ಆಕರ್ಷಿಸಿತು. ಈ ಕಥೆಯು ಒಂಟಿತನ, ಹಾಸ್ಯ, ಪಶ್ಚಾತ್ತಾಪ, ಗೊಂದಲ ಎಲ್ಲವನ್ನೂ ಒಳಗೊಂಡಿದೆ. ಇದು ಹಾಸ್ಯದ ಜತೆಗೆ ಜೀವನದ ಮೌಲ್ಯಗಳನ್ನೂ ಹೇಳುತ್ತದೆ. ಜೀ5ನಿಂದ ಒಳ್ಳೊಳ್ಳೆ ಪ್ರತಿಭೆಗಳಿಗೆ ಉತ್ತಮ ವೇದಿಕೆ ಸಿಗುತ್ತಿದೆ ಎಂದರು.

ದೀಪಕ್ ಶ್ರೀರಾಮುಲು ಮಾತನಾಡಿ, ಕಳೆದವರ್ಷ ಇದೇ ಸಮಯದಲ್ಲಿ, ನಾವು ಅಯ್ಯನ ಮನೆ ಬಿಡುಗಡೆ ಮಾಡಿದ್ದೆವು. ಅದಕ್ಕೆ ವೀಕ್ಷಕರಿಂದ ಉತ್ತಮ ಸ್ಪಂದನೆ ಸಿಕ್ಕಿತ್ತು. ಆದಷ್ಟು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಥೆಗಳನ್ನೇ ನಾವು ಆಯ್ಕೆ ಮಾಡಿಕೊಳ್ಳುತ್ತಿದ್ದೇವೆ, ಈ ವರ್ಷ ನಾವು ಇನ್ನಷ್ಟು ನೆಲಮೂಲದ ವೈವಿಧ್ಯಮಯ ಕಥೆಗಳ ಮೂಲಕ ಪ್ರೇಕ್ಷಕರನ್ನು ರಂಜಿಸುವ ಭರವಸೆ ನೀಡುತ್ತೇವೆ ಎಂದರು.

ವೆಬ್ ಸರಣಿಯ ಮುಖ್ಯಸ್ಥ ಆರ್.ಜೆ. ಪ್ರದೀಪ್ ಮಾತನಾಡಿ, ಅಯ್ಯನ ಮನೆ ಬಳಿಕ ಬಂದ ಮಾರಿಗಲ್ಲು, ಶೋಧ, ರಾಕ್ಷಸ ಇದೆಲ್ಲವೂ ಥ್ರಿಲ್ಲರ್ ಜಾನರ್ ಆಗಿತ್ತು, ಅದನ್ನು ಬ್ರೇಕ್ ಮಾಡಬೇಕು ಎಂದು ಶ್ರೀನಿಧಿ ಅವರ ಈ ಕಥೆ ಆಯ್ಕೆ ಮಾಡಿದೆವು. ಇದರಲ್ಲಿ ಒಂದು ಜೆರಾಕ್ಸ್ ಮೆಷಿನ್ ಮನುಷ್ಯನನ್ನು ಡುಪ್ಲಿಕೇಟ್ ಮಾಡಿದಾಗ ಏನಾಗಬಹುದು ಎಂಬ ಲೈನ್ ಬಹಳ ಇಷ್ಟವಾಯ್ತು. ಇದರಲ್ಲಿ ಲಾಜಿಕ್ ಹುಡುಕಬೇಡಿ. ಇದೊಂದು ಸೈಫೈ ಸೆಗ್ಮೆಂಟ್ ಎಂದರು.



# ಟೀಸರ್‌ನಲ್ಲಿ 'ಮಾರಿಗೆ ದಾರಿ' ತೋರಿಸಿದವರು..



ಬೆಂಗಳೂರು ಮೂಲದ ಅಗಸ್ತ್ಯ ಅವರ ನಿರ್ದೇಶನದ 'ಮಾರಿಗೆ ದಾರಿ' ಚಿತ್ರದ ಟೀಸರ್ ಅಣ್ಣಾವ್ರ ಹುಟ್ಟು ಹಬ್ಬದ ಮುನ್ನಾ ದಿನ ರಿಲೀಸಾಗಿದ್ದು, ಕೆಲವೇ ಘಂಟೆಗಳಲ್ಲಿ ವೈರಲ್ ಆಗಿದೆ. ವಿಭಿನ್ನ ಕಥಾಹಂದರ ಒಳಗೊಂಡ ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುವ ಜತೆಗೆ ಅಗಸ್ತ್ಯ ಅವರು ನಾಯಕನಾಗಿಯೂ ಅಭಿನಯಿಸಿದ್ದಾರೆ. ರಾಧ ಫಿಲಂಸ್ ಬ್ಯಾನರ್ ನಡಿಯಲ್ಲಿ ರಾಧಾ ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಉದ್ಯಮಿ ಚೇತನ್ ಚಂದ್ರ ಮತ್ತು ಸತೀಶ್ ಕೃಷ್ಣ ಶೆಟ್ಟಿ ಅವರು ನಿರ್ಮಾಣದಲ್ಲಿ ಕೈ ಜೋಡಿಸಿದ್ದಾರೆ.


ಮಾರಿಗೆ ದಾರಿ ಚಿತ್ರದ ಕುರಿತಂತೆ ಮಾತನಾಡಿದ ನಿರ್ದೇಶಕ ಅಗಸ್ತ್ಯ, 'ಮಾರಿಗೆ ದಾರಿ' ಒಂದು ಕಲ್ಟ್, ಕ್ಲಾಸಿಕ್ ಹಾಗೂ ಭಾವನೆಗಳನ್ನು ತುಂಬಿ ಕೊಂಡಿರುವ ಚಲನಚಿತ್ರ. ಈಗಾಗಲೇ ಟೀಸರ್ ನೋಡಿದವರು ಟೀಸರ್ ತುಂಬಾ ಚೆನ್ನಾಗಿ ಬಂದಿದೆ. ಸಿನಿಮಾ ಯಾವಾಗ ಬಿಡುಗಡೆ ಅಂತ ಕೇಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ರಿಲೀಸ್ ಡೇಟನ್ನು ಪ್ರಕಟಿಸಲಾಗುವುದು ಎಂದು ಹೇಳಿದರು.

ಈಗಾಗಲೇ ಐದಾರು ಸಿನಿಮಾಗಳಲ್ಲಿ ನಟಿಸಿರುವ, ಸದ್ಯ 'ಲಕ್ಷ್ಮೀ ನಿವಾಸ' ಧಾರಾವಾಹಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿರುವ ಮಹಾಲಕ್ಷೀ ಈ ಚಿತ್ರದಲ್ಲಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಕಾಕ್ರೋಚ್ ಸುಧಿ, ಬಲ ರಾಜವಾಡಿ, ಬೆನಕ ನಂಜಪ್ಪ, ವರ್ಧನ್, ಪ್ರದೀಪ್ ಪೂಜಾರಿ, ಮಂಡ್ಯ ಸ್ಟಾರ್ ಅನಂತಕುಮಾರ್, ತಾರಕರಾಮ್ ಇತರರು ಅಭಿನಯಿಸಿದ್ದಾರೆ.

ಈ ಚಿತ್ರದ 4 ಹಾಡುಗಳಿಗೆ ರಿಯೋ ಆಂಟೋನಿ ಸಂಗೀತ ಸಂಯೋಜಿಸಿದ್ದಾರೆ. ಕಿನ್ನಾಳ್‌ರಾಜ್, ಪ್ರಮೋದ್ ಮರವಂತೆ, ತ್ರಿಲೋಕ ತ್ರಿವಿಕ್ರಮ ಸಾಹಿತ್ಯ ಒದಗಿಸಿದ್ದಾರೆ. ಜಗದೀಶ್‌ಗೌಡ ಅವರ ಛಾಯಾಗ್ರಹಣ ಮತ್ತು ಸಂಕಲನ, ಸೈಕ್ ಸೂರಿ ಅವರ ಸಾಹಸ ಈ ಚಿತ್ರಕ್ಕಿದೆ. ವಾರಾಣಾಸಿ, ಬೆಂಗಳೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಮಡಿಕೇರಿ ಮತ್ತು ಮೈಸೂರು ಸುತ್ತ ಮುತ್ತಲ ಸುಂದರ ತಾಣಗಳಲ್ಲಿ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಸದ್ಯದಲ್ಲೇ ಚಿತ್ರ ಸೆನ್ಸಾರ್ ಅಂಗಳಕ್ಕೆ ಹೋಗಲಿದೆ.



# ಸಿನಿಪದಬಂಧ-623





ಉಮ್ಮತ್ತೂರು ಇಂದುಶೇಖರ್
ಮೊ.9880820462

### ಎಡದಿಂದ ಬಲಕ್ಕೆ

1. ವಿಷ್ಣುವರ್ಧನ್ – ಸುಹಾಸಿನಿ ಮಣಿಗಳ ಸರ ಪೋಣಿಸಿದ್ದಾರೆ 5
6. ಸಿಂಹನ ಜೊತೆ ಅಕ್ಷಯ್ ಗೆಲುವು ಕಂಡಿದ್ದಾನೆ 5
7. ಕನ್ನಡದ ವಿಲನ್ 5
9. ರಾಮ್ ಕುಮಾರ್ – ಶ್ವೇತಾ ಅಭಿನಯದಲ್ಲಿ ಕೇಳಿ ಬಂದ ನೂಪುರ ಸದ್ದು ! 4
10. ಯಶ್ – ಓವಿಯಾ ಅಭಿನಯದಿ ಬಂದ 'ಬೇಡ' 4
14. ರಾಘವೇಂದ್ರ ರಾಜ್ ಕುಮಾರ್ ಕಡಲಿನಲ್ಲಿ ಉರಿಸಿದ ಹಣತೆ 5
15. ನಾವಿರುವ ತಾಣವೇ ರಮ್ಯ ಮನೋಹರ 5
16. ದೃಷ್ಟಿ ಬೀಳಬಾರದೆಂದು ಶಂಕರ್‌ನಾಗ್ ನೇತು ಹಾಕಿದ ಪುತ್ಥಳಿ 5

### ಮೇಲಿನಿಂದ ಕೆಳಕ್ಕೆ

1. ಕೆ. ಬಾಲಚಂದರ್ ಗಗನದಿ ಅರಳಿದ ಪುಷ್ಪ ! 6
2. ಮನ್ಮಥನ ಪ್ರಿಯೆ ಓದಿದ ಪುಸ್ತಕ 5
3. ಅಂಬರೀಶ್ ಗೆಲುವಿನ ಕತ್ತಿ ಹಿಡಿದು ಝಳಪಿಸಿದ್ದಾನೆ 5
4. ರವಿಯ ಪ್ರೀತಿಯ ಜಗತ್ತು 4
5. ವೇದ ಚಿತ್ರದ ಅರಳದ ಮಲ್ಲಿಗೆ ಗೀತೆಯ ಗಾಯಕಿ 6
8. ಶಶಿಕುಮಾರ್ ಯಾರೂ ದಿಕ್ಕಿಲದವನನ್ನು ಕಾಪಾಡಿದ್ದಾನೆ 6
11. ರಮೇಶ್ – ಪ್ರೇಮ ಅಭಿನಯಕ್ಕೆ ಎಸ್. ಮಹೇಂದರ್ ನಿರ್ದೇಶಕ 6
12. ಕದನ ಚಿತ್ರದ ನಾಯಕಿ ಉತ್ತರಾರ್ಧ ಕ್ರಿಕೆಟಿಗನನ್ನು ಇರಿಸಿಕೊಂಡಿದ್ದಾಳೆ 5
13. ಜಯಲಲಿತಾ ಬಂಗಾರದ ಪುತ್ಥಳಿ 5
14. ವಿಷ್ಣುವರ್ಧನ್ ಶ್ರೀಮಂತ 4

ಹೆಸರು ______________________

ವಿಳಾಸ ______________________

______________________

ದೂರವಾಣಿ ಸಂಖ್ಯೆ ______________________

## ಸಿನಿ ಪದಬಂಧ 622ರ ಉತ್ತರ

| | | | | | | | | | | |
|---|---|---|---|---|---|---|---|---|---|---|
| ಒ | ಲ | ವಿ | ನ | ಆ | ಸ | ರೆ | | ಲಾ | ಮ | ಅ |
| ಲ | | | ಲ್ಲ | | ರಿ | | ದೇ | | | ಜ |
| ವು | | ನ್ಯಾ | | ರಾ | ಗ | ಜೀ | ವ | ನ | ರಾ | ಗ |
| ಗೆ | ಳೆ | ಯ | | | ಮ | | | | | ಜಾಂ |
| ಲು | | ವೇ | | ಉ | | ರ | ಜ | ನಿ | ಕಾಂ | ತ |
| ವು | | ದೇ | | ಗ್ರ | | | ನು | | | ರ |
| | ದೇ | ವ | ಮಾ | ನ | ವ | | ಮ | | ಗಂ | |
| ಸಾ | | ರು | | ರ | | ಪ | ದ | ವೀ | ಧ | ರ |
| ಹ | | | | ಸಿಂ | | | ಗೆ | | ರ್ವ | |
| ಸ | ಮ | ರ | ಸಿಂ | ಹ | | ಕಾ | ಳ | | ಗಿ | |
| | | | | | | | ತಿ | | ರಿ | ಷಿ |

ವಿಜೇತರು: ಟಿ.ಎಂ.ಚಿರಾಗ್ ಶಿಶಿರ್, ಟಿ.ಕೆ.ಹಳ್ಳಿ, ಮಳವಳ್ಳಿ ತಾ., ಮಂಡ್ಯ ಜಿಲ್ಲೆ-571421



ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

# ಮಳೆ ಹುಡುಗ ಗಣೇಶ್

## ಎರಡು ದಶಕಗಳ ಸಿನಿ ಜರ್ನಿ



ಗೋಲ್ಡನ್‌ಸ್ಟಾರ್ ಗಣೇಶ್ ಚಿತ್ರರಂಗಕ್ಕೆ ಬಂದು ಎರಡು ದಶಕಗಳು ಸಂದಿವೆ. ಈ ಸಮಯದಲ್ಲಿ ತಾನು ಸಾಗಿ ಬಂದ ಹಾದಿಯನ್ನವರು ಮೆಲುಕು ಹಾಕಿದ್ದಾರೆ. ಇತ್ತೀಚೆಗೆ ಗಣೇಶ್ ನಟಿಸಿದ ಕೃಷ್ಣಂ ಪ್ರಣಯಸಖಿ ಚಿತ್ರ ಸೂಪರ್‌ಹಿಟ್ ಆಗಿತ್ತು. ನಿರ್ಮಾಣ ಹಂತದಲ್ಲಿರುವ ಪಿನಾಕಾ, ಬೃಂದಾವಿಹಾರಿ ಇದೇ ವರ್ಷ ತೆರೆಕಾಣಲಿವೆ, 2006ರ ಏ.21ರಂದು ಗಣೇಶ್ ನಾಯಕನಾಗಿ ನಟಿಸಿದ ಮೊದಲ ಚಿತ್ರ 'ಚೆಲ್ಲಾಟ' ಬಿಡುಗಡೆಯಾಗಿತ್ತು. ಎಂ. ಡಿ.ಶ್ರೀಧರ್ ಅವರ ನಿರ್ದೇಶನದಲ್ಲಿ ಮೂಡಿಬಂದಿದ್ದ ಆ ರೊಮ್ಯಾಂಟಿಕ್ ಕಾಮಿಡಿ ಚಿತ್ರ ಗಣೇಶ್‌ಗೆ ಐಡೆಂಟಿಟಿ ತಂದುಕೊಟ್ಟಿತ್ತು. ಅದೇ ವರ್ಷದ ಕೊನೆಯಲ್ಲಿ ತೆರೆಕಂಡ 'ಮುಂಗಾರು ಮಳೆ' ಕನ್ನಡ ಚಿತ್ರರಂಗದಲ್ಲಿ ಹೊಸ ಇತಿಹಾಸವನ್ನೇ ನಿರ್ಮಿಸಿತ್ತು. ಗಣೇಶ್‌ರ ಅದ್ಭುತ ಅಭಿನಯ ಕನ್ನಡಿಗರ ಗಮನ ಸೆಳೆದಿತ್ತು. ಆ ಚಿತ್ರದಿಂದ ಗಣೇಶ್ ಸ್ಟಾರ್ ಪಟ್ಟಕ್ಕೇರಿದರು. ಅದರ ಮುಂದಿನ ವರ್ಷ ತೆರೆಗೆ ಬಂದಿದ್ದ 'ಚೆಲುವಿನ ಚಿತ್ತಾರ' ಕೂಡ ಹಿಟ್ ಆಗಿ ಗಣೇಶ್‌ಗೆ ಗೋಲ್ಡನ್ ಸ್ಟಾರ್ ಪಟ್ಟ ತಂದುಕೊಟ್ಟಿತ್ತು. ಗಣೇಶ್ ಆರಂಭದ ದಿನಗಳು ಅಷ್ಟೇನೂ ಸುಖಕರವಾಗಿರಲಿಲ್ಲ, ಆರ್ಕೆಸ್ಟ್ರಾಗಳಲ್ಲಿ ಡ್ಯಾನ್ಸ್, ಮಿಮಿಕ್ರಿ ಮಾಡುತ್ತಾ, ಟಿವಿಯಲ್ಲಿ ಕಾಮಿಡಿ ಶೋ ನಿರೂಪಕನಾಗಿ ಅವಕಾಶ ಗಿಟ್ಟಿಸಿಕೊಂಡು ಚಿತ್ರರಂಗದಲ್ಲಿ ಬೆಳೆಯಬೇಕೆಂಬ ಕನಸು ಕಂಡಿದ್ದ ಗಣೇಶ್ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸುತ್ತಿದ್ದರು. ಉದಯ ಟಿವಿಯ ಕಾಮಿಡಿ ಟೈಮ್ ಶೋ ನಿರೂಪಿಸುತ್ತ ಎಲ್ಲರ ಮನ ಗೆದ್ದಿದ್ದರು. 'ನಮಸ್ಕಾರ, ನಮಸ್ಕಾರ, ನಮಸ್ಕಾರ' ಎನ್ನುತ್ತ ಫೋನ್‌ಮಾಡಿ ಕಾಗೆ ಹಾರಿಸಿ ಚಮಕ್ ಕೊಡುತ್ತಿದ್ದ ಗಣೇಶ್‌ರ ವಾಕ್ಚಾತುರ್ಯ ಕಂಡ ನಿರ್ದೇಶಕ ಶ್ರೀಧರ್ ತಮ್ಮ 'ಚೆಲ್ಲಾಟ' ಚಿತ್ರದ ನಾಯಕನಾಗಿ ಆಯ್ಕೆ ಮಾಡಿಕೊಂಡಿದ್ದರು, ಆನಂತರ ಬಂದ 'ಮುಂಗಾರು ಮಳೆ' ಗಣೇಶ್‌ರನ್ನು ಯಶಸ್ಸಿನ ಉತ್ತುಂಗಕ್ಕೇರಿಸಿತು, ಆನಂತರ ಅವರು ಹಿಂತಿರುಗಿ ನೋಡಲೇ ಇಲ್ಲ. 'ಗಾಳಿಪಟ', 'ಹುಡುಗಾಟ', 'ಕೃಷ್ಣ' ಹೀಗೆ ಗಣೇಶ್ ನಟಿಸಿದ ಎಲ್ಲಾ ಚಿತ್ರಗಳು ಹಿಟ್ ಆದವು. ಕಳೆದ 2 ದಶಕಗಳಲ್ಲಿ ಹಲವು ಸಿನಿಮಾಗಳ ಮೂಲಕ ಅವರು ಪ್ರೇಕ್ಷಕರನ್ನು ರಂಜಿಸಿದ್ದಾರೆ. ರೊಮ್ಯಾಂಟಿಕ್ ಕಾಮಿಡಿ ಹೀರೊ ಆಗಿಯೇ ಸಿನಿಪ್ರೇಕ್ಷಕರ ಮನದಲ್ಲಿ ನೆಲೆಸಿದ್ದಾರೆ

ಇಂದು ನನ್ನ ಜೀವನದಲ್ಲಿ ಒಂದು ವಿಶೇಷ ಮೈಲಿಗಲ್ಲು – ಸಿನಿಮಾದಲ್ಲಿ 20 ಸುಂದರ ವರ್ಷಗಳು ಎಂದು ಗಣೇಶ್ ಹೇಳಿಕೊಂಡಿದ್ದಾರೆ. ಏಪ್ರಿಲ್ 21...ಚೆಲ್ಲಾಟ ಬಿಡುಗಡೆಯಾದ ದಿನ. ನನ್ನ ಕನಸಿಗೆ ರೆಕ್ಕೆಗಳು ಬಂದ ದಿನ. ಈ ಪ್ರಯಾಣ ನಿಮ್ಮಿಂದ ನಡೆದ ಪವಾಡ ಎಂದು ಸಿನಿರಸಿಕರನ್ನುದ್ದೇಶಿಸಿ ಬರೆದುಕೊಂಡಿದ್ದಾರೆ.

ನನ್ನ ಅದ್ಭುತ ಅಭಿಮಾನಿಗಳಿಗೆ, ನನ್ನ ಪ್ರೀತಿಯ ಪ್ರೇಕ್ಷಕರಿಗೆ ಧನ್ಯವಾದಗಳು. ನಿಮ್ಮ ಪ್ರತಿ ಶಿಳ್ಳೆ, ಪ್ರತಿ ಹರ್ಷೋದ್ಗಾರ, ಪ್ರತಿ ಕಣ್ಣೀರು... ನಾನು ಅದನ್ನು ಅನುಭವಿಸುತ್ತೇನೆ. ಹೆಮ್ಮೆಯಿಂದ ಹೊತ್ತು ಸಾಗಿದ್ದೇನೆ. ದಯವಿಟ್ಟು ಕೇಳಿ... ಇದು ಕೇವಲ ಆರಂಭ. ಮತ್ತಷ್ಟು ಗಟ್ಟಿಯಾಗಿ, ಉತ್ಸಾಹದಿಂದ ನಿಮ್ಮನ್ನು ರಂಜಿಸುವ ಭರವಸೆ ನೀಡುತ್ತೇನೆ. ಈ ಪ್ರಯಾಣ ನನ್ನದು ಮಾತ್ರವಲ್ಲ, ಇದು ನಿಮ್ಮೆಲ್ಲರಿಗೂ ಸೇರಿದ್ದು ಎಂದು ಗಣೇಶ್ ಪೋಸ್ಟ್ ಮಾಡಿದ್ದಾರೆ.

## PUBLIC NOTICE

Notice is hereby given that the property described in the Schedule below is **under dispute and subject matter of O.S.No.102/2025** pending before the Hon'ble Senior Civil Judge, Srirangapatna.

The Public is hereby cautioned that in view of the above said pending case, you are advised not to transact or deal with the below mentioned schedule property.

**SCHEDULE PROPERTY**

**All that piece and parcel of Dry Agricultural Land bearing: Sy. No.109, Extent: 4 Acres 00 Guntas, Location: Huruli-kyathanahalli Village, Kasaba Hobli, Srirangapatna Taluk, Mandya District. Boundaries: East: Remaining land of Puttasiddaiah, West: Jogicha-nnaiah's land, North: Shiva-nna's land, South: Kulla-kkaiah's & Ankaiah's land.**

Sd/- **V. Ganga Bai**, M.A., LL.B
Sd/- **S. Vivekananda**, ML., ACS
Advocates, **VGB ASSOCIATES**
Bungalow No. 3, Jayamahal Palace Hotel, No. 1 Jayamahal Road, Bengaluru-560046.
**Mob: 9845428653**



ಮೈಸೂರು ಮಿತ್ರ 47

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

## 16ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮಾನ್ ನಾಗರಾಜೇಗೌಡರು**

ಜಮೀನ್ದಾರರು ಹಾಗೂ ಕಾಂಗ್ರೆಸ್ ಮುಖಂಡರು, ಲಕ್ಷ್ಮಿಪುರ, ಮೈಸೂರು – 03

ನೀವು ನಮ್ಮನ್ನಗಲಿ ಇಂದಿಗೆ 16 ವರ್ಷವಾಯಿತು. ಸದಾ ನಮ್ಮ ಬಾಳಿನ ಚೇತನವಾಗಿರುವ

ನಿಮ್ಮ ಸವಿ ನೆನಪಿನಲ್ಲಿ ಸ್ಮರಿಸುತ್ತಿರುವ

ಶ್ರೀಮತಿ ಸೌಭಾಗ್ಯಮ್ಮ ನಾಗರಾಜೇಗೌಡರು, ಶ್ರೀಮತಿ ಲೇಖಾ ವೆಂಕಟೇಶ್, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು ಮತ್ತು ಎಲ್.ಎನ್.ವೆಂಕಟೇಶ್, ವಕೀಲರು, ಡಾ. ಸುಜಾತ ಕರುಣಾಕರ್ ಮತ್ತು ಡಾ. ಎನ್. ಕರುಣಾಕರ್, ಪ್ರಜ್ವಲ್ ಹೆಲ್ತ್ ಕೇರ್, ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆ ಬನ್ನಿಮಂಟಪ, ಡಾ|| ಕರುಣಾಕರ್, ನಾಗರಾಜೇಗೌಡ ಹೈಟೆಕ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ರಾಜೀವ್‌ನಗರ 3ನೇ ಹಂತ, ಶ್ರೀಮತಿ ಶೈಲಾ ಶ್ರೀರಾಮ್ ಮತ್ತು ಎನ್.ಶ್ರೀರಾಮ್, ವಕೀಲರು, ಮಾಲೀಕರು **NRG Korner** ಮತ್ತು ವನ್ನೇಶ್‌ಗೌಡ, ಶ್ರೀಮತಿ ಲೇಖನ ವನ್ನೇಶ್‌ಗೌಡ (ಕ್ರಿಚಿಟ್ ಫಾರ್ಮ), ಡಾ. ನಾಗೇಶ್ ಗೌಡ,ಎಂಬಿಬಿಎಸ್, ಎಂ.ಎಸ್, ಆರ್ಥೋ (ಮೂಳೆ ತಜ್ಞರು), ಡಾ. ಲೇಖ ನಾಗೇಶ್ ಗೌಡ ಎಂ.ಬಿ.ಬಿ.ಎಸ್., ಎಂ.ಎಸ್ **Opthomologist**, ಡಾ. ಪ್ರಜ್ವಲ್ ಕರುಣಾಕರ್ ಎಂ.ಬಿ.ಬಿ.ಎಸ್., ಎಂ.ಡಿ, ಡಾ. ಐಶ್ವರ್ಯ ಪ್ರಜ್ವಲ್ ಎಂ.ಬಿ.ಬಿ.ಎಸ್ **(MD)**, ಎಲ್.ಎಸ್.ನಂದಿನಿ (ಎಂ.ಬಿ.ಬಿ.ಎಸ್) ಮತ್ತು ಎಲ್.ಎಸ್ ಪ್ರಜ್ಞ (ಎಂ.ಬಿ.ಬಿ.ಎಸ್) ಮತ್ತು ಕುಟುಂಬವರ್ಗದವರು

ಕರ್ನಾಟಕ ಸರ್ಕಾರ

### ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಆಧ್ಯಾದೇಶ 2000, ಅಧ್ಯಾಯ –2ರ ಅಧಿನಿಯಮ 3(1) ರ ಪ್ರಕಾರ

ಅನುಬಂಧ –ಎ (ನಿರ್ಮಾಣ)

ತಾಲ್ಲೋಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ.

ನಂ.1, ಇಂಡಸ್ಟ್ರೀಯಲ್ 'ಎ' ಲೇಔಟ್, ಬನ್ನಿಮಂಟಪ, ಮೈಸೂರು–570015

ಟೆಂಡರ್ ಸಂಖ್ಯೆ–01 — ಟೆಂಡರ್ ಕರೆಯುವ ಪ್ರಾಧಿಕಾರದ ಹೆಸರು ಮತ್ತು ವಿಳಾಸ — ದಿನಾಂಕ: 24–04–2026

| ಕ್ರ.ಸಂ | ಟೆಂಡರ್ ಹೊರಡಿಸಿದ ಪ್ರಾಧಿಕಾರ | ಟೆಂಡರ್ ಕ್ರಮಾಂಕ ಹಾಗೂ ದಿನಾಂಕ | ಕಾಮಗಾರಿಯ ವಿವರ | ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ | ಇಎಂಡಿ ಮೊತ್ತ ರೂ.ಗಳಲ್ಲಿ | Globle Positioning System PARA METER | ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | ಖಾಲಿ ಟೆಂಡರ್ ಫಾರಂಗಳನ್ನು ವಿತರಿಸಲು ದಿನಾಂಕ ಮತ್ತು ಸಮಯ | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ | ಸ್ವೀಕರಿಸಲಾದ ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ಟೆಂಡರ್ ಸ್ವೀಕರಿಸುವ ಪ್ರಾಧಿಕಾರ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಟಿಎಪಿಸಿಎಂ ಎಸ್ ಲಿ ಮೈಸೂರು | ಟಿಎಪಿಸಿಎಂ–ಎಸ್/ಎಉ ಮೆ–ರೀಕಾ ಇಟೆಂ/1 2026–27 | ಸಂಘದ ಎಆರ್‌ಸಿ ಉಗ್ರಾಣ ಮೇಲ್ಛಾವಣಿ ರಿಪೇರಿ ಕಾಮಗಾರಿ 816 ಚ.ಮೀ | 987096.43 | 21,000 | – | ದಿ: 04–05–2026 ಸಂಜೆ 5 ಗಂಟೆವರೆಗೆ | ದಿ: 02–04–2026 ಬೆಳಿಗ್ಗೆ 10:00 ಗಂಟೆಯಿಂದ | ದಿ: 04–05–2026 ಸಂಜೆ 5 ಗಂಟೆವರೆಗೆ | ದಿ: 6–05–2026 ಬೆಳಿಗ್ಗೆ 11:00 ಗಂಟೆಗೆ | ಮುಖ್ಯಕಾರ್ಯ ನಿರ್ವಾಹಕರು ಟಿಎಪಿಸಿಎಂಎಸ್ (ಲಿ) ಮೈಸೂರು |

ಸೂಚನೆಗಳು :
1 **Globle Positioning System PARA METER** ಕಾಲಂಗಳನ್ನು ಖಡ್ಡಾಯವಾಗಿ ಭರ್ತಿ ಮಾಡಬೇಕು
2 ಈ ನಮೂನೆಯನ್ನು ದ್ವಿಪ್ರತಿಯಲ್ಲಿ ಸಲ್ಲಿಸಬೇಕು ಹಾಗೂ ವಾರ್ತಾ ಪತ್ರಿಕೆಗೆ ನೀಡುವ ನೋಟೀಸಿನ ಎರಡು ಪ್ರತಿ ಸಹ ಸಲ್ಲಿಸಬೇಕು.
3 ಸೂಚಿಸಿದ ಟೆಂಡರ್ ಪ್ರಕಟಣೆಯು ಸಂಬಂಧಪಟ್ಟ ಅನುಬಂಧದಲ್ಲಿ ಉಲ್ಲೇಖಿತವಾಗಿರಬೇಕು.
4. ಸಂಬಂಧಪಟ್ಟ ಟೆಂಡರ್ ಪ್ರಾಧಿಕಾರದವರ ಸಹಿ ಮತ್ತು ಮೊಹರು ಖಡ್ಡಾಯವಾಗಿರಬೇಕು.
5. ಕಾಲಂಗಳನ್ನು ಅನ್ವಯ ಭರ್ತಿ ಮಾಡಿರಬೇಕು.
6. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧ್ಯಾದೇಶ 2000. ಆಧ್ಯಾಯ –5ರ ಅಧಿನಿಯಮ 17ರ ಪ್ರಕಾರ ಕನಿಷ್ಠ ಸಮಯ ನಿಗಧಿಪಡಿಸಿರಬೇಕು.
ಟೆಂಡರ್ ಬುಲೆಟಿನ್

ಟೆಂಡರ್ ಕರೆಯುವ ಪ್ರಾಧಿಕಾರದವರ ಸಹಿ ಮತ್ತು ಮೊಹರು

ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರಿ ಸಂಘ ನಿಯಮಿತ, ಮೈಸೂರು ಪರವಾಗಿ

ಸಹಿ/– ಲಲಿತಮ್ಮ, ಅಧ್ಯಕ್ಷರು

ಸಹಿ/– ಮುಖ್ಯ ಕಾರ್ಯನಿರ್ವಾಹಕರು

# ಭಗೀರಥ ಮಹರ್ಷಿ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಿ

## ಶಾಸಕ ದರ್ಶನ್ ಧ್ರುವನಾರಾಯಣ್ ಸಲಹೆ

ನಂಜನಗೂಡು, ಏ.23– ಭಗೀರಥ ಮಹರ್ಷಿ ತಮ್ಮ ತಪಸ್ಸಿನ ಫಲದಿಂದಾಗಿ ಭೂಮಿಗೆ ಗಂಗೆ ಕರೆ ತಂದವರು. ಭಗೀರಥ ಮಹರ್ಷಿ ಕಥೆಯು ಕಠಿಣ ಪರಿಶ್ರಮ ಮತ್ತು ತ್ಯಾಗದಿಂದ ಏನನ್ನಾದರೂ ಸಾಧಿಸಬಹುದು ಎಂಬ ದೃಢ ಸಂಕಲ್ಪವನ್ನು ಎತ್ತಿ ಹಿಡಿಯುತ್ತದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.



ನಂಜನಗೂಡಿನಲ್ಲಿ ಭಗೀರಥ ಮಹರ್ಷಿ ಜಯಂತಿ ನಡೆಯಿತು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಏರ್ಪಡಿಸಿದ್ದ ಭಗೀರಥ ಮಹರ್ಷಿ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಗೀರಥ ಮಹರ್ಷಿ ಅವರು ತಮ್ಮ ಪೂರ್ವಜರ ಆತ್ಮ ಶಾಂತಿಗಾಗಿ ಕಠಿಣ ತಪಸ್ಸು ಮಾಡಿ, ಕೈಲಾಸದಿಂದ ಗಂಗೆಯನ್ನು ಭೂಮಿಗೆ ತಂದರು. ಇಂದು ಗಂಗಾ ನದಿಯಿಂದ ಸಹಸ್ರಾರು ರೈತರಿಗೆ ಅನುಕೂಲವಾಗುತ್ತಿದೆ. ತಾಳ್ಮೆ, ಸಹನೆ, ಕಠಿಣ ಪರಿಶ್ರಮ, ನಿಸ್ವಾರ್ಥ ಮನೋಭಾವವಿದ್ದರೆ ಸಾಧನೆ ಸಾಧ್ಯ ಎಂಬುದನ್ನು ಭಗೀರಥ ಮಹರ್ಷಿ ಅವರ ಕಥೆಯಿಂದ ತಿಳಿಯಬಹುದಾಗಿದೆ. ಭಗೀರಥ ಮಹರ್ಷಿ ಅಸಾಧ್ಯವಾದುದ್ದನ್ನು ಸಾಧ್ಯವಾಗಿಸಿದ ಛಲ ಬಿಡದ ಪ್ರಯತ್ನದ ಸಂಕೇತವಾಗಿದ್ದಾರೆ. ಅವರ ಸಾಧನೆಯ ಇತಿಹಾಸವನ್ನು ನಮ್ಮ ಮುಂದಿನ ಪೀಳಿಗೆಯ ಯುವಕರಿಗೆ ಮತ್ತು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ತಿಳಿಸುವ ಮೂಲಕ ಅವರಿಗೆ ಉತ್ತಮ ಶಿಕ್ಷಣ ದೊರಕುವಂತೆ ಮಾಡಬೇಕು. ಜೊತೆಗೆ ಭಗೀರಥ ಮಹರ್ಷಿ ಅವರ ತತ್ವ ಸಿದ್ಧಾಂತ, ಸಮಾಜಕ್ಕೆ ನೀಡಿರುವ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಮಹೇಶ್, ಜಿಪಂ ಮಾಜಿ ಸದಸ್ಯರಾದ ಕೆ.ಬಿ.ಸ್ವಾಮಿ, ಲತಾ ಸಿದ್ದಶೆಟ್ಟಿ, ಮುಖಂಡರಾದ ಸೋಮಣ್ಣ, ಬಾಲಚಂದ್ರ, ಮುದ್ದುಮಾದಶೆಟ್ಟಿ, ಸಿದ್ದರಾಜು, ರಾಜೇಶ್, ರಾಜು, ತಹಸಿಲ್ದಾರ್ ಸ್ಮಿತಾ ರಾಮು, ತಾಪಂ ಇಓ ಜೆರಾಲ್ಡ್ ರಾಜೇಶ್ ಸೇರಿದಂತೆ ಹಲವರಿದ್ದರು.

ಕೆ.ಆರ್.ನಗರ, ಸಾಲಿಗ್ರಾಮಕ್ಕೆ

# ಇಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭೇಟಿ

## ಮಾಜಿ ಸಚಿವ ಸಾ.ರಾ.ಮಹೇಶ್ ಸಾಥ್: ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ

ಭೇರ್ಯ, ಏ.23– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮಾಜಿ ಸಚಿವ ಸಾ.ರಾ.ಮಹೇಶ್ ಜೊತೆಗೂಡಿ ಏ.24ರಂದು ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕುಗಳಿಗೆ ಭೇಟಿ ನೀಡಿ ಧಾರ್ಮಿಕ ಹಾಗೂ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ ಎಂದು ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್ ತಿಳಿಸಿದ್ದಾರೆ.



ಬೆಳಗ್ಗೆ 10.30ಕ್ಕೆ ಕೆಂಚನಹಳ್ಳಿಯಲ್ಲಿ ಮೇಲನಕಟ್ಟೆ ಗಣಪತಿ ದೇವಸ್ಥಾನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. 11.45ಕ್ಕೆ ಹೊಸ ಅಗ್ರಹಾರದಲ್ಲಿ ಶ್ರೀಬಸವೇಶ್ವರಸ್ವಾಮಿ ದೇವಾಲಯದ ಕುರ್ಜು ಹಾಗೂ ಬಸವೇಶ್ವರಸ್ವಾಮಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮಧ್ಯಾಹ್ನ 1 ಗಂಟೆಗೆ ಕೆ.ಆರ್.ನಗರದ ತಾಪಂ ಆವರಣದಲ್ಲಿ 126 ವಿಕಲಚೇತನರಿಗೆ ವ್ಹೀಲ್ ಚೇರ್, ತ್ರಿಚಕ್ರ ಸೈಕಲ್, ವಾಕಿಂಗ್ ಸ್ಟಿಕ್, ಶ್ರಾವಣ ಸಾಧನ ಸೇರಿದಂತೆ 155 ಅಗತ್ಯ ಸಾಧನ ಸಲಕರಣೆ ವಿತರಿಸಲಿದ್ದಾರೆ. ಮಧ್ಯಾಹ್ನ 2 ಗಂಟೆಗೆ ಸಾಲಿಗ್ರಾಮದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನಕ್ಕೆ ಭೇಟಿ,



ಎಸ್‌ಎಲ್‌ಆರ್ ಕಲ್ಯಾಣ ಮಂಟಪದಲ್ಲಿ ನಡೆಯುವ ಬೀಗರ ಔತಣ ಕೂಟದಲ್ಲಿ ಭಾಗವಹಿಸಲಿದ್ದು, ಮಧ್ಯಾಹ್ನ 2.30ಕ್ಕೆ ಹರದನಹಳ್ಳಿ ಜೆಡಿಎಸ್ ಮುಖಂಡ ಲಿಂಗಪ್ಪ ಮನೆಗೆ ಭೇಟಿ ನೀಡಲಿದ್ದು, ನಂತರ ಅನಂತು ಅವರ ಮನೆಯಲ್ಲಿ ಊಟ ಮುಗಿಸಿದ ಬಳಿಕ ಮಧ್ಯಾಹ್ನ 3.30ಕ್ಕೆ ಹೆಬ್ಸೂರು ಗ್ರಾಮದಲ್ಲಿ ನೂತನ ಬಿಎಂಸಿ ಕೇಂದ್ರ ಉದ್ಘಾಟಿಸಲಿದ್ದಾರೆ. ಆದ್ದರಿಂದ ಜೆಡಿಎಸ್ ಪಕ್ಷದ ಕಾರ್ಯಕರ್ತರು, ಮುಖಂಡರು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಪ್ರಕಟಣೆ ತಿಳಿಸಿದೆ.


ಶ್ರೀ ಬಸವೇಶ್ವರಸ್ವಾಮಿ ದೇವಾಲಯದ ಕುರ್ಜು ಲೋಕಾರ್ಪಣೆಗೆ ಸಿದ್ಧಗೊಂಡಿರುವುದು.

# ಎನ್‌ಕೆಎಫ್ ಪಬ್ಲಿಕ್ ಶಾಲೆಗೆ ಶೇ.100 ಫಲಿತಾಂಶ


ಸಹನ.ಪಿ ಗೀತಾ.ಆರ್ ವೈಷ್ಣವಿ.ಎನ್ ಗೌತಮ್.ಎಲ್

ತಿ.ನರಸೀಪುರ, ಏ.23– ಪಟ್ಟಣದ ಎನ್‌ಕೆಎಫ್ ಪಬ್ಲಿಕ್ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಲಭಿಸಿದೆ.

ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ನಾಲ್ವರು ಅತ್ಯುನ್ನತ, 9 ಪ್ರಥಮ, ಐವರು ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಪಿ.ಸಹನಾ (ಶೇ.92) ಪ್ರಥಮ, ಆರ್.ಗೀತಾ (ಶೇ.89) ದ್ವಿತೀಯ, ಎನ್.ವೈಷ್ಣವಿ (ಶೇ.87) ತೃತೀಯ, ಎಲ್.ಗೌತಮ್ (ಶೇ.85) ನಾಲ್ಕನೇ ಸ್ಥಾನಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳನ್ನು ಶಾಲೆ ಆಡಳಿತ ಮಂಡಳಿ ಅಭಿನಂದಿಸಿದೆ.

# ಹನುಮನಾಳು ಶ್ರೀಶಾರದ ಶಾಲೆಗೆ ಉತ್ತಮ ಫಲಿತಾಂಶ



ತಿ.ನರಸೀಪುರ, ಏ.23– ತಾಲೂಕಿನ ಹನುಮನಾಳು ಶ್ರೀಶಾರದ ಶಾಲೆಗೆ ಶೇ.100ರಷ್ಟು ಫಲಿತಾಂಶ ಬಂದಿದೆ. ಆಂಗ್ಲ ಮಾಧ್ಯಮದಲ್ಲಿ ಪರೀಕ್ಷೆ ಬರೆದಿದ್ದ ಎಲ್ಲಾ 21 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶಾಲೆಯ ವಿದ್ಯಾರ್ಥಿ ಧೀರಜ್ 586, ಜಿ.ಯು.ಚಾರಿತ್ರ್ಯ 578, ಎಸ್.ಆರ್.ಶಿವಶಂಕರ್ 569 ಅಂಕ ಪಡೆದಿದ್ದಾರೆ.

ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ 26 ವಿದ್ಯಾರ್ಥಿಗಳ ಪೈಕಿ 21 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇ.81 ರಷ್ಟು ಫಲಿತಾಂಶ ಬಂದಿದೆ. ಶ್ರೇಯಾ 548, ವಿದ್ಯಾಶ್ರೀ 544 ಅಂಕಗಳನ್ನು ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ. ಉತ್ತಮ ಫಲಿತಾಂಶಕ್ಕೆ ಕಾರಣರಾದ ವಿದ್ಯಾರ್ಥಿಗಳನ್ನು ಹನುಮನಾಳು ಶ್ರೀಶಾರದ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಹನುಮನಾಳು ಸಿದ್ದೇಗೌಡ ಅಭಿನಂದಿಸಿದ್ದಾರೆ.

# ಎಸ್‌ಎಸ್‌ಎಲ್‌ಸಿ: ನಂ.ಗೂಡಿಗೆ ಶೇ.94ರಷ್ಟು ಫಲಿತಾಂಶ

● ಮೈಸೂರು ಜಿಲ್ಲೆಗೆ 6ನೇ ಸ್ಥಾನ ● ಒಟ್ಟು 4339 ವಿದ್ಯಾರ್ಥಿಗಳ ಪೈಕಿ 4077 ಮಂದಿ ತೇರ್ಗಡೆ

ನಂಜನಗೂಡು, ಏ.23– ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು, ನಂಜನಗೂಡು ತಾಲೂಕು ಶೇ.94 ರಷ್ಟು ಫಲಿತಾಂಶ ಪಡೆಯುವ ಮೂಲಕ ಮೈಸೂರು ಜಿಲ್ಲೆಗೆ 6ನೇ ಸ್ಥಾನ ಪಡೆದಿದೆ.

ತಾಲೂಕಿನಲ್ಲಿ 2071 ಬಾಲಕರು, 2068 ಬಾಲಕಿಯರು ಸೇರಿದಂತೆ ಒಟ್ಟು 4,339 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 1898 ಬಾಲಕರು, 2079 ಬಾಲಕಿಯರು ಸೇರಿದಂತೆ ಒಟ್ಟು 4077 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 173 ಬಾಲಕರು ಮತ್ತು 89 ಬಾಲಕಿಯರು ಸೇರಿದಂತೆ ಒಟ್ಟು 262 ವಿದ್ಯಾರ್ಥಿಗಳು ಅನುತ್ತೀರ್ಣಗೊಂಡಿದ್ದಾರೆ. ಈ ಬಾರಿಯೂ ವಿದ್ಯಾರ್ಥಿನಿಯರೇ ಅತೀ ಹೆಚ್ಚು ಉತ್ತೀರ್ಣರಾಗುವ ಮೂಲಕ ಮೇಲುಗೈ ಸಾಧಿಸಿದ್ದಾರೆ.



**ಚೈತ್ರಾ ತಾಲೂಕಿಗೆ ಪ್ರಥಮ:** ತಾಲೂಕಿನ ದೇವನೂರು ಗ್ರಾಮದ ಮಾದೇಶ ನಾಯಕ ಮತ್ತು ಲಕ್ಷ್ಮಮ್ಮ ದಂಪತಿ ಪುತ್ರಿ, ಆದರ್ಶ ಶಾಲೆ ವಿದ್ಯಾರ್ಥಿನಿ ಡಿ.ಎಂ.ಚೈತ್ರಾ 625ಕ್ಕೆ 620 ಅಂಕಗಳನ್ನು ಪಡೆಯುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾಳೆ. ಕನ್ನಡ 125, ಇಂಗ್ಲಿಷ್ 99, ಹಿಂದಿ 100, ವಿಜ್ಞಾನ 97, ಗಣಿತ 99, ಸಮಾಜ ವಿಜ್ಞಾನದಲ್ಲಿ 100 ಅಂಕ ಗಳಿಸಿದ್ದಾಳೆ.

ಕಾರ್ಮೆಲ್ ಶಾಲೆಯ ಎನ್.ಮೋಹಿತ್ 617 ಅಂಕ, ಗುಪ್ತಶ್ರೀ 617 ಅಂಕಗಳನ್ನು ಪಡೆಯುವ ಮೂಲಕ ತಾಲೂಕಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಸಿಟಿಜನ್ ಶಾಲೆಯ ಎನ್.ಶ್ರೇಯಾ 615 ಅಂಕಗಳನ್ನು ಪಡೆಯುವ ಮೂಲಕ ತಾಲೂಕಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

# ನಾಳೆ ಡಾ.ಅಂಬೇಡ್ಕರ್ 135ನೇ ಜಯಂತಿ

ತಿ.ನರಸೀಪುರ, ಏ.23– ಇಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಮಿತಿಯಿಂದ ಏ.25ರಂದು ಸಂಜೆ 4 ಗಂಟೆಗೆ ಪಟ್ಟಣದ ತ್ರಿವೇಣಿನಗರದ ಮಹಾನಾಯಕ ವೃತ್ತದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಎನ್.ಮಹೇಶ್ ತಿಳಿಸಿದ್ದಾರೆ.

ಪಟ್ಟಣದ ತಮ್ಮ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೂಡ್ಲೂರು ನಳಂದ ಬುದ್ಧ ವಿಹಾರದ ಬೋಧಿರತ್ನ ಭಂತೇಜಿ ಕಾರ್ಯಕ್ರಮದ ಸಾನಿಧ್ಯ ವಹಿಸುವರು. ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಎಂಎಲ್‌ಸಿ ಡಾ.ಯತೀಂದ್ರ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು. ಸಂಸದ ಸುನೀಲ್ ಬೋಸ್ ಮೆರವಣಿಗೆಗೆ ಚಾಲನೆ ನೀಡುವರು. ಸಮಿತಿ ಅಧ್ಯಕ್ಷ ಎನ್.ಮಹೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಜಿಪಂ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಲ್ಲು, ಕಂಟ್ರಾಕ್ಟರ್ ಬಿ.ಸಿದ್ದರಾಜು, ಡಾ.ರೇವಣ್ಣ, ಡಾ.ನಂಜಯ್ಯ, ಪರಶಿವಮೂರ್ತಿ, ವೈದ್ಯಾಧಿಕಾರಿ ಡಾ.ಅಭಿಲಾಷ್, ಇನ್ಸ್‌ಪೆಕ್ಟರ್ ಧನಂಜಯ್, ಪಿಡಬ್ಲ್ಯುಡಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಸ್.ಸತೀಶ್‌ಚಂದ್ರನ್, ಸೆಸ್ಕ್ ಜೂನಿಯರ್ ಇಂಜಿನಿಯರ್ ಮಂಜುನಾಥ್, ಗೌರವ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಕಾರ್ಯದರ್ಶಿ ಎನ್.ಮಹೇಶ್, ಖಜಾಂಚಿ ಕೆ.ಕೆಂಚಪ್ಪ, ಸಲಹೆಗಾರ ಶ್ರೀಧರ್ ಇತರರು ಭಾಗವಹಿಸಲಿದ್ದಾರೆ ಎಂದರು.

# ಅರಣ್ಯ ರಕ್ಷಕ ಸುಪ್ರೀತ್ ಶವ ಪತ್ತೆ

ಹೆಚ್.ಡಿ.ಕೋಟೆ, ಏ.23– ಕಬಿನಿ ಹಿನ್ನೀರಲ್ಲಿ ಈಜಲು ಹೋಗಿ ಸಾವನ್ನಪ್ಪಿದ ಅರಣ್ಯ ರಕ್ಷಕ ಸುಪ್ರೀತ್ ಶವ ಗುರುವಾರ ಮುಂಜಾನೆ ಪತ್ತೆಯಾಗಿದೆ.



ತಾಲೂಕಿನ ಅಂಕನಾಥಪುರ ಗ್ರಾಮದ ನಿವಾಸಿ, ಡಿ.ಬಿ.ಕುಪ್ಪೆ ಅರಣ್ಯ ವ್ಯಾಪ್ತಿಯ ಅರಣ್ಯ ರಕ್ಷಕ ಸುಪ್ರೀತ್ ಅವರು ಬುಧವಾರ ಬೆಳಗ್ಗೆ ತನ್ನ ಸಹೋದ್ಯೋಗಿಗಳಾದ ಅಮನ್, ಅಯ್ಯಪ್ಪ ಅವರೊಂದಿಗೆ ಉದ್ಬೂರು ಗೇಟ್ ಕಳ್ಳಬೇಟೆ ತಡೆ ಶಿಬಿರ ಬಳಿಯ ಕಬಿನಿ ಹಿನ್ನೀರಿನಲ್ಲಿ ಈಜಲು ತೆರಳಿದ್ದರು. ಈ ವೇಳೆ ತೀರಾ ಆಯಾಸಗೊಂಡು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದರು. ಬಳಿಕ ಸ್ಥಳಕ್ಕಾಗಮಿಸಿದ ಅರಣ್ಯ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ನುರಿತ ಈಜುಗಾರರ ಸಹಾಯದೊಂದಿಗೆ ಕಾರ್ಯಾಚರಣೆ ನಡೆಸಿದರೂ ಶವ ಪತ್ತೆಯಾಗಿರಲಿಲ್ಲ. ಇಂದು ಮುಂಜಾನೆ ಶವ ನೀರಿನಲ್ಲಿ ತೇಲುತ್ತಿರುವುದನ್ನು ಗಮನಿಸಿದ ಅರಣ್ಯ ಸಿಬ್ಬಂದಿ ಶವವನ್ನು ಮೇಲೆತ್ತಿ ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು.

# ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು

ಮಲ್ಕುಂಡಿ, ಏ.23– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿನ ಹೆಡಿಯಾಲ–ಬೇಗೂರು ಮುಖ್ಯ ರಸ್ತೆಯ ಈರೇಗೌಡನಹುಂಡಿಯಲ್ಲಿ ಬುಧವಾರ ಸಂಜೆ ನಡೆದಿದೆ.



ಗುಂಡ್ಲುಪೇಟೆ ತಾಲೂಕಿನ ರಾಘವಾಪುರ ಗ್ರಾಮದ ನಿವಾಸಿ ಭರತ್ ಕುಮಾರ್ (25) ಸಾವನ್ನಪ್ಪಿದವರು. ಈತ ತನ್ನ ಸ್ನೇಹಿತ ಚೇತನ್ ಎಂಬುವರೊಂದಿಗೆ ಕಾರ್ಯ ನಿಮಿತ್ತ ಸ್ವಗ್ರಾಮದಿಂದ ಹೆಡಿಯಾಲಕ್ಕೆ ತೆರಳುತ್ತಿದ್ದ ವೇಳೆ ವೇಗವಾಗಿ ಬಂದ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಭರತ್ ಕುಮಾರ್ ಸ್ಥಳದಲ್ಲೇ ಸಾವನ್ನಪ್ಪಿದರೆ, ಹಿಂಬದಿ ಸವಾರ ಚೇತನ್ ಗಾಯಗೊಂಡು ಚಿಕಿತ್ಸೆಗಾಗಿ ಮೈಸೂರಿನ ಕೆಆರ್.ಆಸ್ಪತ್ರೆಗೆ ದಾಖಲಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಲ್ಲಹಳ್ಳಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಏಳನೇ ಪುಟದಿಂದ

# ದಾಖಲೆಯ ಶೇ.94.10 ಫಲಿತಾಂಶ

**ದ.ಕನ್ನಡ ಪ್ರಥಮ:** ಈ ಬಾರಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳೂ ನಗರ ಪ್ರದೇಶಕ್ಕೆ ಸರಿಸಮನಾಗಿ ಫಲಿತಾಂಶ ಪಡೆದಿದ್ದಾರೆ. ಎಂದಿನಂತೆ ಹೆಣ್ಣುಮಕ್ಕಳೇ ಮೇಲುಗೈ ಸಾಧಿಸಿದ್ದು,

ದಕ್ಷಿಣ ಕನ್ನಡ ಜಿಲ್ಲೆ ಶೇ.98.4ರಷ್ಟು ವಿದ್ಯಾರ್ಥಿಗಳು ತೇರ್ಗಡೆಗೊಂಡು ಪ್ರಥಮ ಸ್ಥಾನದಲ್ಲಿದ್ದರೆ, ಕಲಬುರಗಿ ಶೇಕಡ 85.06ರಷ್ಟು ಫಲಿತಾಂಶದೊಂದಿಗೆ ಕೊನೆ ಸ್ಥಾನದಲ್ಲಿದೆ.

ಅನುದಾನ ರಹಿತ ಶಾಲೆಗಳಲ್ಲಿ ಫಲಿತಾಂಶ ಶೇಕಡ 95.04ರಷ್ಟಿದ್ದರೆ, ಸರ್ಕಾರಿ ಶಾಲೆಗಳಲ್ಲಿ ಶೇ.93.97ರಷ್ಟು ವಿದ್ಯಾರ್ಥಿಗಳು ತೇರ್ಗಡೆಗೊಂಡಿರುವುದು ಶಿಕ್ಷಣ ಗುಣಮಟ್ಟ ಹೆಚ್ಚಿರುವುದಕ್ಕೆ ಸಾಕ್ಷಿಯಾಗಿದೆ.

**ಸರ್ಕಾರಿ ಶಾಲೆ ವಿದ್ಯಾರ್ಥಿಗೆ 625:** ಚಿಕ್ಕೋಡಿಯ ಕಟಗೇರಿ ಸರ್ಕಾರಿ ಶಾಲೆಯ ವಿದ್ಯಾರ್ಥಿ ಪ್ರಾರ್ಥನಾ ನಾಗಪ್ಪ ಬಿರಾದಾರ್ ಪಾಟೀಲ್ ಪೂರ್ಣ 625 ಅಂಕ ಗಳಿಸಿದ 7 ವಿದ್ಯಾರ್ಥಿಗಳ ಪೈಕಿ ಒಬ್ಬರು. ಉಳಿದಂತೆ ದಾವಣಗೆರೆಯ ಜಿ.ಭರತ್, ಚಿಕ್ಕಮಗಳೂರಿನ ಬೃಂದಾ ಎಂ. ತಾಪ್ಸೆ, ಬೆಂಗಳೂರು ಉತ್ತರದ ಧನುಷ್ ಸುಧೀರ್ ಮೈಸೂರ್, ಉಡುಪಿಯ ಪ್ರೀತಂ ಜಿ.ಪೂಜಾರಿ, ವಿಜಯಪುರದ ಸೌಜನ್ಯ ಬಸವರಾಜ ಕಂದಕೂರ್ ಹಾಗೂ ರಾಯಚೂರಿನ ಸುಖದೇವ್ ಪೂರ್ಣ ಅಂಕ ಗಳಿಸಿದವರ ಪಟ್ಟಿಯಲ್ಲಿದ್ದಾರೆ.

ಒಟ್ಟು 625ರಲ್ಲಿ 624 ಅಂಕ ಪಡೆದವರು 21 ವಿದ್ಯಾರ್ಥಿಗಳಿದ್ದು, 625ಕ್ಕೆ 623 ಅಂಕ ಗಳಿಸಿದ 28 ವಿದ್ಯಾರ್ಥಿಗಳಿದ್ದಾರೆ, 625ರಲ್ಲಿ 622 ಅಂಕ ಗಳಿಸಿದ 74 ವಿದ್ಯಾರ್ಥಿಗಳು, 625ರಲ್ಲಿ 621 ಅಂಕ ಪಡೆದ 98 ಮಂದಿ, ಐದನೇ ಸ್ಥಾನದಲ್ಲಿ 620 ಅಂಕ ಪಡೆದ ವಿದ್ಯಾರ್ಥಿಗಳ ಸಂಖ್ಯೆ 150 ಇದೆ.

ತೃತೀಯ ಭಾಷೆಗೆ ಅಂಕ ಬದಲಿಗೆ ಗ್ರೇಡಿಂಗ್ ನೀಡುವ ವಿಚಾರದಲ್ಲಿ ಗೊಂದಲ ಉಂಟಾದರೂ ವಿದ್ಯಾರ್ಥಿಗಳು ಒತ್ತಡಕ್ಕೆ ಒಳಗಾಗದೆ ಪರೀಕ್ಷೆ ಬರೆದಿದ್ದರಿಂದ ಈ ಐತಿಹಾಸಿಕ ಫಲಿತಾಂಶ ಬರಲು ಕಾರಣವಾಗಿದೆ ಎಂದರು.

**ಬಾಲಕಿಯರ ಸಾಧನೆ :** ಒಟ್ಟು 6,176 ಶಾಲೆಗಳಲ್ಲಿ ಶೇಕಡ 100ರಷ್ಟು ಫಲಿತಾಂಶ ಬಂದಿದ್ದರೆ, ಅದರಲ್ಲಿ 2,393 ಸರ್ಕಾರಿ ಶಾಲೆಗಳಾಗಿವೆ. ಈ ಬಾರಿ ಶೇ.96.18 ರಷ್ಟು ವಿದ್ಯಾರ್ಥಿನಿಯರು, ಶೇ.91.94 ರಷ್ಟು ಬಾಲಕರು ತೇರ್ಗಡೆಯಾಗಿದ್ದಾರೆ.

ಅನುತ್ತೀರ್ಣಗೊಂಡ ಶೇ.6ರಷ್ಟು ವಿದ್ಯಾರ್ಥಿಗಳಿಗೆ ಎರಡನೇ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗುವುದು ಎಂದರು. ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಸರ್ಕಾರಿ ಶಾಲೆಗಳ ಸಾಧನೆ ಗಮನಿಸಿ, ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸಲು ಮುಂದಾಗಬೇಕು ಎಂದು ಮಧು ಬಂಗಾರಪ್ಪ ಮನವಿ ಮಾಡಿದರು.

| ಜಿಲ್ಲೆಯ ಹೆಸರು | ಉತ್ತೀರ್ಣ ಪ್ರಮಾಣ (%) |
|---|---|
| ದಕ್ಷಿಣ ಕನ್ನಡ | 98.40 |
| ಉಡುಪಿ | 98.18 |
| ಉತ್ತರ ಕನ್ನಡ | 98.09 |
| ಹಾಸನ | 97.51 |
| ಮಂಡ್ಯ | 97.45 |
| ಶಿರಸಿ | 97.21 |
| ಹಾವೇರಿ | 96.87 |
| ಕೊಡಗು | 96.68 |
| ಶಿವಮೊಗ್ಗ | 96.56 |
| ವಿಜಯನಗರ | 96.39 |
| ಬೆಂಗಳೂರು ಗ್ರಾಮಾಂತರ | 95.83 |
| ಧಾರವಾಡ | 95.59 |
| ಕೋಲಾರ | 95.5 |
| ಬಾಗಲಕೋಟೆ | 95.42 |
| ಬೆಂಗಳೂರು ಉತ್ತರ | 95.33 |
| ಗದಗ | 95.24 |
| ಚಿಕ್ಕಮಗಳೂರು | 94.99 |
| ಬೆಳಗಾವಿ | 94.75 |
| ದಾವಣಗೆರೆ | 94.64 |
| ಮೈಸೂರು | 94.45 |
| ರಾಯಚೂರು | 94.41 |
| ವಿಜಯಪುರ | 94.16 |
| ಚಿಕ್ಕೋಡಿ | 94.09 |
| ಬಳ್ಳಾರಿ | 93.35 |
| ಕೊಪ್ಪಳ | 93.1 |
| ರಾಮನಗರ | 92.83 |
| ಚಿತ್ರದುರ್ಗ | 92.25 |
| ಬೀದರ್ | 92.17 |
| ತುಮಕೂರು | 92.04 |
| ಚಾಮರಾಜನಗರ | 91.89 |
| ಯಾದಗಿರಿ | 91.89 |
| ಬೆಂಗಳೂರು ದಕ್ಷಿಣ | 91.64 |
| ಚಿಕ್ಕಬಳ್ಳಾಪುರ | 90.88 |
| ಮಧುಗಿರಿ | 90.24 |
| ಕಲಬುರಗಿ | 85.06 |

ವಿದ್ಯಾರ್ಥಿಗಳು ಬರೆದ ಉತ್ತರಗಳಿಗೆ ಮೌಲ್ಯಮಾಪಕರು ಎಷ್ಟು ಅಂಕ ನೀಡಿದ್ದಾರೆ. ಅಥವಾ ಉತ್ತರ ಪೂರ್ಣ ಪ್ರಮಾಣದಲ್ಲಿ ಮೌಲ್ಯಮಾಪನ ಆಗಿದೆಯೇ ಎಂಬುದನ್ನು ತಿಳಿಯಲು ಉತ್ತರ ಪತ್ರಿಕೆಯ ಸ್ಕ್ಯಾನ್ ಪ್ರತಿ ಪಡೆಯಬಹುದಾಗಿದೆ.

ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಮುನ್ನ ಸ್ಕ್ಯಾನ್ ಪ್ರತಿ ಪಡೆಯುವುದು ಕಡ್ಡಾಯ, ನಿಗದಿತ ದಿನಾಂಕದ ನಂತರ ಬರುವ ಅರ್ಜಿಯನ್ನು ಪರೀಕ್ಷಾ ಮಂಡಳಿ ಸ್ವೀಕರಿಸುವುದಿಲ್ಲ ಎಂದರು.

# 625ಕ್ಕೆ 624 ಅಂಕ; ರಾಜ್ಯಕ್ಕೆ 2ನೇ, ಜಿಲ್ಲೆಗೇ ಟಾಪರ್

### ಶಾಲೆ ಅಲ್ಲದೆ ಮನೆಯಲ್ಲಿ ಕನಿಷ್ಠ ನಾಲ್ಕೈದು ಗಂಟೆ ಅಭ್ಯಾಸ ಮಾಡುತ್ತಿದ್ದೆ

ಶಾಲೆಯಲ್ಲಿ ಓದು, ಶಿಕ್ಷಕರ ಮಾರ್ಗ ದರ್ಶನ, ಪಠ್ಯ ಪುಸ್ತಕಗಳ ಅಧ್ಯಯನ, ಮನೆಯಲ್ಲಿ ದಿನಕ್ಕೆ ಕನಿಷ್ಠ ನಾಲ್ಕೈದು ಗಂಟೆ ಅಭ್ಯಾಸ ಮಾಡಿದ ಕಾರಣ ನಾನು 625ಕ್ಕೆ 624 ಅಂಕ ಪಡೆಯಲು ಸಾಧ್ಯ ವಾಯಿತು. ನನ್ನ ತಂದೆ ಪ್ರದೀಪ್ ನಾಗ ರಾಜ್ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ತಾಯಿ ರಾಧಾ ಗೃಹಿಣಿಯಾಗಿದ್ದಾರೆ. ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಅಧ್ಯಯನ ಮಾಡುತ್ತಿದ್ದೆ. ಮೂರು ಬಾರಿ ನಡೆಸಿದ ಪೂರ್ವ ಭಾವಿ ಪರೀಕ್ಷೆಗೆ ಸರ್ವ ರೀತಿಯಲ್ಲೂ ಸನ್ನದ್ಧನಾಗಿದ್ದೆ. ಇದರಿಂದ ಅಂತಿಮ ಪರೀಕ್ಷೆಯಲ್ಲಿ ಗುರಿ ತಲುಪಲು ಸಾಧ್ಯವಾಯಿತು.

- ಮನಸ್ವಿನಿ ಪ್ರದೀಪ್

ಮೈಸೂರು ಜಿಲ್ಲೆಯ 703 ಶಾಲೆಗಳಲ್ಲಿ 247 ಶಾಲೆಗಳು ಶೇಕಡ 100ರಷ್ಟು ಫಲಿತಾಂಶ ಪಡೆದಿವೆ. ಇವರಲ್ಲಿ 16 ವಿದ್ಯಾರ್ಥಿಗಳು 620 ಅಂಕ ಪಡೆದಿದ್ದರೆ, 480 ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. ಕಳೆದ ಕೆಲವು ವರ್ಷಗಳ ಹಿಂದೆ ಮೈಸೂರು ಜಿಲ್ಲೆ 27ನೇ ಸ್ಥಾನದ ಲ್ಲಿತ್ತು. ಆದರೆ ಈ ಬಾರಿ 20ನೇ ಸ್ಥಾನಕ್ಕೆ ಬಂದಿದೆ. ಕಳೆದ ವರ್ಷ ಮೈಸೂರು ಜಿಲ್ಲೆ ಶೇಕಡ 67ರಷ್ಟು ಫಲಿತಾಂಶ ಪಡೆದಿತ್ತು. ಆದರೆ ಈ ಬಾರಿ ಶೇಕಡ 94.49ರಷ್ಟು ಫಲಿತಾಂಶ ಪಡೆದಿದೆ. ಈ ಮೂಲಕ ಕಳೆದ ವರ್ಷಕ್ಕಿಂತ ಈ ಬಾರಿ ಮೈಸೂರು ಜಿಲ್ಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಚೇತರಿಕೆ ಕಂಡರೂ 20ನೇ ಸ್ಥಾನಕ್ಕೆ ಕುಸಿದಿರುವುದು ಬೇಸರದ ಸಂಗತಿಯಾಗಿದೆ.


ಮೈಸೂರಿನ ಸರಸ್ವತಿಪುರಂನ ವಿಜಯ ವಿಠಲ ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್ಸ್ ನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಕ್ಕೆ 624 ಅಂಕ ಪಡೆದ ಮನಸ್ವಿನಿ ಪ್ರದೀಪ್ ಅವರನ್ನು ಇನ್ಸ್ಟಿಟ್ಯೂಷನ್ಸ್‌ನ ಅಧ್ಯಕ್ಷ ಆರ್.ವಾಸುದೇವ ಭಟ್ ಅವರು ಗುರುವಾರ ಅಭಿನಂದಿಸಿದರು. (ಎಡದಿಂದ) ಶಾಲೆಯ ಪ್ರಿನ್ಸಿಪಾಲ್ ಎಸ್.ಎಂ.ವೀಣಾ, ಮನಸ್ವಿನಿ ತಂದೆ ಪ್ರದೀಪ್ ನಾಗರಾಜ್, ಶಾಲೆಯ ಕಾರ್ಯದರ್ಶಿ ಎ.ವಿಶ್ವನಾಥ ಅವರನ್ನು ಕಾಣಬಹುದು.


ಮೈಸೂರಿನ ಇಲವಾಲದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಆರ್.ಮಾಧುರಿ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 624 ಅಂಕ ಗಳಿಸಿದ್ದಾರೆ. ಅಣ್ಣ ಆರ್.ಕೀರ್ತನ್ ಹಾಗೂ ತಾಯಿ ಕೆ.ಪಿ.ಸರಿತಾ ಅವರನ್ನು ಚಿತ್ರದಲ್ಲಿ ಕಾಣಬಹುದು.

### ಕಠಿಣ ಪರಿಶ್ರಮಕ್ಕೆ ದೊರೆತ ಫಲ

ನನ್ನ ತಾಯಿ ಸಿಂಗಲ್ ಪೇರೆಂಟ್ ಆಗಿದ್ದು, ಕಷ್ಟಪಟ್ಟು ನನ್ನನ್ನು ಓದಿಸಿದ್ದಾರೆ. ಕಠಿಣ ಪರಿಶ್ರಮ, ಶಿಸ್ತು, ಪಠ್ಯ ಪುಸ್ತಕಗಳ ಅಧ್ಯಯನ, ಶಿಕ್ಷಕರ ಮಾರ್ಗದರ್ಶನದಿಂದ ನನಗೆ 624 ಅಂಕ ಪಡೆಯಲು ಸಾಧ್ಯವಾಗಿದೆ. ಕರ್ನಾಟಕ್ ಪಬ್ಲಿಕ್ ಸ್ಕೂಲ್‌ನ ಇಂಗ್ಲಿಷ್ ಮೀಡಿಯಂನಲ್ಲಿ ನಾನು ಓದಿ ಇಷ್ಟು ಅಂಕ ಗಳಿಸಿದ್ದೇನೆ. ಸರ್ಕಾರಿ ಶಾಲೆಯ ಮಕ್ಕಳು ಓದಿನಲ್ಲಿ ಹಿಂದುಳಿದಿರುತ್ತಾರೆ ಎಂಬ ಅಪವಾದವಿದೆ. ಆದರೆ, ಸರ್ಕಾರಿ ಶಾಲೆಯಲ್ಲಿ ಖಾಸಗಿ ಶಾಲೆಗಳಿಗಿಂತ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ. ಹಾಗಾಗಿಯೇ ಹೆಚ್ಚು ಅಂಕ ಗಳಿಸಲು ನನಗೆ ಸಾಧ್ಯವಾಯಿತು. ಈ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆ ಬಗ್ಗೆ ತಪ್ಪು ಭಾವನೆ ಹೊಂದಬಾರದು. - ಮಾಧುರಿ ಆರ್.

### ಮೈಸೂರು ಜಿಲ್ಲಾ ಟಾಪರ್ಸ್

ಮೈಸೂರಿನ ಇಲವಾಲದ ಸರ್ಕಾರಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಮಾಧುರಿ ಆರ್. ಹಾಗೂ ಸರಸ್ವತಿಪುರಂನ ವಿಜಯ ವಿಠಲ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ನ ಮನಸ್ವಿನಿ ಪ್ರದೀಪ್ ಅವರು 625ಕ್ಕೆ 624 ಅಂಕ ಗಳಿಸಿ, ರಾಜ್ಯಕ್ಕೆ 2ನೇ ಟಾಪರ್ ಗಳಾದರೆ, ಕೆ.ಆರ್.ನಗರದ ಮಾದಪ್ಪ ಶಾಲೆಯ ವಿನುತ ಡಿ.ಜಿ. 623, ಮೈಸೂರಿನ ಆದರ್ಶ ವಿದ್ಯಾಲಯದ ಲಕ್ಷಣ್ 622 ಅಂಕ ಗಳಿಸುವುದರೊಂದಿಗೆ ರಾಜ್ಯಕ್ಕೆ ಮೂರು ಮತ್ತು ನಾಲ್ಕನೇ ಟಾಪರ್ ಆಗಿದ್ದಾರೆ.

# ಸಬ್‌ರಿಜಿಸ್ಟ್ರಾರ್ ಶ್ರೀಕಾಂತ್ ಅಮಾನತು

ಈ ಹಿನ್ನೆಲೆಯಲ್ಲಿ ಇಲಾಖಾ ತನಿಖೆ ನಡೆಸಿದಾಗ ಉಪನೋಂದಣಿ ಕಚೇರಿಗಳಲ್ಲಿ ದಸ್ತಾವೇಜುಗಳನ್ನು ನೋಂದಣಿಗೆ ಅಪ್ಲೋಡ್ ಮಾಡುವ ವೇಳೆ ಆರ್ಟಿಕಲ್ ಸೇಲ್ ಎಂದು ಆಯ್ಕೆ ಮಾಡಿ, ಸಬ್ ಆರ್ಟಿಕಲ್ ನಲ್ಲಿ ಸಿವಿಲ್ ನ್ಯಾಯಾಲಯದ ತೀರ್ಪು ಅಥವಾ ಅಂತಿಮ ಆದೇಶದ ರವಾನೆ ಎಂದು ಆಯ್ಕೆ ಮಾಡಿ, ನೋಂದಾಯಿಸಿ ರುವ ಕುರಿತು ವರದಿ ನೀಡಿದ್ದ ಜಿಲ್ಲಾ ನೋಂದಣಾಧಿಕಾರಿಗಳು, ಶ್ರೀಕಾಂತ್ ಅವರು 24 ದಸ್ತಾವೇಜುಗಳನ್ನು ಕೋರ್ಟ್ ಡಿಕ್ರಿ/ಆದೇಶದ ಸಬ್ ಆರ್ಟಿಕಲ್ ಅನ್ನು ದುರ್ಬಳಕೆ ಮಾಡಿ ಇ–ಸ್ವತ್ತು ತಂತ್ರಾಂಶದಿಂದ ಮಾಹಿತಿ ಪಡೆಯದೇ ನೋಂದಾಯಿಸಿರುವುದು ಕಂಡುಬಂದಿರುವುದಾಗಿ ತಿಳಿಸಿದ್ದರು.

ಸರ್ಕಾರವು ಸುತ್ತೋಲೆಯಲ್ಲಿ ವರ್ಗಾವಣೆ ಆಗುವ ದಸ್ತಾವೇಜುಗಳಿಗೆ ಸಂಬಂಧಿಸಿ ದಂತೆ ದೃಢೀಕೃತ ಖಾತಾ ಮತ್ತು ತೆರಿಗೆ ಹಾಗೂ ನಿರ್ಧರಣಾ ವಹಿ ನಮೂನೆ 1 ಮತ್ತು 12 ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸ್ವತ್ತುಗಳ ಪಡೆಯಬೇಕೆಂದು ತಿಳಿಸಲಾಗಿರುತ್ತದೆ. ಸುತ್ತೋಲೆಯಂತೆ ಕಾವೇರಿ ತಂತ್ರಾಂಶ ಮತ್ತು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸ್ವತ್ತುಗಳಿಗಾಗಿ ಇರುವ ಇ–ಸ್ವತ್ತು ತಂತ್ರಾಂಶವನ್ನು ಸಂಯೋಜನೆಗೊಳಿಸಿರುವುದರಿಂದ ಸದರಿ ದಿನಾಂಕದಿಂದ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸ್ವತ್ತುಗಳಿಗೆ ಇರುವ ಇ–ಸ್ವತ್ತು ತಂತ್ರಾಂಶದಿಂದ ಮಾಹಿತಿ ಪಡೆದು ನೋಂದಣಿ ಮಾಡಲು ಆದೇಶವಾಗಿರುತ್ತದೆ. ಆದರೆ ಸದರಿ ಪ್ರಕರಣದಲ್ಲಿ ಇ–ಸ್ವತ್ತು ತಂತ್ರಾಂಶದಿಂದ ಮಾಹಿತಿ ಪಡೆಯದೇ ನೋಂದಾಯಿಸಿರುವುದು ತನಿಖಾ ವರದಿ ಹಾಗೂ ನೋಂದಣಿ ದಾಖಲೆಗಳಿಂದ ದೃಢಪಟ್ಟಿದೆ.

ಕಾವೇರಿ ತಂತ್ರಾಂಶದಲ್ಲಿ ನ್ಯಾಯಾಲಯವು ಬರೆದುಕೊಡುವ ಆದೇಶಗಳು ಅಥವಾ ನ್ಯಾಯಾಲಯವು ಆಯುಕ್ತರನ್ನು ನೇಮಿಸಿ ಸದರಿಯವರು ಬರೆದುಕೊಡುವ ಕ್ರಯಪತ್ರಗಳನ್ನು ನೋಂದಣಿ ಮಾಡಲು ಸಬ್ ಆರ್ಟಿಕಲ್‌ನಲ್ಲಿ ಡಿಕ್ರಿ/ಆದೇಶ ಎಂದು ಸೇರ್ಪಡೆ ಮಾಡಲಾಗಿದ್ದು, ಇದನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿ ಸ್ವತ್ತಿನ ಖಾತೆದಾರರ ವಿವರವನ್ನು ತಿದ್ದುಪಡಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಕ್ರಯಪತ್ರಗಳನ್ನು ನೋಂದಣಿ ಮಾಡುವ ಸಮಯದಲ್ಲಿ ಆರ್ಟಿಕಲ್–ಮಾರಾಟ ಮತ್ತು ಉಪ ಆರ್ಟಿಕಲ್ ಸ್ಥಿರ ಆಸ್ತಿಯ ಮಾರಾಟ/ಸಾಗಣೆ ಮತ್ತು ಸೈಟ್/ಕಟ್ಟಡ/ಅಪಾರ್ಟ್‌ಮೆಂಟ್ ಅನ್ನು ಆಯ್ಕೆ ಮಾಡಿ ಸಂಬಂಧಪಟ್ಟ ಪೋರ್ಟಲ್‌ನಿಂದ ಮಾಹಿತಿ ಪಡೆದು ನೋಂದಣಿ ಮಾಡಬೇಕಾಗಿರುತ್ತದೆ.

ಪಕ್ಷಕಾರರು ನಾಗರಿಕ ಲಾಗಿನ್‌ನಲ್ಲಿ ಕ್ರಯ ದಸ್ತಾವೇಜನ್ನು ನೋಂದಣಿ ಮಾಡುವ ಸಲುವಾಗಿ ಈ ಮೇಲೆ ತಿಳಿಸಿರುವ ಸಬ್ ಆರ್ಟಿಕಲ್‌ನ್ನು ಆಯ್ಕೆ ಮಾಡದೇ ಕೋರ್ಟ್ ಆದೇಶಗಳಿಗೆ ಇರುವ ಸಬ್ ಆರ್ಟಿಕಲ್‌ನ್ನು ಆಯ್ಕೆ ಮಾಡಿ ಸಂಬಂಧಪಟ್ಟ ಪೋರ್ಟಲ್‌ಗಳಿಂದ ಮಾಹಿತಿ ಪಡೆಯದೇ ಖಾತೆದಾರರು ಉಪನೋಂದಣಾಧಿಕಾರಿಗಳ ಲಾಗಿನ್‌ಗೆ ಕಳುಹಿಸಿರುತ್ತಾರೆ. ಉಪನೋಂದಣಾಧಿಕಾರಿಗಳು ನೋಂದಣಿ ನಿಯಮಾನುಸಾರ ಸದರಿ ದಸ್ತಾವೇಜು ಕ್ರಯಪತ್ರವೇ ಅಥವಾ ನ್ಯಾಯಾಲಯದ ಆದೇಶ/ನ್ಯಾಯಾಲಯ ನೇಮಿಸಿದ ಆಯುಕ್ತರೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ನಂತರ ಸರ್ಕಾರದ ಸುತ್ತೋಲೆ ಪ್ರಕಾರ ಸಂಬಂಧಪಟ್ಟ ಪೋರ್ಟಲ್‌ನಿಂದ ಮಾಹಿತಿ ಪಡೆಯಲಾಗಿದೆಯೇ ಎಂದು ಪರಿಶೀಲಿಸಬೇಕಾಗಿರುತ್ತದೆ. ಮಾಹಿತಿ ಲಭ್ಯವಿಲ್ಲದಿದ್ದಲ್ಲಿ ದಸ್ತಾವೇಜನ್ನು ನಾಗರಿಕ ಲಾಗಿನ್‌ಗೆ ಹಿಂದಿರುಗಿಸಬೇಕಾಗಿ ರುತ್ತದೆ. ಆದರೆ ಇಲ್ಲಿ 24 ದಸ್ತಾವೇಜುಗಳನ್ನು ಇ–ಸ್ವತ್ತು ಪೋರ್ಟಲ್ ಬೈಪಾಸ್ ಮಾಡಿ ನಮೂನೆ 9 ಮತ್ತು 11 ಎ ಅಥವಾ 11 ಬಿ ಇ–ಸ್ವತ್ತು ಆರ್‌ಡಿಪಿಆರ್ ಖಾತಾ ಇಲ್ಲದೆ ಇದ್ದರೂ ಕಾನೂನು ಬಾಹಿರವಾಗಿ ನೋಂದಾಯಿಸಿರುವುದು ವರದಿಗಳ ಪ್ರಕಾರ ಕಂಡುಬಂದಿರುತ್ತದೆ. ಶ್ರೀಕಾಂತ್ ಉಲ್ಲೇಖ(3) ಮತ್ತು(4) ರ ಸರ್ಕಾರದ ಸುತ್ತೋಲೆಗಳನ್ನು ಹಾಗೂ ಇಲಾಖೆಯಿಂದ ಈ ಬಗ್ಗೆ ನೀಡಲಾದ ನಿರ್ದೇಶನಗಳನ್ನು ಉಲ್ಲಂಘಿಸಿ 24 ದಸ್ತಾವೇಜುಗಳನ್ನು ಕೋರ್ಟ್ ಡಿಕ್ರಿ/ಆದೇಶದ ಸಬ್ ಆರ್ಟಿಕಲ್ ಅನ್ನು ದುರ್ಬಳಕೆ ಮಾಡಿಕೊಂಡು ನೋಂದಾಯಿಸಿರುವುದು ಸ್ಪಷ್ಟವಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿತ್ತು.

ಅಲ್ಲದೆ ಇದು ಮೈಸೂರಿನಲ್ಲಿ ಮುಡಾ ಅಕ್ರಮದ ನಂತರದ ಅತೀ ದೊಡ್ಡ ಹಗರಣವೆಂದು ವಿಧಾನ ಪರಿಷತ್ ಸದಸ್ಯ ಸಿದ್ದರಾಜು, ಬಿಜೆಪಿ ಜಿಲ್ಲಾ ವಕ್ತಾರರಾದ ಮೋಹನ್ ಹಾಗೂ ಕೆ.ವಸಂತ್ ಕುಮಾರ್ ಕೂಲಂಕುಶವಾಗಿ ಇಲಾಖೆ ಗಮನಕ್ಕೆ ತಂದಿದ್ದರು. ಶಾಸಕ ಟಿ.ಎಸ್.ಶ್ರೀವತ್ಸ ಅವರು ಕಂದಾಯ ಸಚಿವ ಕೃಷ್ಣಭೈರೇಗೌಡರಿಗೆ ಮನವಿ ನೀಡಿ, ಇಲಾಖೆಯಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವಂತೆ ಆಗ್ರಹಿಸಿದ್ದರು.

# ವಿದ್ಯಾರ್ಥಿನಿ ಆತ್ಮಹತ್ಯೆ; ಪಾಸಾದ ಖುಷಿಯಲ್ಲಿ ಈಜುವಾಗ ವಿದ್ಯಾರ್ಥಿ ಸಾವು

ನಾನು ಡಿಸ್ಟಿಂಕ್ಷನ್ ಬರುವಂತೆ ಚೆನ್ನಾಗಿ ಓದಿದ್ದೆ, ಆದರೆ ಇಷ್ಟೊಂದು ಕಡಿಮೆ ಅಂಕ ಬಂದಿದೆ ಎಂದು ಹೇಳಿಕೊಂಡಿದ್ದಳಂತೆ. ಈ ವಿಚಾರಕ್ಕೆ ತೀವ್ರ ಮನನೊಂದಿದ್ದ ಆಕೆ, ಮನೆಯಲ್ಲಿ ಯಾರೂ ಇಲ್ಲದ ವೇಳೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಮಗಳು ಪ್ರಥಮ ದರ್ಜೆಯಲ್ಲಿ ಪಾಸ್ ಆಗಿದ್ದಾಳೆಂಬ ಖುಷಿಯಲ್ಲಿದ್ದ ಕುಟುಂಬಕ್ಕೆ ಕೆಲವೇ ಗಂಟೆಗಳಲ್ಲಿ ಬರಸಿಡಿಲು ಬಡಿಯಿತು. ಮನೆಯವರು, ಸಂಬಂಧಿಕರು, ಗ್ರಾಮಸ್ಥರ ಆಕ್ರಂಧನ ಮುಗಿಲುಮುಟ್ಟಿತ್ತು. ವಿಷಯ ತಿಳಿದ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ, ಪರಿಶೀಲನೆ ನಡೆಸಿದ ನಂತರ ಮೃತದೇಹವನ್ನು ನಗರದ ಸರ್ಕಾರಿ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

**ಖುಷಿಯಲ್ಲಿ ಸಾವಿನಕೂಪಕ್ಕೆ:** ಕೋಲಾರ ಜಿಲ್ಲೆ, ಮುಳುಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿ ರಘುಪತಿ ಎಂಬುವರ ಪುತ್ರ ಕಿರಣ್, ಎಸ್‌ಎಸ್‌ಎಲ್‌ಸಿಯಲ್ಲಿ 239 ಅಂಕಗಳೊಂದಿಗೆ ಉತ್ತೀರ್ಣನಾಗಿದ್ದ. ಇದರಿಂದ ತುಂಬಾ ಸಂತಸಪಟ್ಟಿದ್ದ ಈತ, ಸ್ನೇಹಿತರ ಜೊತೆ ಈಜಲು ಬಾವಿಗೆ ಇಳಿದಿದ್ದ. ಈಜು ಬಾರದಿದ್ದರೂ ಪಾಸ್ ಆದ ಖುಷಿಯಲ್ಲಿ ಈಜಲು ಮುಂದಾದಾಗ ಮುಳುಗಿ ಸಾವನ್ನಪ್ಪಿದ್ದಾನೆ. ಸ್ನೇಹಿತರೂ ಆತನನ್ನು ರಕ್ಷಿಸಲು ಸಾಧ್ಯವಾಗಿಲ್ಲ. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಕಿರಣ್ ಶವಕ್ಕಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಹುಡುಕಾಟ ನಡೆಸಿದ್ದಾರೆ.

ಈಜಲು ಹೋಗಿ ನೀರುಪಾಲಾಗುವ ಇಂತಹ ದುರ್ಘಟನೆಗಳು ನಿರಂತರವಾಗಿ ಸಂಭವಿಸುತ್ತಿವೆ. ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ತಲಕಾಡಿನ ನಿಸರ್ಗಧಾಮದಲ್ಲಿ ಕಾವೇರಿ ನದಿಗೆ ಈಜಲು ಇಳಿದಿದ್ದ ಇಬ್ಬರು ವಿದ್ಯಾರ್ಥಿನಿಯರು ಸಾವನ್ನಪ್ಪಿದ ಘಟನೆ ಏ.21ರಂದು ನಡೆದಿತ್ತು. ಏ.20ರಂದು ಕಾಲು ಜಾರಿ ಕೆರೆಗೆ ಬಿದ್ದ ಬಾಲಕನ ರಕ್ಷಣೆಗೆ ಹೋದ ಮಾವನೂ ದಾರುಣವಾಗಿ ಮೃತಪಟ್ಟ ಘಟನೆ ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಎನ್.ಹೊಸಳ್ಳಿ ಗ್ರಾಮದಲ್ಲಿ ನಡೆದಿತ್ತು. ಕಾವೇರಿ ನದಿಯಲ್ಲಿ ಈಜಲು ಹೋಗಿದ್ದ ಇಬ್ಬರು ಯುವಕರು ನೀರಲ್ಲಿ ಮುಳುಗಿ ಪ್ರಾಣಬಿಟ್ಟಿರುವ ಘಟನೆ ಪಿರಿಯಾಪಟ್ಟಣದ ದೊಡ್ಡಹರವೆ ಗ್ರಾಮದ ಬಳಿ ಏಪ್ರಿಲ್ 19ರಂದು ನಡೆದಿತ್ತು. ಅದೇ ದಿನ ಕಾವೇರಿ ನದಿಯಲ್ಲಿ ಮುಳುಗಿ 6 ಜನ ದುರ್ಮರಣ ಹೊಂದಿದ ಘಟನೆಯೂ ಮೈಸೂರು ಜಿಲ್ಲೆ ಕೆ.ಆರ್.ನಗರದ ಅರ್ಕೇಶ್ವರ ದೇಗುಲದ ಬಳಿ ಸಂಭವಿಸಿತ್ತು.

# ನೆನೆಗುದಿಗೆ ಬಿದ್ದಿದ್ದ ಡಾ. ರಾಜ್‌ಕುಮಾರ್ ರಸ್ತೆ ಬಾಕಿ ಅಭಿವೃದ್ಧಿ ಕಾಮಗಾರಿ ಆರಂಭ; ಪರಿಹಾರಕ್ಕೆ ಭೂ ಮಾಲೀಕರ ಬಿಗಿ ಪಟ್ಟು

## ಮುಡಾ ಆಯುಕ್ತರಿಂದ ಭರವಸೆ ಪತ್ರ ನೀಡಿದ ಬಳಿಕ ಕಾರ್ಯ ಮತ್ತೆ ಆರಂಭ


ಡಾ. ರಾಜ್‌ಕುಮಾರ್ ರಸ್ತೆ ಅಭಿವೃದ್ಧಿಗೆ ಮುಂದಾದ ಅಧಿಕಾರಿಗಳೊಂದಿಗೆ ಭೂ ಮಾಲೀಕರು ವಾಗ್ವಾದ ನಡೆಸುತ್ತಿರುವುದು.


ಸಂಜೆ ನಂತರ ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತೆ ಆರಂಭವಾಗಿರುವುದು.

ಮೈಸೂರು, ಏ.23(ಎಂಟಿವೈ)– ಹಲವು ವರ್ಷದಿಂದ ನೆನೆಗುದಿಗೆ ಬಿದ್ದಿದ್ದ ಡಾ.ರಾಜ್‌ಕುಮಾರ್ ರಸ್ತೆಯ 500 ಮೀಟರ್‌ಗಳ ಅಭಿವೃದ್ಧಿ ಕಾರ್ಯವನ್ನು ಇಂದು ಪಾಲಿಕೆ ಅಧಿಕಾರಿಗಳು ಆರಂಭಿಸಿದರು. ಆದರೆ ಕೆಲವೇ ಗಂಟೆಯಲ್ಲಿ ಸ್ಥಳಕ್ಕೆ ಬಂದ ಭೂಮಿ ಮಾಲೀಕರು ಪರಿಹಾರ ನೀಡುವವರೆಗೂ ರಸ್ತೆ ಅಭಿವೃದ್ಧಿ ಮಾಡದಂತೆ ತಡೆಯೊಡ್ಡಿದರು. ಬಳಿಕ ನ್ಯಾಯಾಲಯದ ನಿರ್ದೇಶನದಂತೆ ವಶಪಡಿಸಿಕೊಂಡ ಭೂಮಿಗೆ ಪರಿಹಾರ ನೀಡುವುದಾಗಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಲಿಖಿತ ಪತ್ರ ನೀಡಿದ ನಂತರ ಕಾಮಗಾರಿ ಆರಂಭಿಸಲಾಯಿತು.

ಮೈಸೂರಿನ ಟೆರೆಷಿಯನ್ ಕಾಲೇಜು ವೃತ್ತದಿಂದ ಕಲ್ಯಾಣಗಿರಿಯ ಮಹದೇವಪುರ ರಸ್ತೆಗೆ ಸಂಪರ್ಕ ಕಲ್ಪಿಸುವ ಡಾ.ರಾಜ್‌ಕುಮಾರ್ ರಸ್ತೆ ಅಭಿವೃದ್ಧಿಯಾಗಿ ಹಲವು ದಶಕಗಳೇ ಕಳೆದಿದ್ದು, ಯರಗನಹಳ್ಳಿ ಬಳಿ 500 ಮೀಟರ್ ರಸ್ತೆ ನಿರ್ಮಾಣಕ್ಕೆ ಭೂ ಮಾಲೀಕರು ತಡೆಯೊಡ್ಡಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ಈ ಹಿನ್ನೆಲೆಯಲ್ಲಿ ಹಲವು ವರ್ಷಗಳಿಂದ ಹಳ್ಳ-ಕೊಳ್ಳದಿಂದ ಕೂಡಿರುವ 500 ಮೀಟರ್ ರಸ್ತೆ ದುರಸ್ತಿ ಕಾಣದೆ, ವಾಹನ ಸವಾರರು ಪರದಾಡುವಂತಾಗಿತ್ತು. ಇದರಿಂದ ರೊಚ್ಚಿಗೆದ್ದ ಸ್ಥಳೀಯರು ಪ್ರತಿಭಟನೆ ಮಾಡಿ, ಪ್ರಕರಣ ಶೀಘ್ರ ಇತ್ಯರ್ಥಕ್ಕೆ ನಗರ ಪಾಲಿಕೆ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಮನವಿ ಸಲ್ಲಿಸಬೇಕು. ಅಲ್ಲದೆ, ಕೂಡಲೇ ರಸ್ತೆಗೆ ಡಾಂಬರೀಕರಣ ಮಾಡುವಂತೆ ಪ್ರತಿಭಟನೆ ನಡೆಸಿದರು.

ಹಲವು ವರ್ಷಗಳಿಂದ ಬವಣೆ ಅನುಭವಿಸಿದ ಸ್ಥಳೀಯರು ಹಾಗೂ ಸಾರ್ವಜನಿಕರ ಒತ್ತಾಯದ ಹಿನ್ನೆಲೆಯಲ್ಲಿ ಕೊನೆಗೂ ಮೈಸೂರು ಮಹಾನಗರ ಪಾಲಿಕೆ ಡಾ.ರಾಜ್‌ಕುಮಾರ್ ರಸ್ತೆಯಲ್ಲಿ ನೆನೆಗುದಿಗೆ ಬಿದ್ದಿರುವ 500 ಮೀಟರ್ ರಸ್ತೆ ಅಭಿವೃದ್ಧಿಗೆ ಟೆಂಡರ್ ಕರೆದಿತ್ತು. ಇದಕ್ಕಾಗಿ ಗುತ್ತಿಗೆದಾರರೊಬ್ಬರಿಗೆ 1.75 ಕೋಟಿ ರೂ.ಗೆ ಟೆಂಡರ್ ನೀಡಿತ್ತು. ಇಂದು ಬೆಳಗ್ಗೆ ಪೊಲೀಸರ ಭದ್ರತೆಯೊಂದಿಗೆ ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭಿಸಿ, ಹಳ್ಳ-ಕೊಳ್ಳವನ್ನು ಜೆಸಿಬಿ ಮೂಲಕ ಸಮತಟ್ಟು ಮಾಡುವ ಪ್ರಕ್ರಿಯೆ ಆರಂಭಿಸುತ್ತಿದ್ದಂತೆಯೇ ಭೂ ಮಾಲೀಕರ ಕುಟುಂಬದ ಸದಸ್ಯರು ಸ್ಥಳಕ್ಕೆ ಬಂದು ಕಾಮಗಾರಿ ನಡೆಸದಂತೆ ತಡೆಯೊಡ್ಡಿದರು.

**ಮಾಲೀಕರ ಬಿಗಿಪಟ್ಟು:** ಯರಗನಹಳ್ಳಿ ಸರ್ವೆ ನಂ.53ರಲ್ಲಿ ಡಾ.ರಾಜ್‌ಕುಮಾರ್ ರಸ್ತೆ ನಿರ್ಮಾಣಕ್ಕೆ ವಶಪಡಿಸಿಕೊಂಡಿರುವ ಭೂಮಿಗೆ ಪರಿಹಾರ ನೀಡುವವರೆಗೂ ದುರಸ್ತಿ ಕಾಮಗಾರಿ ನಡೆಸದಂತೆ ಭೂ ಮಾಲೀಕರು ಕಾಮಗಾರಿಗೆ ಅಡ್ಡಿಪಡಿಸಿದರು. ಆದರೆ, ಪಾಲಿಕೆ ಅಧಿಕಾರಿಗಳು ಮಾತ್ರ ಈಗ ರಸ್ತೆ ಅಗಲೀಕರಣ ಮಾಡುವುದಿಲ್ಲ. ಹಾಲಿ ಎಷ್ಟು ವಿಸ್ತೀರ್ಣವಿದೆಯೋ ಅಷ್ಟಕ್ಕೆ ಮಾತ್ರ ಡಾಂಬರೀಕರಣ ಮಾಡುತ್ತೇವೆ ಎಂದು ಪಟ್ಟು ಹಿಡಿದರು. ಆದರೆ, ಭೂ ಮಾಲೀಕರು ಮಾತ್ರ ರಸ್ತೆ ಅಭಿವೃದ್ಧಿಗೆ ಭೂಮಿಗೆ ಪರಿಹಾರ ನೀಡುವವರೆಗೂ ಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

**ನ್ಯಾಯಾಲಯದಲ್ಲಿ ಇತ್ಯರ್ಥವಾಗಲಿ:** ಭೂ ಮಾಲೀಕರು ಪರಿಹಾರಕ್ಕೆ ಪಟ್ಟು ಹಿಡಿದಿದ್ದಕ್ಕೆ ಪಾಲಿಕೆ ಅಧಿಕಾರಿಗಳು ಸಮಜಾಯಿಷಿ ನೀಡಿ, ಪರಿಹಾರ ನೀಡುವ ಸಂಬಂಧ ಪ್ರಕರಣ ನ್ಯಾಯಾಲಯದಲ್ಲಿದೆ. ನ್ಯಾಯಾಲಯ ತೀರ್ಪು ನೀಡಿದ ಬಳಿಕ, ಆ ತೀರ್ಪಿಗೆ ಅನುಗುಣವಾಗಿ ಪರಿಹಾರ ನೀಡುವುದಾಗಿ ಭರವಸೆ ನೀಡಿದರು. ಆದರೆ, ಭೂ ಮಾಲೀಕರು ಮಾತ್ರ ಹಲವು ವರ್ಷಗಳಿಂದ ನೀಡಿರುವ ಭರವಸೆ ಹುಸಿಯಾಗಿದೆ. ಆ ಕಾರಣದಿಂದ ಕಾಮಗಾರಿ ನಡೆಸಲು ಬಿಡುವುದಿಲ್ಲ ಎಂದರು.

**ಪೊಲೀಸರ ಮಧ್ಯಸ್ಥಿಕೆ:** ಭದ್ರತೆಗೆ ಆಗಮಿಸಿದ್ದ ಇನ್ಸ್‌ಪೆಕ್ಟರ್ ಲೋಲಾಕ್ಷಿ ಭೂ ಮಾಲೀಕರೊಂದಿಗೆ ಚರ್ಚಿಸಿ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದರೆ ಪರಿಹಾರ ನೀಡುತ್ತಾರೆ. ಈಗ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಸಲು ಅವಕಾಶ ನೀಡುವಂತೆ ಕೋರಿದರು. ಮಧ್ಯಾಹ್ನದವರೆಗೂ ಕಾಮಗಾರಿ ನಡೆಸುವುದಕ್ಕೆ ಅವಕಾಶ ನೀಡದೆ ಕೇವಲ ಚರ್ಚೆಯಲ್ಲಿ ಸಮಯ ವ್ಯರ್ಥವಾಯಿತು. ಅಂತಿಮವಾಗಿ ವಶಪಡಿಸಿಕೊಂಡಿರುವ ಭೂಮಿಯ ಬಗ್ಗೆ ಲಿಖಿತವಾಗಿ ಪತ್ರ ನೀಡುವಂತೆ ಭೂ ಮಾಲೀಕರು ಒತ್ತಾಯಿಸಿದರು.

**ಪತ್ರ ನೀಡಿದ ಎಂಡಿಎ:** ಭೂ ಮಾಲೀಕರು ಲಿಖಿತ ರೂಪದಲ್ಲಿ ವಶಪಡಿಸಿಕೊಂಡಿರುವ ಭೂಮಿ ಬಗ್ಗೆ ಪತ್ರ ನೀಡಲು ಕೋರಿದ ಹಿನ್ನೆಲೆಯಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ಅವರು ಯರಗನಹಳ್ಳಿ ಸರ್ವೆ ನಂ 53ರಲ್ಲಿ ಡಾ.ರಾಜ್‌ಕುಮಾರ್ ರಸ್ತೆಗೆ ನಿರ್ಮಾಣಕ್ಕೆ 33 ಗುಂಟೆ ಭೂಮಿ ಸ್ವಾಧೀನಪಡಿಸಿಕೊಂಡಿದ್ದು, ನ್ಯಾಯಾಲಯದಲ್ಲಿರುವ ಪ್ರಕರಣ ಇತ್ಯರ್ಥವಾದ ಬಳಿಕ ನ್ಯಾಯಾಲಯದ ನಿರ್ದೇಶನದಂತೆ ಪರಿಹಾರ ನೀಡುವುದಾಗಿ ಲಿಖಿತ ಪತ್ರ ನೀಡಿದರು. ಈ ಪತ್ರ ಕೈ ಸೇರುತ್ತಿದ್ದಂತೆ ರಸ್ತೆ ದುರಸ್ತಿ ಕಾಮಗಾರಿ ಆರಂಭಿಸಲಾಯಿತು.

### ಮತ್ತೆ ಹೈಡ್ರಾಮ...

**ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಭೂ ಮಾಲೀಕರು ಹಾಗೂ ಪಾಲಿಕೆ ಮತ್ತು ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚೆ, ವಾದ ನಡೆಯುತ್ತಲೇ ಇತ್ತು. ಅಂತಿಮವಾಗಿ ಲಿಖಿತ ಪತ್ರ ನೀಡಿದರೆ ಮಾತ್ರ ಕಾಮಗಾರಿ ನಡೆಸಲು ಅವಕಾಶ ನೀಡುವುದಾಗಿ ಭೂ ಮಾಲೀಕರು ಪಟ್ಟು ಹಿಡಿದರು. ಹಾಗಾಗಿ ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್, ರಸ್ತೆ ಅಭಿವೃದ್ಧಿಗೆ 33 ಗುಂಟೆ ಭೂಮಿ ಸ್ವಾಧೀನ ಪಡಿಸಿಕೊಂಡಿರುವುದಾಗಿ ಪತ್ರ ನೀಡಿದ್ದರು. ನಂತರ ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭವಾಗಿತ್ತು. ಕೆಲ ಸಮಯದ ನಂತರ ಭೂ ಮಾಲೀಕರು ಮತ್ತೆ ಸ್ಥಳಕ್ಕೆ ಬಂದು ಎಂಡಿಎ ನೀಡಿರುವ ಪತ್ರದಲ್ಲಿ ಆಯುಕ್ತರದ್ದು ಡಿಜಿಟಲ್ ಸಹಿ, ಇದನ್ನು ನ್ಯಾಯಾಲಯ ಮಾನ್ಯ ಮಾಡುವುದಿಲ್ಲ ಎಂದು ಕಾಮಗಾರಿಗೆ ತಡೆಯೊಡ್ಡಿದರು. ಬಳಿಕ ಮತ್ತೆ ಲೆಟರ್‌ನಲ್ಲಿ ಹಸ್ತಾಕ್ಷರ ಸಹಿ ಮಾಡಿ ತಂದು ನೀಡಿದಾಗ ಸಂಜೆ ವೇಳೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತೆ ಆರಂಭವಾಯಿತು.**

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಪಳ್ಳಿಚಟ್ಟಂಬಿ (ಕ) + ಪಳ್ಳಿಚಟ್ಟಂಬಿ (ತ) | 2+2 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ರೆಬೆಲ್ (ತೆ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಡಕಾಯಿಟ್ (ಹಿ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಕೋಟಿಗೊಬ್ಬ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಕೋಟಿಗೊಬ್ಬ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಲವ್ ಇನ್ಶೂರೆನ್ಸ್ ಕಂಪನಿ (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಕೋಟಿಗೊಬ್ಬ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಮಾಣಿಕ್ಯ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಪುನೀತ್ ನಿವಾಸ (ಕ) | 4 ಪ್ರದರ್ಶನಗಳು |

## ಬಿವಿಬಿ ಶಾಲೆಗೆ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.100 ಫಲಿತಾಂಶ


ಎಸ್.ಗೌರಿಶ್ರೀ ಜಿ.ತೇಜಸ್ ಡಿ.ತನಿಷ್ಕಾ

ಮೈಸೂರು,ಏ.23(ಪಿಎಂ)– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ಶಾಲೆಯು ಶೇ.100ರಷ್ಟು ಫಲಿತಾಂಶ ದಾಖಲಿಸಿದೆ.

ಪರೀಕ್ಷೆ ಬರೆದ 141 ವಿದ್ಯಾರ್ಥಿಗಳಲ್ಲಿ 123 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಜೊತೆಗೆ 18 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಎಸ್.ಗೌರಿಶ್ರೀ, ಜಿ.ತೇಜಸ್, ಡಿ.ತನಿಷ್ಕಾ ಎಂಬ ವಿದ್ಯಾರ್ಥಿಗಳು 625 ಅಂಕಗಳಿಗೆ 620 ಅಂಕಗಳನ್ನು (99.20) ಗಳಿಸಿದ್ದಾರೆ. ಈ ವರ್ಷದ ಸಾಧನೆ ದಾಖಲೆಯಾಗಿದ್ದು, ಗರಿಷ್ಠ ಸಂಖ್ಯೆಯ ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ ಎಂದು ಶಾಲೆಯ ಪ್ರಕಟಣೆಯಲ್ಲಿ ಹರ್ಷ ವ್ಯಕ್ತಪಡಿಸಲಾಗಿದೆ.

## ರಾಮಕೃಷ್ಣ ವಿದ್ಯಾಶಾಲೆಗೆ ಶೇ.100 ಫಲಿತಾಂಶ


ಎಂ.ಆತಿಶ್ ಶ್ರೇಯಾಮ್ ಅನಯ್ ಸಚಿನ್ ರಾವ್


ಮೈಸೂರು, ಏ.23– ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾಶಾಲೆಯು 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ದಾಖಲಿಸಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ಶಾಲೆಯ ಒಟ್ಟು 102 ವಿದ್ಯಾರ್ಥಿಗಳಲ್ಲಿ 91 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ತೇರ್ಗಡೆಯಾದರೆ, 11 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 22 ವಿದ್ಯಾರ್ಥಿಗಳು 625ಕ್ಕೆ 600ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ.

ಎಂ.ಆತಿಶ್ 621 ಅಂಕಗಳನ್ನು ಗಳಿಸಿದ್ದರೆ, ಶ್ರೇಯಾಮ್ ಆದಿತ್ಯ ಚಂದ್ರ 621, ಅನಯ್ ಸಚಿನ್ ರಾವ್ 618, ಕೀರ್ತಿ ವಿವೇಕ್ ಸಾಹುಕಾರ್ 617, ಟಿ.ಎಚ್. ಧನ್ವಿನ್ 615, ಎಸ್.ಎನ್.ತೇಜಸ್ 615 ಅಂಕಗಳನ್ನು ಪಡೆದು ಶಾಲೆಗೆ ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ.

ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು ಹಾಗೂ ಬೇಲೂರು ರಾಮಕೃಷ್ಣ ಮಠ ಮತ್ತು ಮಿಷನ್‌ನ ಟ್ರಸ್ಟಿಗಳಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿದ್ದು, ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ನಿಂತು ಸಹಕರಿಸಿದ ಶಿಕ್ಷಕರುಗಳ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಕೊಡಗು ಮಾಡೆಲ್ ಸ್ಕೂಲ್‌ಗೆ 6ನೇ ಬಾರಿಗೆ ಶೇ.100ರಷ್ಟು ಫಲಿತಾಂಶ


ಐಶ್ವರ್ಯ ರಾಧಾಶ್ರೀ ಯಶಸ್ವಿನಿ ಕೀರ್ತನಾ ಶಿವಕುಮಾರ್
ದೀಪಾಶ್ರೀ ಲಿಖಿತಾ ಹರ್ಷ ಯಶವಂತ್ ಅಂಜಲಿ
ಪ್ರೇರಣಾ ದೀಕ್ಷಿತಾ ಮಾನ್ಯ ಭೂಮಿಕಾ ಲಿಖಿತಾ

ಮೈಸೂರು,ಏ.23(ಪಿಎಂ)– ಸಾತಗಳ್ಳಿ ವಿದ್ಯಾಶಂಕರನಗರ ಕಾವೇರಿ ಮುಖ್ಯ ರಸ್ತೆಯಲ್ಲಿರುವ ಮೈಸೂರು ಈಸ್ಟ್ ಶ್ರೀ ಕಾವೇರಿ ಕೊಡವ ಅಸೋಸಿಯೇಷನ್‌ನ ಕೊಡಗು ಮಾಡೆಲ್ ಸ್ಕೂಲ್ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ದಾಖಲಿಸಿದೆ.

ಶಾಲೆಯು ಸತತ 6ನೇ ಬಾರಿಗೆ ಶೇ.100ರಷ್ಟು ಫಲಿತಾಂಶ ದಾಖಲಿಸಿದ್ದು, ಈ ಬಾರಿ 15 ಮಂದಿ ಅತ್ಯುನ್ನತ ಶ್ರೇಣಿ ಹಾಗೂ 10 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಐಶ್ವರ್ಯ ಎಸ್.ಗೌಡ (ಶೇ.98.7), ಎಂ.ರಾಧಾಶ್ರೀ ರಾಜ್ (ಶೇ.98), ಕೆ.ಯಶಸ್ವಿನಿ (ಶೇ.95.8), ಕೆ.ಕೀರ್ತನಾ ಮತ್ತು ಜೆ.ಶಿವಕುಮಾರ್ (ಇಬ್ಬರೂ ಶೇ.95.5), ಎಂ.ಪಿ.ದೀಪಾಶ್ರೀ (ಶೇ.95), ಆರ್.ಲಿಖಿತಾ (ಶೇ.94.7), ವೈ.ಎಸ್.ಹರ್ಷ (ಶೇ.93.9), ಎಸ್.ಯಶವಂತ್‌ಕುಮಾರ್ (ಶೇ.90.5), ಎಂ.ಎಸ್.ಅಂಜಲಿ (ಶೇ.89.6), ಎಂ.ಪ್ರೇರಣಾ (ಶೇ.88.1), ಡಿ.ದೀಕ್ಷಿತಾ (ಶೇ.87), ಎಸ್.ಮಾನ್ಯ (ಶೇ.86.8), ಪಿ.ಭೂಮಿಕಾ (ಶೇ.86.4) ಹಾಗೂ ಎಂ.ಲಿಖಿತಾ (ಶೇ.85.4) ಉತ್ತಮ ಅಂಕಗಳೊಂದಿಗೆ ಸಾಧನೆ ಮಾಡಿದ್ದಾರೆ. ಈ ಸಾಧನೆಗೆ ಕಾರಣರಾದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗವನ್ನು ಶಾಲೆಯ ಆಡಳಿತ ಮಂಡಳಿ ಅಭಿನಂದಿಸಿದೆ.

## 500 ರೂ. ಬೆಟ್ಟಿಂಗ್ ಕೇಸ್: ಗೃಹ ಸಚಿವ ಪರಮೇಶ್ವರ್‌ಗೆ ಬಿಗ್ ರಿಲೀಫ್!



ಬೆಂಗಳೂರು, ಏ.23– ಗೃಹ ಸಚಿವ ಪರಮೇಶ್ವರ್ ವಿರುದ್ಧದ 500 ರೂಪಾಯಿ ಬೆಟ್ಟಿಂಗ್ ಪ್ರಕರಣಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ತಮಾಷೆಗಾಗಿ ಮಾತನಾಡಿದರೂ ಕೇಸ್ ಹಾಕಬಹುದೇ ಉದ್ದೇಶಪೂರ್ವಕವಾಗಿ ಇಂತಹ ಹೇಳಿಕೆ ನೀಡಿದಂತೆ ಕಾಣುತ್ತಿಲ್ಲ. ತನಿಖೆಗೆ ಆದೇಶಿಸುವ ಮುನ್ನ ಪೊಲೀಸರಿಂದ ವಿವರಣೆ ಪಡೆಯಬೇಕಿತ್ತು ಎಂದು ನ್ಯಾಯಮೂರ್ತಿ ಸುನಿಲ್ ದತ್ ಯಾದವ್ ಅವರಿದ್ದ ಹೈಕೋರ್ಟ್ ಪೀಠ ಅಭಿಪ್ರಾಯ ಪಟ್ಟಿದೆ. ಅಲ್ಲದೇ ಪ್ರಕರಣಕ್ಕೆ ತಡೆ ನೀಡಿ ವಿಚಾರಣೆಯನ್ನು ಮುಂದೂಡಿದೆ. ಇದರಿಂದ ಗೃಹ ಸಚಿವ ಪರಮೇಶ್ವರ್ ಅವರಿಗೆ ರಿಲೀಫ್ ಸಿಕ್ಕಂತಾಗಿದೆ.


ಕಬಡ್ಡಿ ಟೂರ್ನಿಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರೊಂದಿಗೆ 500 ರೂಪಾಯಿ ಬಾಜಿ ಕಟ್ಟಿ ಸೋತಿದ್ದರು. ಬಳಿಕ ತಮಾಷೆಗೆ ಬೆಟ್ಟಿಂಗ್ ಕಟ್ಟಿರುವುದನ್ನು ಸಹ ಪರಮೇಶ್ವರ್ ಹೇಳಿ ಕೊಂಡಿದ್ದರು. ಇದನ್ನು ಹೆಚ್.ಆರ್.ನಾಗ ಭೂಷಣ್ ಎಂಬುವರು ಖಾಸಗಿ ದೂರು ಸಲ್ಲಿಸಿದ್ದರು.

ಇದನ್ನು ವಿಚಾರಣೆ ನಡೆಸಿದ್ದ ಬೆಂಗಳೂರಿನ 42ನೇ ಎಸಿಜೆಎಂ ಕೋರ್ಟ್, ಪರಮೇಶ್ವರ್ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಆದೇಶ ಹೊರಡಿಸಿತ್ತು. ಬಳಿಕ ಇದನ್ನು ಪ್ರಶ್ನಿಸಿ ಪರಮೇಶ್ವರ್ ಹೈಕೋರ್ಟ್ ಮೆಟ್ಟಿಲೇರಿದ್ದು, ಪರಮೇಶ್ವರ್ ಪರವಾಗಿ ಹಿರಿಯ ವಕೀಲ ಕೆ.ಎನ್.ಫಣೀಂದ್ರ ವಾದ ಮಂಡಿಸಿದರು.

ಈ ವಾದ ಆಲಿಸಿದ ನ್ಯಾಯಮೂರ್ತಿ ಸುನಿಲ್ ದತ್ ಯಾದವ್ ಅವರಿದ್ದ ಹೈಕೋರ್ಟ್ ಪೀಠ, ತನಿಖೆಗೆ ಆದೇಶಿಸುವ ಮುನ್ನ ಪೊಲೀಸರಿಂದ ವಿವರಣೆ ಪಡೆಯಬೇಕಿತ್ತು ಎಂದು ನ್ಯಾಯಮೂರ್ತಿ ಸುನಿಲ್ ದತ್ ಯಾದವ್ ಅವರಿದ್ದ ಹೈಕೋರ್ಟ್ ಪೀಠ ಅಭಿಪ್ರಾಯಪಟ್ಟು ಪ್ರಕರಣಕ್ಕೆ ತಡೆ ಯಾಜ್ಞೆ ನೀಡಿ ವಿಚಾರಣೆ ಮುಂದೂಡಿದೆ.

**ಏನಿದು ಪ್ರಕರಣ:** 2025ರಲ್ಲಿ ತುಮಕೂರಿನಲ್ಲಿ ನಡೆದಿದ್ದ ಕಬ್ಬಡಿ ಟೂರ್ನಿಯಲ್ಲಿ ಚಿಕ್ಕೋಡಿ ಹಾಗೂ ವಿಜಯಪುರ ನಡುವೆ ಕಬಡ್ಡಿ ಪಂದ್ಯಾವಳಿ ನಡೆಯುತ್ತಿತ್ತು. ಈ ವೇಳೆ ಚಿಕ್ಕೋಡಿ ತಂಡ ಗೆಲ್ಲುವುದಾಗಿ ಪರಮೇಶ್ವರ್ ಅವರು 500 ರೂಪಾಯಿ ಬೆಟ್ಟಿಂಗ್ ಕಟ್ಟಿದ್ದರು. ಆದರೆ, ವಿಜಯಪುರ ತಂಡ ಗೆಲುವು ಸಾಧಿಸಿತ್ತು ಇದರಿಂದ ಪರಮೇಶ್ವರ್ ಸೋತಿದ್ದರಿಂದ ಡಿಸಿಗೆ 500 ರೂಪಾಯಿ ಹಣ ನೀಡಿದ್ದರು. ಇದನ್ನು ಸ್ವತಃ ಪರಮೇಶ್ವರ್ ಅವರೇ ಪ್ರಶಸ್ತಿ ನೀಡುವಾಗ ಬಹಿರಂಗವಾಗಿಯೇ ಹೇಳಿಕೊಂಡಿದ್ದರು.

ಕಬಡ್ಡಿ ಪಂದ್ಯದ ವೇಳೆ ನಾನು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರೊಂದಿಗೆ ತಮಾಷೆಗಾಗಿ ಬೆಟ್ಟಿಂಗ್ 500 ರೂಪಾಯಿ ಬೆಟ್ಟಿಂಗ್ ಕಟ್ಟಿದ್ದೆ ಎಂದು ಸಚಿವರು ಹೇಳಿದ್ದು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಬೆಟ್ಟಿಂಗ್ ಕಟ್ಟುವುದು ಅಪರಾಧ ಎಂದು ಎಚ್.ಆರ್ ನಾಗಭೂಷಣ ಎಂಬುವರು ಖಾಸಗಿ ದೂರು ದಾಖಲಿಸಿದ್ದರು.



## ಮಧ್ಯಮವ್ಯಾಯೋಗ ನಾಟಕ ಪ್ರದರ್ಶನ

ಮೈಸೂರು, ಏ.23– ಮೈಸೂರಿನ ಕೃಷ್ಣಮೂರ್ತಿಪುರದಲ್ಲಿರುವ ಸೋಸಲೆ ಶ್ರೀಮದ್ವ್ಯಾಸರಾಜಮಠದ ಶ್ರೀವ್ಯಾಸತೀರ್ಥವಿದ್ಯಾಪೀಠದಲ್ಲಿ ಗುರುವಾರ 11ನೇ ವಾರ್ಷಿಕೋತ್ಸವ ವಿಜೃಂಭಣೆಯಿಂದ ಜರುಗಿತು. ಈ ವೇಳೆ ಶ್ರೀಕಾಂತಾಚಾರ್ಯರ ಮಾರ್ಗದರ್ಶನದಲ್ಲಿ ವ್ಯಾಸತೀರ್ಥವಿದ್ಯಾಪೀಠದ ವಿದ್ಯಾರ್ಥಿಗಳು "ಮಧ್ಯಮವ್ಯಾಯೋಗ" ಎಂಬ ಸಂಸ್ಕೃತದ ನಾಟಕವನ್ನು ಸುಂದರವಾಗಿ ಪ್ರದರ್ಶಿಸಿದರು. ಸೋಸಲೆ ವ್ಯಾಸರಾಜಮಠಾಧೀಶರಾದ ಶ್ರೀವಿದ್ಯಾಶ್ರೀಶತೀರ್ಥರ ದಿವ್ಯಸಾನಿಧ್ಯದಲ್ಲಿ ನಡೆಯಿತು. ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಪುರಾತತ್ವ ಇಲಾಖೆಯ ಆಯುಕ್ತ ದೇವರಾಜ, ಮುಡಾ ಮಾಜಿ ಅಧ್ಯಕ್ಷ ರಾಜೀವ್, ಹಿರಿಯ ವಿದ್ವಾಂಸ ಸಿ.ಹೆಚ್.ಶ್ರೀನಿವಾಸಮೂರ್ತಿ ಆಚಾರ್ಯ, ವಿದ್ಯಾಪೀಠದ ಗೌರವ ಕಾರ್ಯದರ್ಶಿ ಡಾ.ಮಧುಸೂಧನಾಚಾರ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಶೋ ಬುಟ್ಟಿಯೊಳಗೆ ಅಡಗಿದ್ದ ನಾಗರಹಾವು ರಕ್ಷಣೆ



ಮೈಸೂರು, ಏ.23(ವಿವಿಹೆಚ್)– ಮೈಸೂರಿನ ಹೆಬ್ಬಾಳದ ಮನೆಯೊಂದರ ಶೋ ಬುಟ್ಟಿಯೊಳಗೆ ಅಡಗಿ ಕುಳಿತಿದ್ದ ನಾಗರಹಾವನ್ನು ಉರಗ ತಜ್ಞ ಸ್ನೇಕ್ ಶ್ಯಾಮ್ ಸುರಕ್ಷಿತವಾಗಿ ರಕ್ಷಿಸಿದ್ದಾರೆ.

ಹೆಬ್ಬಾಳದ ನಿವಾಸಿ ಕುಳ್ಳೇಗೌಡ ಎಂಬುವವರ ಮನೆಯಲ್ಲಿನ ಹಾಲ್‌ನಲ್ಲಿ ಇರಿಸಲಾಗಿದ್ದ ಶೋ ಬುಟ್ಟಿಯೊಳಗೆ ನಾಗರಹಾವು ಹೆಡೆ ಎತ್ತಿ ಮಲಗಿತ್ತು. ಹಾವನ್ನು ಕಂಡ ಮನೆಯವರು ಗಾಬರಿಕೊಂಡು ತಕ್ಷಣವೇ ಸ್ನೇಕ್ ಶ್ಯಾಮ್ ಅವರಿಗೆ ಕರೆ ಮಾಡಿ ಮಾಹಿತಿ ನೀಡಿದರು. ಸ್ಥಳಕ್ಕಾಗಮಿಸಿದ ಸ್ನೇಕ್ ಶ್ಯಾಮ್ ಶೋ ಬುಟ್ಟಿಯೊಳಗಿದ್ದ ನಾಗರಹಾವು ಹೊರಬರದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಂಡು, ಕೆಲವೇ ನಿಮಿಷಗಳಲ್ಲಿ ಹಾವನ್ನು ಯಶಸ್ವಿಯಾಗಿ ಹಿಡಿದರು.



# ಕೃಷಿಕ್ ಸರ್ವೋದಯ ಫೌಂಡೇಶನ್‌ನ ಕೆಎಸ್‌ಎಫ್ ಸ್ಕೂಲ್ ಆಫ್ ಬಿಸಿನೆಸ್ ಅಂಡ್ ಟೆಕ್ನಾಲಜಿ ಕಾಲೇಜು ಕಟ್ಟಡ ಉದ್ಘಾಟನೆ

## ಸಂಸ್ಥೆಯಿಂದ ಐಎಎಸ್, ಕೆಎಎಸ್ ಪರೀಕ್ಷೆಗೆ ಉತ್ತಮ ತರಬೇತಿ; ಶಾಸಕ ಜಿ.ಟಿ.ದೇವೇಗೌಡರ ಪ್ರಶಂಸೆ


ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು ಟೇಪ್ ಕತ್ತರಿಸುವ ಮೂಲಕ ಕೆಎಸ್‌ಎಫ್ ಸ್ಕೂಲ್ ಆಫ್ ಬಿಸಿನೆಸ್ ಅಂಡ್ ಟೆಕ್ನಾಲಜಿ ಕಾಲೇಜು ಕಟ್ಟಡ ಉದ್ಘಾಟಿಸಿದರು.

ಮೈಸೂರು, ಏ.23(ವಿವಿಹೆಚ್)– ಪ್ರತಿಭಾವಂತ ವಿದ್ಯಾರ್ಥಿಗಳು, ಗ್ರಾಮೀಣ ಭಾಗದ ಯುವಕರಿಗೆ ಐಎಎಸ್–ಕೆಎಎಸ್ ತರಬೇತಿ ನೀಡುವ ಮೂಲಕ ಕೃಷಿಕ್ ಸರ್ವೋದಯ ಫೌಂಡೇಶನ್ ಮೈಸೂರಿನ ಕಳಶಪ್ರಾಯವಾಗಿದೆ ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯಪಟ್ಟರು.

ನಗರದ ವಿಜಯನಗರ 2ನೇ ಹಂತದ ಕೃಷಿಕ್ ಸರ್ವೋದಯ ಫೌಂಡೇಶನ್ ಮೈಸೂರು ಶಾಖೆಯಲ್ಲಿ ನೂತನವಾಗಿ ನಿರ್ಮಿಸಿರುವ ಕೆಎಸ್‌ಎಫ್ ಸ್ಕೂಲ್ ಆಫ್ ಬಿಸಿನೆಸ್ ಅಂಡ್ ಟೆಕ್ನಾಲಜಿ ಕಾಲೇಜು ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಡಾ.ವೈ.ಕೆ.ಪುಟ್ಟಸ್ವಾಮೀಗೌಡರು ತಮ್ಮ ಅನುಭವದ ಆಧಾರದಲ್ಲಿ ಈ ಫೌಂಡೇಶನ್ ಕಟ್ಟಿ ಕನ್ನಡಿಗರಿಗೆ ಅನುಕೂಲ ಮಾಡಿಕೊಟ್ಟರು. ವೃತ್ತಿಪರ ತರಬೇತಿ ಶಿಕ್ಷಣ ಪಡೆಯಲು ಡೆಲ್ಲಿಗೆ ಹೋಗುವವರು, ದಿಕ್ಕೇ ತೋಚದವರಿಗೆ ನೆರವಾಗುವ ನಿಟ್ಟಿನಲ್ಲಿ ಈ ಸಂಸ್ಥೆ ಪ್ರಾರಂಭಿಸಬೇಕೆಂದು ಪಣ ತೊಟ್ಟರು. ಅದರ ಫಲವಾಗಿ ಇಂದು ಸಾವಿರಾರು ಮಂದಿ ಶಿಕ್ಷಣ ಪಡೆಯುತ್ತಿದ್ದಾರೆ ಎಂದರು.

ಫೌಂಡರ್ ಟ್ರಸ್ಟಿಗಳು ಎಷ್ಟೇ ಎಡರು–ತೊಡರುಗಳು ಬಂದರೂ ಅದನ್ನೆಲ್ಲಾ ಮೆಟ್ಟಿನಿಂತು, ವಿದ್ಯಾರ್ಥಿಗಳಿಗೆ ಐಎಎಸ್, ಕೆಎಎಸ್ ಪರೀಕ್ಷೆಗೆ ನೀಡುವ ಜೊತೆಗೆ ಪೂರಕವಾದ ವಾತಾವರಣವನ್ನು ಈ ಸಂಸ್ಥೆ ನೀಡುತ್ತಾ ಬಂದಿದೆ ಎಂದು ವಿವರಿಸಿದರು.

ಕೆಎಸ್‌ಎಫ್ ಶ್ರಮ, ನಿರಂತರ ಪ್ರಯತ್ನದ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನೇ ಮಾಡುತ್ತಿದ್ದಾರೆ. ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಮೀರಿಸಿ, ಸಂಸ್ಕಾರವಂತ ಶಿಕ್ಷಣವನ್ನು ಈ ಸಂಸ್ಥೆ ನೀಡುತ್ತಿದೆ. ಜೊತೆಗೆ ಸಮಾಜಕ್ಕೆ ಶಕ್ತಿ ತುಂಬುವ ಕೆಲಸವನ್ನು ಮಾಡುತ್ತಿದೆ ಎಂದು ತಿಳಿಸಿದರು.

ಆದಿ ಚುಂಚನಗಿರಿ ಮಠ, ಹಳ್ಳಿ ಮಕ್ಕಳಿಗೆ ಸಂಸ್ಕೃತ ವಿಷಯವನ್ನೂ ಒಳಗೊಂಡಂತೆ ಗುಣಮಟ್ಟದ ಶಿಕ್ಷಣ ನೀಡುವ ಕೆಲಸವನ್ನು ಮಾಡುತ್ತಾ ಬರುತ್ತಿದೆ. ಜೊತೆಗೆ ಗ್ರಾಮೀಣ ಭಾಗದಲ್ಲಿ ಆಸ್ಪತ್ರೆ ಶಾಲಾ–ಕಾಲೇಜು ಮತ್ತು ವಿವಿಗಳನ್ನು ಕರ್ನಾಟಕ, ತಮಿಳುನಾಡು ಸೇರಿದಂತೆ ದೇಶ, ವಿದೇಶಗಳಲ್ಲಿ ತೆರೆಯುವ ಮೂಲಕ ಸಮಾಜಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬಂದಿದೆ. ಇಂತಹ ಸಂಸ್ಥೆಯಿಂದ ನೋಡಿ ಕಲಿಯುವುದು ಬಹಳಷ್ಟಿದೆ ಎಂದು ಇದೇ ವೇಳೆ ಶ್ಲಾಘನೆ ವ್ಯಕ್ತಪಡಿಸಿದರು.

ಕೃಷಿಕ್ ಸರ್ವೋದಯ ಫೌಂಡೇಷನ್ ಟ್ರಸ್ಟಿ ಹಾಗೂ ಕಾರ್ಯದರ್ಶಿ ಟಿ.ತಿಮ್ಮೇಗೌಡ ಮಾತನಾಡಿ, ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ಯುವಕರಿಗೆ ಮಾರ್ಗದರ್ಶನ, ಮಾಹಿತಿ ಮತ್ತು ತರಬೇತಿಯನ್ನು ನೀಡುವ ಉದ್ದೇಶದಿಂದ 10 ಜನ ಫೌಂಡರ್ ಟ್ರಸ್ಟಿಗಳು ಸೇರಿ ಈ ಸಂಸ್ಥೆಯನ್ನು ಪ್ರಾರಂಭ ಮಾಡಿದರು. ಇದರಿಂದ ಇಂದು ಸಾವಿರಾರು ವಿದ್ಯಾರ್ಥಿಗಳು ಸದುಪಯೋಗ ಪಡೆಯುತ್ತಿದ್ದಾರೆ ಎಂದರು.

ಇದಕ್ಕೂ ಮೊದಲು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ, ಸೋಮೇಶ್ವರನಾಥ ಸ್ವಾಮೀಜಿ ಅವರು ಕೆಎಸ್‌ಎಫ್ ಸ್ಕೂಲ್ ಆಫ್ ಬಿಸಿನೆಸ್ ಅಂಡ್ ಟೆಕ್ನಾಲಜಿ ಕಾಲೇಜು ಕಟ್ಟಡವನ್ನು ಉದ್ಘಾಟಿಸಿದರು.

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕೃಷಿಕ್ ಸರ್ವೋದಯ ಫೌಂಡೇಷನ್ ಅಧ್ಯಕ್ಷ ಡಾ.ವೈ.ಕೆ.ಪುಟ್ಟಸ್ವಾಮೇಗೌಡ, ಟ್ರಸ್ಟಿ ಎಂ.ಕೆ.ಶಂಕರಲಿಂಗೇಗೌಡ, ಖಜಾಂಚಿ ಸಿ.ಕೆ.ಶಿವಣ್ಣ, ಮೈಸೂರು ಶಾಖೆ ಅಧ್ಯಕ್ಷ ಡಾ.ಎನ್.ಎಸ್.ರಾಮೇಗೌಡ, ಉಪಾಧ್ಯಕ್ಷ ನಂಜೇಗೌಡ, ಉಪಾಧ್ಯಕ್ಷ ಬಿ.ಕೆ.ಶಿವಣ್ಣ, ಟ್ರಸ್ಟಿ ಕೆ.ಎಂ.ಚಂದ್ರೇಗೌಡ, ಕಾರ್ಯದರ್ಶಿ ಕಿಶೋರ್ ಚಂದ್ರ, ಜಂಟಿ ಕಾರ್ಯದರ್ಶಿ ವೈ.ಕೆ.ಕೆಂಚೇಗೌಡ, ಖಜಾಂಚಿ ಎಸ್.ವಿ.ಗೌಡಪ್ಪ ಉಪಸ್ಥಿತರಿದ್ದರು.

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

'ಮಿತ್ರ'ನ ಮಿಣುಕು | ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 47 | ಏಪ್ರಿಲ್ 24 ಶುಕ್ರವಾರ 2026 | ಪುಟಗಳು: IV


## ಚುನಾವಣಾ ವ್ಯವಸ್ಥೆ ತೀರಾ ಹದಗೆಟ್ಟಿದೆ; ಸದ್ಯ ಪರಿಹಾರ ಮಾರ್ಗಗಳೇ ಕಾಣುತ್ತಿಲ್ಲ...!

- ವಿಧಾನಸಭೆ ಮಾಜಿ ಸ್ಪೀಕರ್ ಕೆ.ಆರ್.ರಮೇಶ್‌ಕುಮಾರ್ ಕಳವಳ
- ಪ್ರಜಾಪ್ರಭುತ್ವ ಮಾರುಕಟ್ಟೆಯಾಗಿ ಮಾರ್ಪಟ್ಟಿದೆ
- ರಾಜಕಾರಣಿಗಳ ಮಾತಿನಲ್ಲಿ ಬದ್ಧತೆ, ಆದ್ಯತೆ ಇರಬೇಕು
- ಕ್ಯಾಪಿಟಲ್ ಫೋರ್ಸ್ ಸಂಸ್ಕೃತಿ ನಿರ್ನಾಮ ಮಾಡಲು ಮುಂದಾಗಿವೆ
- ವಿಶ್ವದಲ್ಲಿ ಪ್ರಜಾಪ್ರಭುತ್ವ ಬೆಳವಣಿಗೆಗೆ ಮೈಸೂರು ರಾಜರ ಕೊಡುಗೆ ಸ್ಮರಣೀಯ




ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಗುರುವಾರ ಕರ್ನಾಟಕ ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ ಮೂರು ದಿನಗಳ 21ನೇ ಮಹಾ ಸಮ್ಮೇಳನದಲ್ಲಿ ವಿಧಾನಸಭೆಯ ಮಾಜಿ ಸ್ಪೀಕರ್ ಕೆ.ಆರ್.ರಮೇಶ್‌ಕುಮಾರ್ ಅವರು ರಜತ ಮಹೋತ್ಸವದ ಸಂಪುಟ ಬಿಡುಗಡೆ ಮಾಡಿದರು. ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ವೆಲೆರಿಯೆನ್ ರೋಡ್ರಿಗಸ್, ಪ್ರೊ.ಸೋಮಶೇಖರ್, ಪ್ರೊ.ಕೃಷ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು, ಏ.23(ಐಎಲ್‌ಯು)– ಪ್ರಸ್ತುತ ಚುನಾವಣಾ ವ್ಯವಸ್ಥೆ ಸರಿ ಮಾಡಲು ಸಾಧ್ಯವಾಗದಷ್ಟು ಹದಗೆಟ್ಟಿದೆ. ಇದರಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಪಾತ್ರ ಸಮಾನವಾಗಿದ್ದು, ಯಾರೂ ಹೊರ ತಾಗಿಲ್ಲ ಎಂದು ವಿಧಾನಸಭೆ ಮಾಜಿ ಸ್ಪೀಕರ್ ಕೆ.ಆರ್.ರಮೇಶ್‌ಕುಮಾರ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಇಂದು ಕರ್ನಾಟಕ ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ ಮೂರು ದಿನಗಳ 21ನೇ ಮಹಾ ಸಮ್ಮೇಳನ ಹಾಗೂ ರಜತ ಮಹೋತ್ಸವ ಸಮಾರಂಭ ಉದ್ಘಾಟಿಸಿ, 'ರಾಜ್ಯಶಾಸ್ತ್ರದ ಪರಿಶೀಲನೆ: ರಾಜ್ಯ, ಸಮಾಜ, ಮಾರುಕಟ್ಟೆ ಮತ್ತು ವ್ಯಕ್ತಿ' ವಿಚಾರ ಕುರಿತು ಮಾತನಾಡಿದ ಅವರು, ಚುನಾವಣಾ ವ್ಯವಸ್ಥೆಯ ಪರಿಸ್ಥಿತಿ ಹೀಗಾಗಿದ್ದರೆ ಪ್ರಜಾಪ್ರಭುತ್ವ ಮಾರುಕಟ್ಟೆಯಾಗಿ ಮಾರ್ಪಟ್ಟಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇದರಿಂದ ಮೊದಲು ರಾಜ್ಯ, ಮಾರುಕಟ್ಟೆ, ವ್ಯಕ್ತಿ ನಂತರ ಸಮಾಜ ಎನ್ನುವ ವ್ಯವಸ್ಥೆ ನಿರ್ಮಾಣವಾಗಿದೆ. ಹೀಗಿರುವಾಗ ಪ್ರತಿಭಟಿಸುವ ಹಕ್ಕು ಯಾರಿಗೆ, ಹೇಗೆ ಬರುತ್ತದೆ ಎಂದು ಪ್ರಶ್ನಿಸಿದರು.

ಪ್ರಜಾಪ್ರಭುತ್ವ ಎಂಬುದು ಉಡುಗೊರೆಯಾಗಿ ಬಂದಿಲ್ಲ. ದೇಶ ಪ್ರೇಮಿಗಳ ನಿರಂತರ ಹೋರಾಟದ ಫಲವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ರೂಪುಗೊಂಡಿದೆ. ಆದರೆ ಚುನಾವಣಾ ವ್ಯವಸ್ಥೆ ತೀರಾ ಹದಗೆಟ್ಟಿದ್ದು, ಇದನ್ನು ಸರಿಮಾಡಲು ಪರಿಹಾರ ಮಾರ್ಗಗಳೇ ಕಾಣುತ್ತಿಲ್ಲ ಎಂದು ರಮೇಶ್‌ಕುಮಾರ್ ಅಸಹಾಯಕತೆ ವ್ಯಕ್ತಪಡಿಸಿದರು.

ರಾಜಕಾರಣದಲ್ಲಿ ನಾವು ಆಡುವ ಪ್ರತಿಯೊಂದು ಮಾತು ಹೃದಯಾಂತರಾಳದಿಂದ ಬರಬೇಕು. ಆ ಮಾತಿನಲ್ಲಿ ಬದ್ಧತೆ, ಆದ್ಯತೆ ಇರಬೇಕು. ಹಾಗೆಯೇ ಆಡಳಿತಗಾರನಿಗೆ ವಿಶಿಷ್ಟ ಸಂಬಂಧವಿರಬೇಕು. ಅಲ್ಲದೆ ಆಡಳಿತಗಾರನಿಗೆ ಪಂಚೇಂದ್ರಿಯದ ಮೇಲೆ ಹತೋಟಿ ಇರಬೇಕು ಎಂದರು.

ಆದರೆ ನಮ್ಮ ರಾಜಕಾರಣಿಗಳು ನಟನೆಯಲ್ಲಿ ಎತ್ತಿದ ಕೈ. ವರನಟ ಡಾ.ರಾಜ್‌ಕುಮಾರ್ ಅವರಿಗೂ ರಾಜಕಾರಣಿಗಳಷ್ಟು ನಟನೆ ಗೊತ್ತಿರಲಿಲ್ಲ. ಕ್ಯಾಲೆಂಡರ್ ಮತ್ತು ಸಮಯ ಪ್ರತಿದಿನ ಬದಲಾಯಿಸುತ್ತಿರುತ್ತಾರೆ. ಚುನಾವಣೆ ನಡೆದು, ಒಂದು ದಿನ ಫಲಿತಾಂಶ ಪ್ರಕಟವಾದರೆ ಮುಂದಿನ ಚುನಾವಣೆಯ ಮತದಾನದ ದಿನ ಯಾವತ್ತಿರಬಹುದು ಎಂದು ಇಂದೆ ಕ್ಯಾಲೆಂಡರ್ ತಿರುವಿ ಹಾಕುತ್ತಾರೆ. ಅಷ್ಟರ ಮಟ್ಟಿಗೆ ರಾಜಕಾರಣಿಗಳ ನಟನೆ ಎಲ್ಲೆ ಮೀರಿದ್ದು, ಇವರ ನಟನೆಗೆ ಸರಿಸಾಟಿ ಯಾರೂ ಇಲ್ಲ ಎಂದು ರಮೇಶ್‌ಕುಮಾರ್ ಹಾಸ್ಯ ಚಟಾಕಿ ಹಾರಿಸಿದರು.

**ಸಂಸ್ಕೃತಿ ನಿರ್ನಾಮ ಯತ್ನ:** ದೇಶವನ್ನು ನಿರ್ನಾಮ ಮಾಡಲು ಅದರ ಸಂಸ್ಕೃತಿ ಕೊಂದರೆ ಸಾಕು, ಅದು ಅವನತಿಯತ್ತ ಸಾಗುತ್ತದೆ ಆದರೆ ಈಗ ಕ್ಯಾಪಿಟಲ್ ಫೋರ್ಸ್ ಇದನ್ನೆ ಮಾಡುತ್ತಿದೆ. ಸಂಸದೀಯ ಪ್ರಜಾಪ್ರಭುತ್ವದಲ್ಲಿ ನೇರವಾಗಿರುವವರಿಗೆ ತಡೆಯೊಡ್ಡುತ್ತಿದ್ದಾರೆ. ಈ ಮೂಲಕ ಮಾರುಕಟ್ಟೆಗೆ ನೇರ ಸಂಪರ್ಕ ಹೊಂದುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂವಿಧಾನದ ಹೆಸರಿನಲ್ಲಿ ಅದರ ಒಳಗಿನಿಂದಲೇ ಸಂವಿಧಾನವನ್ನೆ ಹೇಗೆ ನಿರ್ನಾಮ ಮಾಡುವುದು ಎಂದು ಯೋಚಿಸುವವರು ಇದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ನಮ್ಮ ಸಾರ್ವಜನಿಕ ಜೀವನ ಬಹಳಷ್ಟು ಅಪಾಯಕಾರಿಯಾಗಿದೆ. ಇದರಿಂದ ನಾನು ಕ್ರಿಯಾಶೀಲ ರಾಜಕಾರಣದಿಂದ ಹೊರ ಬಂದಿದ್ದೇನೆ. ಇಂತಹ ಸಂದರ್ಭದಲ್ಲಿ ಮಾದರಿ ಆಡಳಿತ ನೀಡಿದ ಮೈಸೂರು ರಾಜ–ಮಹಾರಾಜರನ್ನು ನಾವು ನೆನೆಯುವುದು ಅತ್ಯವಶ್ಯಕ. ಬಹಳ ಹಿಂದೆಯೇ ಪ್ರಜಾಪ್ರಭುತ್ವ ವ್ಯವಸ್ಥೆ, ಮೀಸಲಾತಿ ಸೌಲಭ್ಯವನ್ನು ಜಾರಿಗೊಳಿಸಿದರು. ಈ ಹಿನ್ನೆಲೆಯಲ್ಲಿ ವಿಶ್ವದ ಇತಿಹಾಸದ ಪ್ರಜಾಪ್ರಭುತ್ವ ಬೆಳವಣಿಗೆಯಲ್ಲಿ ಮೈಸೂರು ರಾಜಸಂಸ್ಥಾನದ ಕೊಡುಗೆ ಸ್ಮರಣೀಯವಾಗಿದೆ ಎಂದು ಅಭಿಪ್ರಾಯಪಟ್ಟರು.

ರಾಜರು ನಿರಂಕುಶ ಪ್ರಭುಗಳು. ಆದರೆ, ಸ್ವಭಾವತಃ ಮಾನವೀಯ ಗುಣ ಹಾಗೂ ಸಮಾಜದ ಉದ್ಧಾರದ ಮನೋಭಾವ ಹೊಂದಿದ್ದರೆ ಚಿಂತೆ ಇಲ್ಲ. ಆದರೆ ರಾಕ್ಷಸನಾದರೆ ಸಮಾಜವನ್ನು ಕೆಡಿಸುತ್ತಾನೆ. ಇಂತಹ ರಾಜನ ವಿರುದ್ಧ ಪ್ರಜೆಗಳು ದಂಗೆ ಎದ್ದ ಇತಿಹಾಸವನ್ನು ಅವಲೋಕಿಸಬೇಕು ಎಂದು ರಮೇಶ್‌ಕುಮಾರ್ ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು, ರಾಜಕಾರಣ, ರಾಜಕೀಯ ಶಾಸ್ತ್ರದ ಬಗ್ಗೆ ಮುಂದಿನ ಪೀಳಿಗೆಗೆ ಮನವರಿಕೆ ಮಾಡಿಕೊಡಬೇಕು. ಇದರ ಅರಿವಿದ್ದರೆ ಪ್ರಜಾಪ್ರಭುತ್ವದ ಜವಾಬ್ದಾರಿಯುತ ರಾಜಕಾರಣ ವ್ಯವಸ್ಥೆ ನಿರ್ಮಾಣವಾಗುತ್ತದೆ ಎಂದು ಎಚ್ಚರಿಸಿದರು. ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ವೆಲೆರಿಯೆನ್ ರೋಡ್ರಿಗಸ್, ಪ್ರೊ.ಸೋಮಶೇಖರ್, ಪ್ರೊ.ಕೃಷ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

### ನಮ್ಮೂರಲ್ಲಿ ಕುಡಿಯುವ ನೀರಿಗೆ ಅಭಾವ, ರಸ್ತೆಗಳಿಲ್ಲ; ಆದರೆ ಸ್ಕಾಚ್ ಎಷ್ಟು ಬೇಕಾದರೂ ಸಿಗುತ್ತೆ!

ನಮ್ಮೂರಿನಲ್ಲಿ ಕುಡಿಯುವ ನೀರಿಗೆ ಅಭಾವವಿದ್ದು, ಸರಿಯಾದ ರಸ್ತೆಗಳಿಲ್ಲ. ಆದರೆ ಸ್ಕಾಚ್ ಬಾಟಲ್ (ಮದ್ಯ) ಮಾತ್ರ ಎಷ್ಟು ಬೇಕಾದರೂ ಸಿಗುತ್ತೆ ಎಂದು ರಮೇಶ್‌ಕುಮಾರ್ ವ್ಯವಸ್ಥೆಯನ್ನು ಅಣಕಿಸಿದರು. ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಮೂಲಭೂತ ಸೌಕರ್ಯದ ಅಭಿವೃದ್ಧಿಯಾಗಿಲ್ಲ. ಆದರೆ ಸ್ಕಾಚ್ ಬಾಟಲ್ ಅವಶ್ಯವಿದ್ದಾಗ ಸಿಗುವಷ್ಟು ಊರು ಬೆಳೆದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸ್ತುತ ರಾಜಕಾರಣದಲ್ಲಿ ನೈತಿಕತೆ ಮರೆಯಾಗಿದೆ. ಈ ಹಿಂದೆ ರೈಲ್ವೆ ಅಪಘಾತವಾದಾಗ ರೈಲ್ವೆ ಸಚಿವರಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದರು. ಆದರೆ ಈಗ ರೈಲು ಅಪಘಾತವಾದರೆ ಚಾಲಕನನ್ನು ಅಮಾನತು ಮಾಡುವ ಸ್ಥಿತಿ ಬಂದಿದೆ. ಹೀಗಿರುವಾಗ ನೈತಿಕತೆಯ ಮೌಲ್ಯ ಹೇಗೆ ಬರುತ್ತದೆ ಎಂದು ರಮೇಶ್‌ಕುಮಾರ್ ಪ್ರಶ್ನಿಸಿದರು.

## ಯುಜಿ, ಸಿಇಟಿ ಪರೀಕ್ಷೆ ಬರೆದ 17,736 ವಿದ್ಯಾರ್ಥಿಗಳು



ನೋಂದಾಯಿತ ಅಭ್ಯರ್ಥಿಗಳೇ ಪರೀಕ್ಷೆಗೆ ಹಾಜರಾಗಿರುವುದನ್ನು ಖಚಿತಪಡಿಸಲು ಮೊಬೈಲ್ ಆ್ಯಪ್ ಮೂಲಕ ಮುಖ ಗುರುತು (ಫೇಸ್ ರಿಕಗ್ನಿಷನ್) ಪತ್ತೆ ಹಚ್ಚಲಾಯಿತು.

ಮೈಸೂರು,ಏ.23(ಜಿಎ)–ಮೈಸೂರಲ್ಲಿ ಕರ್ನಾಟಕ ಪರೀಕ್ಷಾ ಮಂಡಳಿಯಿಂದ ನಡೆಸಲಾದ ಪದವಿ ಪೂರ್ವ ಸಾಮಾನ್ಯ ಪ್ರವೇಶ ಪರೀಕ್ಷೆ (ಯುಜಿ, ಸಿಇಟಿ) 36 ಕೇಂದ್ರಗಳಲ್ಲಿ ಶಾಂತಿಯುತವಾಗಿ ನಡೆಯಿತು.

ಒಟ್ಟು 17,736 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರು. ಪರೀಕ್ಷಾ ಕೇಂದ್ರಗಳಿಗೆ ಆಗಮಿಸಿದ ವಿದ್ಯಾರ್ಥಿಗಳನ್ನು ಪ್ರವೇಶದ್ವಾರದಲ್ಲಿ ಪೊಲೀಸರು ಮೆಟಲ್ ಡಿಟೆಕ್ಟರ್ ಮೂಲಕ ತಪಾಸಣೆ ನಡೆಸಿದರು. ಬಳಿಕ, ನೋಂದಾಯಿತ ಅಭ್ಯರ್ಥಿಗಳೇ ಪರೀಕ್ಷೆಗೆ ಹಾಜರಾಗಿರುವುದನ್ನು ಖಚಿತಪಡಿಸಲು ಮೊಬೈಲ್ ಆ್ಯಪ್ ಮೂಲಕ ಮುಖ ಗುರುತು (ಫೇಸ್ ರೆಕಗ್ನಿಷನ್) ಪತ್ತೆ ಹಚ್ಚಲಾಯಿತು. ಪರೀಕ್ಷೆಯ ಪಾರದರ್ಶಕತೆ ಹಾಗೂ ಅಕ್ರಮಗಳನ್ನು ತಡೆಯುವ ಉದ್ದೇಶದಿಂದ 36 ಫ್ಲೈಯಿಂಗ್ ಸ್ಕ್ವಾಡ್‌ಗಳನ್ನು ನಿಯೋಜಿಸಲಾಗಿತ್ತು. ಅವರು ವಿವಿಧ ಕೇಂದ್ರಗಳಿಗೆ ಭೇಟಿ ನೀಡಿದರು. ಜಿಲ್ಲೆಯ ಆಡಳಿತವು ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಅವುಗಳನ್ನು ಜಿಲ್ಲಾಧಿಕಾರಿಗಳ ಕಚೇರಿಯ ಕಮಾಂಡ್ ಸೆಂಟರ್‌ನಿಂದ ಮೇಲ್ವಿಚಾರಣೆ ಮಾಡಲಾಯಿತು.

ಪರೀಕ್ಷೆಯ ಮೊದಲ ದಿನವಾದ ಇಂದು ಬೆಳಿಗ್ಗೆ 10.30ರಿಂದ 11.50ರವರೆಗೆ ಭೌತಶಾಸ್ತ್ರ ಮತ್ತು ಮಧ್ಯಾಹ್ನ 2.30ರಿಂದ 3.50ರವರೆಗೆ ರಸಾಯನಶಾಸ್ತ್ರ ಪರೀಕ್ಷೆಗಳು ನಡೆದವು. ನಾಳೆ (ಏ.24) ಬೆಳಿಗ್ಗೆ 10.30ರಿಂದ 11.50ರವರೆಗೆ ಗಣಿತ ಹಾಗೂ ಮಧ್ಯಾಹ್ನ 2.30ರಿಂದ 3.50ರವರೆಗೆ ಜೀವಶಾಸ್ತ್ರ ಪರೀಕ್ಷೆಗಳು ನಡೆಯಲಿವೆ.

ವಿದ್ಯಾರ್ಥಿಗಳು ಪಾಲಿಸಬೇಕಾದ ಮಾರ್ಗಸೂಚಿಗಳಾದ ಕಾಲರ್ ಇರುವ ಟೀ–ಶರ್ಟ್‌ಗಳು, ಪೂರ್ಣಬಾಹು ಅಂಗಿಗಳು, ಶೂಗಳು, ಸಾಕ್ಸ್, ಬಹು ಜೇಬುಗಳಿರುವ ಪ್ಯಾಂಟ್‌ಗಳು ಹಾಗೂ ಮಂಗಳಸೂತ್ರವನ್ನು ಹೊರತುಪಡಿಸಿ ಇತರೆ ಆಭರಣಗಳನ್ನು ಧರಿಸಲು ನಿರ್ಬಂಧ ಹೇರಲಾಗಿತ್ತು. ಈ ನಿಯಮಗಳನ್ನು ಉಲ್ಲಂಘಿಸದ ಕಾರಣದಿಂದ ಯಾವುದೇ ವಿದ್ಯಾರ್ಥಿಗೆ ಪ್ರವೇಶ ನಿರಾಕರಿಸಿದ ಪ್ರಕರಣಗಳು ವರದಿಯಾಗಿಲ್ಲ.

## ಮಹಿಳಾ ಮಸೂದೆ ವಿರೋಧಿಸುವ ವಿಪಕ್ಷಗಳ ನಡೆ ಪಾಪ ಕೃತ್ಯ

- ಕೇಂದ್ರ ಸಚಿವ ವಿ.ಸೋಮಣ್ಣ ಆಕ್ರೋಶ
- ವಿರೋಧ ಪಕ್ಷಗಳಿಗೆ ದೇಶದ ಜನ ತಕ್ಕ ಪಾಠ ಕಲಿಸ್ತಾರೆ!

ಮೈಸೂರು, ಏ.23(ಎಂಕೆ)– ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸಿರುವ ವಿರೋಧ ಪಕ್ಷಗಳ ನಡೆ 'ಪಾಪದ ಕೃತ್ಯ' ಎಂದು ಕೇಂದ್ರ ಸಚಿವ ವಿ.ಸೋಮಣ್ಣ ತೀವ್ರವಾಗಿ ಟೀಕಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿ ಸಭಾಂಗಣದಲ್ಲಿ ಗುರುವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್, ಡಿಎಂಕೆ ಮೊದಲಾದ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸುವ ಮೂಲಕ ಪಾಪದ ಕೃತ್ಯ ಮಾಡಿವೆ ಎಂದು ಹರಿಹಾಯ್ದರು.

ಮಹಿಳಾ ಮೀಸಲಾತಿ 50 ವರ್ಷಗಳ ಹಿಂದೆಯೇ ಆಗಬೇಕಿತ್ತು. ಆದರೆ, ಇಲ್ಲಿವರೆಗೆ ಅನುಷ್ಠಾನಕ್ಕೆ ಬರದಿರುವುದು ದುರದೃಷ್ಟಕರ. ಮಹಿಳೆಯರು ಮುಂಚೂಣಿಗೆ ಬರಬಾರದು ಎಂಬ ಕಾರಣದಿಂದಲೇ ವಿಪಕ್ಷಗಳು ವಿರೋಧಿಸುವ ಮೂಲಕ ಪಾಪದ ಕೃತ್ಯ ಮಾಡಿದ್ದು, ಧರ್ಮಾಧಾರಿತವಾಗಿ ಮೀಸಲಾತಿ ನೀಡಬೇಕೆಂಬ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ಒಕ್ಕೂಟದ ಪಕ್ಷಗಳ ದುರುದ್ದೇಶವನ್ನು ಜನರ ಮುಂದಿಡುವ ಕೆಲಸವನ್ನು ನಾವು ಮಾಡುತ್ತಿದ್ದೇವೆ ಎಂದು ಹೇಳಿದರು.

ವಿರೋಧ ಪಕ್ಷಗಳ ನಾಟಕೀಯ ಬೆಳವಣಿಗೆ ಎಲ್ಲರಿಗೂ ಅರ್ಥವಾಗಿದೆ. ಕ್ಷೇತ್ರ ಪುನರ್ ವಿಂಗಡಣೆಯಿಂದ ದಕ್ಷಿಣ ಭಾರತಕ್ಕೆ ಅನ್ಯಾಯ ಆಗಲಿದೆ ಎಂಬ ನೆಪ ಇಟ್ಟುಕೊಂಡು ಮಹಿಳಾ ಮೀಸಲಾತಿ ಬಿಲ್ ಪಾಸ್ ಆಗದಂತೆ ಮಾಡಿದ್ದಾರೆ. ಈ ವಿಚಾರದಲ್ಲಿ ಡಿಎಂಕೆ ಬೂಟಾಟಿಕೆ ಪ್ರದರ್ಶಿಸಿದೆ ಎಂದು ಟೀಕಿಸಿದರು.



ಮೈಸೂರಿನ ಬಿಜೆಪಿ ಕಚೇರಿ ಸಭಾಂಗಣದಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಸಂಸದ ಯದುವೀರ್ ಒಡೆಯರ್, ಶಾಸಕ ಶ್ರೀವತ್ಸ, ವಿಧಾನ ಪರಿಷತ್ ಮಾಜಿ ಸದಸ್ಯೆ ಹಾಗೂ ಹಿರಿಯ ನಟಿ ತಾರಾ ಅನುರಾಧ, ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಮಂಜುಳಾ ಮತ್ತಿತರರಿದ್ದರು.

ಕ್ಷೇತ್ರ ಪುನರ್ ವಿಂಗಡಣೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ ಆಗುವುದಿಲ್ಲ. ವಿಕಸಿತ ಭಾರತ ನಿರ್ಮಾಣಕ್ಕಾಗಿ ಮಹಿಳಾ ಮೀಸಲಾತಿ ಅವಶ್ಯವಿದ್ದು, ಎಲ್ಲರೂ ಒಟ್ಟಾಗಿ ಮಹಿಳಾ ಮೀಸಲಾತಿ ಮಸೂದೆಯನ್ನು ಬೆಂಬಲಿಸೋಣ ಕೇಂದ್ರ ಸರ್ಕಾರ ಮನವರಿಕೆ ಮಾಡಿಕೊಟ್ಟರೂ ಕುಂಟು ನೆಪ ಇಟ್ಟುಕೊಂಡು ಮಹಿಳಾ ಮೀಸಲಾತಿ ಮಸೂದೆಗೆ ವಿರೋಧ ವ್ಯಕ್ತಪಡಿಸಿದ ವಿಪಕ್ಷಗಳಿಗೆ ಮುಂದಿನ ದಿನಗಳಲ್ಲಿ ದೇಶದ ಜನರು ತಕ್ಕಪಾಠ ಕಲಿಸಲಿದ್ದಾರೆ ಎಂದರು.

ಕ್ಷೇತ್ರ ಪುನರ್ ವಿಂಗಡಣೆಯಿಂದ ದಕ್ಷಿಣದ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗಿ, ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗುತ್ತಿತ್ತು. ಈ ಅವಕಾಶವನ್ನು ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳು ತಪ್ಪಿಸಿವೆ. ಮಹಿಳಾ ಮೀಸಲಾತಿ ಮಸೂದೆ ವಿರೋಧಿಸುವ ಮೂಲಕ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳು ತಮ್ಮ ಶವಪೆಟ್ಟಿಗೆಯ ಕೊನೆಯ ಮೊಳೆಯನ್ನು ತಾವೇ ಹೊಡೆದುಕೊಳ್ಳುತ್ತಿವೆ ಎಂದು ಕಿಡಿಕಾರಿದರು.

**ನಾರಿ ಶಕ್ತಿ ಕೆಣಕಿದರೆ ಉಳಿಗಾಲವಿಲ್ಲ:** ನಾರಿ ಶಕ್ತಿಯನ್ನು ಕೆಣಕಿದವರಿಗೆ ಉಳಿಗಾಲವಿಲ್ಲ ಎಂಬುದಕ್ಕೆ ಇತಿಹಾಸದ ಪುಟಗಳು ಸಾಕ್ಷಿಯಾಗಿವೆ. ಮಹಾಭಾರತದಲ್ಲಿ ದ್ರೌಪದಿಯನ್ನು ಕೆಣಕಿದ ಕೌರವರ ಸ್ಥಿತಿ ಏನಾಯಿತು? ಸೀತೆಯನ್ನು ಅಪಹರಿಸಿದ ರಾವಣನ ಸ್ಥಿತಿ ಏನಾಯಿತು? ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಕೊಂದು ಹೆಣ್ಣು ಮಕ್ಕಳ ಸಿಂಧೂರ ಅಳಿಸಿದ ಉಗ್ರರ ಸ್ಥಿತಿ ಏನಾಯಿತು? ಎಂಬುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ ಎಂದು ಎಚ್ಚರಿಸಿದರು.

**ಪಾಪದ ಕೊಡ ತುಂಬಿದೆ:** ಮಹಿಳಾ ಮೀಸಲಾತಿ ಮಸೂದೆ ವಿರೋಧಿಸಿದ ಕಾಂಗ್ರೆಸ್ ಪಕ್ಷದ ಪಾಪದ ಕೊಡ ತುಂಬಿದೆ. ದೇಶದ ನಾರಿಯರು ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸುವ ಕಾಲ ದೂರವಿಲ್ಲ ಎಂದ ಸೋಮಣ್ಣ, ಮೋದಿ ವೈಯಕ್ತಿಕ ಹೆಸರಿನ ಕಾರಣಕ್ಕೆ ಮಹಿಳಾ ಮೀಸಲಾತಿ ಜಾರಿಗೆ ತರುತ್ತಿಲ್ಲ. ಅವರಿಗೆ ಅದರ ಅಗತ್ಯವೂ ಇಲ್ಲ. ಸೂರ್ಯ–ಚಂದ್ರ ಇರುವ ತನಕ ಅವರ ಹೆಸರು ಶಾಶ್ವತವಾಗಿ ಇರುತ್ತದೆ. ಅದೇ ರೀತಿ ಮುಂಬರುವ ದಿನಗಳಲ್ಲಿ ಮಹಿಳಾ ಮೀಸಲಾತಿ ಬಿಲ್ ಪಾಸ್ ಆಗುವ ವಿಶ್ವಾಸವಿದೆ ಎಂದರು.

**ಜನಾಕ್ರೋಶ ಪಾದಯಾತ್ರೆ:** ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಮಂಜುಳಾ ಮಾತನಾಡಿ, ಮಹಿಳಾ ಮೀಸಲಾತಿ ಮಸೂದೆ ವಿರೋಧಿಸಿದ ವಿಪಕ್ಷಗಳ ವಿರುದ್ಧ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು. ಏ.27ರಂದು ಜನಾಕ್ರೋಶ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಏ.30ರಂದು ಹುಬ್ಬಳ್ಳಿಯಲ್ಲಿ ಪಾದಯಾತ್ರೆ ನಡೆಸಲಿದ್ದೇವೆ ಎಂದರು. ಸಂಸದ ಯದುವೀರ್ ಒಡೆಯರ್, ಶಾಸಕ ಶ್ರೀವತ್ಸ, ವಿಧಾನಪರಿಷತ್ ಮಾಜಿ ಸದಸ್ಯೆ ಹಾಗೂ ಹಿರಿಯ ನಟಿ ತಾರಾ ಅನುರಾಧ ಸೇರಿದಂತೆ ಜಿಲ್ಲಾ ಮಹಿಳಾ ಮೋರ್ಚಾ ಪದಾಧಿಕಾರಿಗಳು, ನಗರಪಾಲಿಕೆ ಮಾಜಿ ಮಹಿಳಾ ಸದಸ್ಯರು ಉಪಸ್ಥಿತರಿದ್ದರು.

### ಹಳೇ ಸಿದ್ದರಾಮಯ್ಯ ಉಳಿದಿಲ್ಲ...!

"ಹಳೇ ಸಿದ್ದರಾಮಯ್ಯ ಅವರ ಐಡಿಯಾಲಜಿ ಉಳಿದಿಲ್ಲ. ಈಗಿನ ಸಿದ್ದರಾಮಯ್ಯ ಕೇವಲ ಅಧಿಕಾರಕ್ಕಾಗಿ ಇರುವವರು. ಸಿದ್ದರಾಮಯ್ಯ ಮತ್ತು ನಾನು ಒಟ್ಟಿಗೆ ಕೆಲಸ ಮಾಡಿದವರು. ಅವರನ್ನು ಹತ್ತಿರದಿಂದ ಬಲ್ಲೆ. ಅವರಿಗೆ ಮಹಿಳೆಯರ ಬಗ್ಗೆ ಕಾಳಜಿ ಇದ್ದಿದ್ದರೆ ಮಹಿಳಾ ಮೀಸಲಾತಿ ಬಗ್ಗೆ ತಮ್ಮ ನಾಯಕರಿಗೆ ತಿಳಿ ಹೇಳುತ್ತಿದ್ದರು. ಪ್ರಧಾನಿ ಮೋದಿ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೆಳಮಟ್ಟದ ಭಾಷೆ ಬಳಸಿದ್ದು ಸರಿಯಲ್ಲ. ಅವರು ಕ್ಷಮೆಯಾಚನೆ ಮಾಡಬೇಕು. ಬಾಯಿ ಚಪಲಕ್ಕೆ ಏನೇನೋ ಮಾತನಾಡುವುದು ಸರಿಯಲ್ಲ.

–ವಿ.ಸೋಮಣ್ಣ, ಕೇಂದ್ರ ಸಚಿವ

### ಬಿರು ಬಿಸಿಲಿನ ಭೀತಿ ಹಿನ್ನೆಲೆ

## ಕೆಆರ್, ಚೆಲುವಾಂಬದಲ್ಲಿ ಹೀಟ್ ಸ್ಟ್ರೋಕ್ ವಾರ್ಡ್ ವ್ಯವಸ್ಥೆ




ಕೆ.ಆರ್.ಆಸ್ಪತ್ರೆಯಲ್ಲಿ ಹೀಟ್ ಸ್ಟ್ರೋಕ್ ವಾರ್ಡ್ ತೆರೆದಿರುವುದು. ಚೆಲುವಾಂಬ ಮಕ್ಕಳ ಆಸ್ಪತ್ರೆಯಲ್ಲಿ ಹೀಟ್ ಸ್ಟ್ರೋಕ್ ವಾರ್ಡ್.

ಮೈಸೂರು,ಏ.23(ಎಂಟಿವೈ)– ಬಿಸಿಲಿನ ಬೇಗೆಗೆ ಬಳಲುವವರಿಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆ ಹಾಗೂ ಚೆಲುವಾಂಬ ಆಸ್ಪತ್ರೆಯಲ್ಲಿ ಪ್ರತ್ಯೇಕ 'ಹೀಟ್ ಸ್ಟ್ರೋಕ್ ವಾರ್ಡ್' ವ್ಯವಸ್ಥೆ ಮಾಡಲಾಗಿದ್ದು, ಸ್ಟ್ರೋಕ್‌ಗೆ ಒಳಗಾದವರಿಗೆ ತುರ್ತು ಚಿಕಿತ್ಸೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ರಾಜ್ಯದಲ್ಲಿ ಈ ಬಾರಿ ಬಿಸಿಲಿನ ತಾಪ ಹೆಚ್ಚಾಗಿದ್ದು, ಅಧಿಕ ಉಷ್ಣಾಂಶ ಜನರನ್ನು ತತ್ತರಿಸುವಂತೆ ಮಾಡಿದೆ. ಬಹುತೇಕ ಜಿಲ್ಲೆಗಳಲ್ಲಿ ತಾಪಮಾನ 35 ಡಿಗ್ರಿ ದಾಟಿದ್ದು, ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ 42 ಡಿಗ್ರಿ ದಾಖಲಾಗಿದೆ. ಜನ 'ಹೀಟ್ ಸ್ಟ್ರೋಕ್' ಬಗ್ಗೆ ತಜ್ಞ ವೈದ್ಯರು ಎಚ್ಚರಿಕೆ ನೀಡಿದ್ದು, ಈಗಾಗಲೇ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಈ ಮೂಲಕ ಪರಿಸ್ಥಿತಿಯಿಂದ ಸಾವಿನ ಪ್ರಕರಣಗಳು ದಾಖಲಾಗಿರುವುದರಿಂದ ರಾಜ್ಯ ಸರ್ಕಾರ ಸೂಚನೆ ಮೇರೆಗೆ ರಣ ಬಿಸಿಲಿನ ತಾಪಮಾನ ಇರುವ ಜಿಲ್ಲೆಗಳಲ್ಲಿ 'ಹೀಟ್ ಸ್ಟ್ರೋಕ್' ವಾರ್ಡ್ ತೆರೆಯಲಾಗಿದ್ದು, ಬಿಸಿಲಿನ ಬೇಗೆಯಿಂದ ಸ್ಟ್ರೋಕ್‌ಗೆ ಒಳಗಾದವರಿಗೆ ತುರ್ತು ಚಿಕಿತ್ಸೆ ನೀಡಲು ಆರೋಗ್ಯ ಇಲಾಖೆ ಹೈ ಅಲರ್ಟ್ ಆಗಿದೆ.

**ಕೆ.ಆರ್.ಆಸ್ಪತ್ರೆಯಲ್ಲಿ:** ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಹೀಟ್ ಸ್ಟ್ರೋಕ್‌ಗೆ ಒಳಗಾದವರಿಗೆ ಚಿಕಿತ್ಸೆಗಾಗಿ ಆಸ್ಪತ್ರೆಯ ಸರ್ಜಿಕಲ್ ಬ್ಲಾಕ್‌ನಲ್ಲಿ 30 ಹಾಸಿಗೆಯುಳ್ಳ ವಾರ್ಡ್ ತೆರೆಯಲಾಗಿದೆ. ಅಗತ್ಯಬಿದ್ದರೆ, ಇನ್ನು ಹತ್ತು ಹಾಸಿಗೆ ಹಾಕಲು ಇಲ್ಲಿ ಸ್ಥಳಾವಕಾಶವಿದೆ. 10 ಹಾಸಿಗೆ ಮಹಿಳೆಯರಿಗೆ, ಉಳಿದ 20 ಪುರುಷ ರೋಗಿಗಳಿಗೆ ಮೀಸಲಿಡಲಾಗಿದೆ. ಅಲ್ಲದೆ, ಚಿಕಿತ್ಸೆ ನೀಡಲು ಬೇಕಾದ ಸಿಂಥಮ್ಯಾಟಿಕ್ ಔಷಧ ದಾಸ್ತಾನು ಮಾಡಲಾಗಿದೆ. ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರಾದ ಡಾ.ಶೋಭಾ ಮಾರ್ಗದರ್ಶನದಲ್ಲಿ ವಿವಿಧ ಪಾಳಿಯಲ್ಲಿ ತಲಾ ಇಬ್ಬರು ನರ್ಸ್, ಓರ್ವ ಡಿ.ಗ್ರೂಪ್ ಸಿಬ್ಬಂದಿ ಹಾಗೂ ವೈದ್ಯರು ಕಾರ್ಯ ನಿರ್ವಹಿಸಲಿದ್ದಾರೆ. ಬುಧವಾರ(ಏ.22) ಸಂಜೆ ಈ ಹೊಸ ವಾರ್ಡ್ ಸಜ್ಜಾಗಿದ್ದು, ಇದುವರೆಗೆ ಯಾರೂ ದಾಖಲಾಗಿಲ್ಲ.

### ಹಿರಿಯ ನಾಗರಿಕರು, ಅನಾರೋಗ್ಯಪೀಡಿತರು, ಮಕ್ಕಳಿಗೆ ಎಚ್ಚರಿಕೆ

ಬಿಸಿಲಿನ ಬೇಗೆಯಿಂದ ತಾಪಮಾನ ಹೆಚ್ಚಾಗಿದ್ದು, ತೇವಾಂಶರಹಿತ ಬಿಸಿ ಗಾಳಿಯಿಂದ ಜನ ತತ್ತರಿಸುತ್ತಿದ್ದು, ಬೆಳಗ್ಗೆ 11 ಗಂಟೆಯಿಂದ ಸಂಜೆ 3 ಗಂಟೆವರೆಗೆ ಜನರನ್ನು ಕಂಗೆಡಿಸುತ್ತಿದೆ. ಹೀಟ್ ಸ್ಟ್ರೋಕ್‌ನಿಂದ ಪಾರಾಗಲು ಹಿರಿಯ ನಾಗರಿಕರು, ಬಿಪಿ, ಶುಗರ್, ಟಿಬಿ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗೆ ಒಳಗಾಗಿರುವವರು ಬೆಳಗ್ಗೆ 8 ಗಂಟೆಯೊಳಗೆ ವಾಯುವಿಹಾರ ಮುಗಿಸಿ, ಮನೆಗೆ ಮರಳಬೇಕು. ಸಂಜೆ 4 ಗಂಟೆ ನಂತರವಷ್ಟೇ ಮನೆಯಿಂದ ಹೊರಗೆ ಬರಬೇಕು. ಮಕ್ಕಳು ಬೆಳಗ್ಗೆ 10ರಿಂದ ಸಂಜೆ 4ರವರೆಗೂ ಆಟ ಆಡಲು ಮನೆಯಿಂದ ಹೊರಗೆ ಬರಬಾರದು. ಸಾಧ್ಯವಾದಷ್ಟು ನೆರಳಿನಲ್ಲಿದ್ದರೆ ಹೀಟ್ ಸ್ಟ್ರೋಕ್ ಸಮಸ್ಯೆಯಿಂದ ರಕ್ಷಣೆ ಪಡೆಯಬಹುದು.

### ಸ್ವಯಂ ಎಚ್ಚರಿಕೆ ಅತೀ ಅಗತ್ಯ

"ಬಿಸಿಲು ಹೆಚ್ಚಾಗಿದ್ದು, ದೇಹ ನಿರ್ಜಲೀಕರಣ(ಡಿಹೈಡ್ರೇಶನ್)ಕ್ಕೆ ಒಳಗಾಗುವ ಸಾಧ್ಯತೆ ಇದೆ. ತಾಪಮಾನ ಹೆಚ್ಚಾಗಿರುವುದರಿಂದ ಹೀಟ್ ಸ್ಟ್ರೋಕ್ ಸೇರಿದಂತೆ ವಿವಿಧ ಸಮಸ್ಯೆಗೆ ತುತ್ತಾಗುವ ಸಾಧ್ಯತೆ ಇದೆ. ಮೈಸೂರು ಜಿಲ್ಲೆಯಲ್ಲಿ ಹೀಟ್ ಸ್ಟ್ರೋಕ್ ಪ್ರಕರಣ ವಿರಳ. ಆದರೂ ಮುಂಜಾಗ್ರತಾ ಕ್ರಮ ಕೈಗೊಂಡು ಪ್ರತ್ಯೇಕ ವಾರ್ಡ್ ತೆರೆದು ಅಗತ್ಯ ಔಷಧಿ ದಾಸ್ತಾನು ಮಾಡಲಾಗಿದೆ. ಜನ ಹೆಚ್ಚಾಗಿ ನೀರು, ಎಳನೀರು ಸೇವಿಸಬೇಕು. ಸುಸ್ತು, ತಲೆ ಸುತ್ತು ಬಂದರೆ ಒಂದು ಲೋಟ ನೀರಿಗೆ ಓಆರ್‌ಎಸ್, ಒಂದು ಚಿಟಿಕೆ ಉಪ್ಪು, ಒಂದು ಚಮಚ ಸಕ್ಕರೆ ಹಾಕಿಕೊಂಡು ಕುಡಿಯಬೇಕು. ಬಿಸಿಲಿನಲ್ಲಿ ಹೊರಗೆ ಓಡಾಡಬಾರದು. ವಾಯು ವಿಹಾರವನ್ನು ಬಿಸಿಲಿಗೂ ಮುನ್ನವೇ ಪೂರ್ಣಗೊಳಿಸಬೇಕು. ಮಕ್ಕಳು ಬಿಸಿಲಿನಲ್ಲಿ ಆಟ ಆಡಲು ಹೋಗದಂತೆ ಪೋಷಕರು ಕಟ್ಟೆಚ್ಚರ ವಹಿಸಬೇಕು.

–ಡಾ.ದಾಕ್ಷಾಯಿಣಿ, ಡೀನ್ ಮತ್ತು ಡೈರೆಕ್ಟರ್, ಮೈಸೂರು ಮೆಡಿಕಲ್ ಕಾಲೇಜು

**ಚೆಲುವಾಂಬ ಮಕ್ಕಳ ಆಸ್ಪತ್ರೆಯಲ್ಲೂ ವಾರ್ಡ್:** ಮಕ್ಕಳ ಆರೋಗ್ಯದ ಮೇಲೂ ಬಿರು ಬಿಸಿಲು ದುಷ್ಪರಿಣಾಮ ಬೀರಲಿದ್ದು, ಈ ಹಿನ್ನೆಲೆಯಲ್ಲಿ ಮಕ್ಕಳ ಆರೋಗ್ಯ ರಕ್ಷಣೆಗೂ ಚೆಲುವಾಂಬ ಆಸ್ಪತ್ರೆಯಲ್ಲಿ 10 ಹಾಸಿಯುಳ್ಳ ಹೀಟ್ ಸ್ಟ್ರೋಕ್ ವಾರ್ಡ್ ತೆರೆಯಲಾಗಿದ್ದು, ಪ್ರತ್ಯೇಕ ಸಿಬ್ಬಂದಿ ನಿಯೋಜಿಸಲಾಗಿದೆ. ಆಸ್ಪತ್ರೆಯ ಅಧೀಕ್ಷಕರಾದ ಡಾ.ಸುಧಾ ನೇತೃತ್ವದಲ್ಲಿ ವಾರ್ಡ್ ಕಾರ್ಯ ನಿರ್ವಹಿಸಲಿದ್ದು, ಚಿಕಿತ್ಸೆಗೆ ಬೇಕಾದ ಔಷಧಿ ದಾಸ್ತಾನು ಮಾಡಲಾಗಿದೆ.

## ರಾಜಕೀಯ ನಾಯಕರ ವಿರುದ್ಧ ಅನಗತ್ಯ ದೂರು ನೀಡುವವರ ಮೇಲೆ ಸರ್ಕಾರ ನಿಗಾ ಇಡಲಿ

ಮೈಸೂರು, ಏ.23–ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಕಬಡ್ಡಿ ಪಂದ್ಯಾವಳಿ ವೇಳೆ ಕ್ರೀಡಾ ಸ್ಫೂರ್ತಿ ತುಂಬುವ ಉದ್ದೇಶದಿಂದ ಬೆಟ್ಟಿಂಗ್ ಕುರಿತು ಮಾತನಾಡಿದ್ದನ್ನು ರಾಜಕೀಯ ಹಗೆತನಕ್ಕೆ ಬಳಸಿಕೊಳ್ಳುವವರಿಗೆ ನ್ಯಾಯಾಲಯ ಒಂದು ರೀತಿಯಲ್ಲಿ ಚಾಟಿ ಬೀಸಿದೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಹೇಳಿದ್ದಾರೆ.



ಹೆಚ್.ಎ.ವೆಂಕಟೇಶ್

ಪಂದ್ಯಾವಳಿ ವೇಳೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ಬೆಟ್ಟಿಂಗ್ ಕುರಿತ ಹೇಳಿಕೆಯನ್ನು ರಾಜಕೀಯ ಹಗೆತನಕ್ಕೆ ಬಳಸಿಕೊಂಡು, ಸಚಿವರು ಮಹಾ ತಪ್ಪು ಮಾತನಾಡಿದ್ದಾರೆ ಎಂಬಂತೆ ಬಿಂಬಿಸುವ ಯತ್ನ ನಡೆಸಲಾಗಿತ್ತು. ಆದರೆ, ಸದರಿ ಪ್ರಕರಣದಲ್ಲಿ ಹೈಕೋರ್ಟ್ ತಡೆಯಾಜ್ಞೆ ನೀಡುವ ಮೂಲಕ ಎಲ್ಲಾ ವಿಷಯದಲ್ಲೂ ರಾಜಕೀಯ ಮಾಡುವವರಿಗೆ ಕಪಾಳಮೋಕ್ಷ ಮಾಡಿದೆ ಎಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ರಾಜಕೀಯ ನಾಯಕರು ಸೇರಿದಂತೆ ಗಣ್ಯ ವ್ಯಕ್ತಿಗಳನ್ನು ಯಾವುದೋ ಹೇಳಿಕೆ ಅಥವಾ ಸಂದರ್ಭಗಳನ್ನು ಮುಂದಿಟ್ಟುಕೊಂಡು ಆಪಾದಿಸುವ ಮೂಲಕ ಪ್ರಚಾರ ಗಿಟ್ಟಿಸಿಕೊಳ್ಳುವುದು ಚಾಳಿ ಆಗಿದೆ. ಇಂತಹ ತಂತ್ರಗಳ ಮೂಲಕ ತಮ್ಮ ಬೇಳೆ ಬೇಯಿಸಿಕೊಳ್ಳುವುದು ಸಮಾಜಕ್ಕೆ ಕಂಟಕವಾಗಿವೆ. ಕೆಲಸವಿಲ್ಲದ ಇಂತಹ ದೂರುದಾರರಿಗೂ ಆ ಪ್ರಕರಣಗಳಿಗೂ ಯಾವುದೇ ಸಂಬಂಧವಿರುವುದಿಲ್ಲ. ಅವರಲ್ಲಿ ಯಾವುದೇ ಸಾರ್ವಜನಿಕ ಹಿತಾಸಕ್ತಿಯೂ ಇರುವುದಿಲ್ಲ. ಪ್ರಚಾರದ ಹುಚ್ಚಿನಿಂದ ಜನರ ದಿಕ್ಕು ತಪ್ಪಿಸುತ್ತಾ ನಾಗರಿಕ ಸಮಾಜದ ಕಂಟಕವಾಗಿರುವ ಇಂಥವರ ಮೇಲೆ ಸರ್ಕಾರ ಕಣ್ಣಿಡಬೇಕು. ಸಮಾಜದ ಸ್ವಾಸ್ಥ್ಯ ಕೆಡಿಸಲು ಯತ್ನಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ವಿಶೇಷ ಘಟಕವನ್ನು ಸ್ಥಾಪಿಸಬೇಕು ಎಂದು ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

## ವಿದ್ಯುತ್ ಕಂಬ, ಕಾಂಪೌಂಡ್‌ಗೆ ಡಿಕ್ಕಿ ಹೊಡೆದ ಇನ್ನೋವಾ



ಮೈಸೂರು,ಏ.23–ಚಾಲಕನ ನಿಯಂತ್ರಣ ತಪ್ಪಿದ ಟೊಯೋಟಾ ಇನ್ನೋವಾ ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು, ಬಳಿಕ ಕಾಂಪೌಂಡ್‌ಗೂ ಗುದ್ದಿರುವ ಘಟನೆ ಗುರುವಾರ ಬೆಳಗ್ಗೆ ನಡೆದಿದೆ. ಮೈಸೂರು–ಗದ್ದಿಗೆ ಮುಖ್ಯ ರಸ್ತೆಯಲ್ಲಿ ಗುರುವಾರ ಬೆಳಗ್ಗೆ 6 ಗಂಟೆ ಸುಮಾರಿಗೆ ಗದ್ದಿಗೆ ಕಡೆಯಿಂದ ಮೈಸೂರಿನತ್ತ ಬರುತ್ತಿದ್ದ ಇನ್ನೋವಾ ಕಾರು, ಬೋಗಾದಿ ಎಸ್‌ಬಿಎಂ ಬಡಾವಣೆ ಸಮೀಪದ ಮುಖ್ಯರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ನಂತರ ಪಕ್ಕದಲ್ಲಿದ್ದ ಕಾಂಪೌಂಡ್‌ಗೂ ಗುದ್ದಿದೆ. ಪರಿಣಾಮ ವಿದ್ಯುತ್ ಕಂಬ ಮತ್ತು ಕಾಂಪೌಂಡ್ ಮುರಿದು, ಕಾರಿನ ಮುಂಭಾಗವೂ ಜಖಂಗೊಂಡಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

# 30 ದಿನದಲ್ಲಿ ಡಿಸಿ ಮಾನ್ಯ ಮಾಡದಿದ್ದರೂ ಭೂ ಪರಿವರ್ತನೆ ಸ್ವಯಂಚಾಲಿತ

ಮೈಸೂರು, ಏ.23(ಎಸ್‌ಪಿಎನ್)– ಇನ್ನು ಮುಂದೆ ಆಫಿಡವಿಟ್ ಆಧಾರಿತ ಭೂಪರಿವರ್ತನೆ ಅರ್ಜಿಗೆ ಒಟ್ಟು 30 ಕೆಲಸದ ದಿನಗಳಲ್ಲಿ ಜಿಲ್ಲಾಧಿಕಾರಿಗಳು ತೀರ್ಮಾನ ಕೈಗೊಳ್ಳದಿದ್ದಲ್ಲಿ ಸದರಿ ಭೂ ಪರಿವರ್ತನಾ ಅರ್ಜಿಗೆ ಜಿಲ್ಲಾಧಿಕಾರಿಗಳ ಮಾನ್ಯತೆ ಇದೆ ಎಂದು ಪರಿಗಣಿಸಲಾಗುವುದು ಎಂದು ಕಂದಾಯ ಆಯುಕ್ತಾಲಯದ ಆಯುಕ್ತೆ ಮೀನಾ ನಾಗರಾಜ್ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂಗೆ ಸಂಬಂಧಿಸಿದಂತೆ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಗಳಿಗೆ ಭೂ ಪರಿವರ್ತನೆ ಪ್ರಕ್ರಿಯೆಗಳನ್ನು ಸರಳೀಕರಿಸುವ ಉದ್ದೇಶದಿಂದ ಕರ್ನಾಟಕ ಭೂ ಕಂದಾಯ ನಿಯಮಗಳು, 1966 ನಿಯಮ 106 ಸಿ, 106 ಡಿ, 106 ಇ ಮತ್ತು 106 ಎಫ್‌ಗಳಲ್ಲಿ ಸೂಕ್ತ ತಿದ್ದುಪಡಿ ಮಾಡಿ 2025ರ ಡಿ.23ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಹೊರಡಿಸಲಾಗಿದೆ.

ಅದರಂತೆ ಅಫಿಡವಿಟ್ ಆಧಾರಿತ ಭೂ ಪರಿವರ್ತನೆ ಅರ್ಜಿಗೆ ಸಂಬಂಧಿಸಿದಂತೆ ತಹಶೀಲ್ದಾರ್, ಅರಣ್ಯ ಇಲಾಖೆ ಇತರೆ ಇಲಾಖೆಗಳು ಅಭಿಪ್ರಾಯ ನೀಡಲು 15 ದಿನಗಳ ಕಾಲಾವಕಾಶ ವಿದ್ದು, ಜಿಲ್ಲಾಧಿಕಾರಿಗಳ ಕಚೇರಿ ವಿಷಯ ನಿರ್ವಾಹಕರಿಗೆ ತಲಾ 5 ದಿನ, ಎಡಿಸಿ ಅಥವಾ ಜಿಲ್ಲಾಧಿಕಾರಿ ಗಳಿಗೆ ತಲಾ ಐದು ದಿನಗಳ ಕಾಲಾವಕಾಶ ನೀಡಿ ಆದೇಶಿಸಿದೆ.

ಅಫಿಡವಿಟ್ ಆಧಾರಿತ ಅರ್ಜಿಗೆ ಸಂಬಂಧಿಸಿದಂತೆ ಒಟ್ಟು 30 ದಿನ ಕೆಲಸದ ದಿನಗಳಲ್ಲಿ ಡಿಸಿ ತೀರ್ಮಾನ ಕೈಗೊಳ್ಳದಿದ್ದಲ್ಲಿ ಸದರಿ ಭೂ ಪರಿವರ್ತನಾ ಅರ್ಜಿಗೆ ಜಿಲ್ಲಾಧಿಕಾರಿ ಅನುಮೋದನೆಯಿದೆ ಎಂದು ಪರಿಗಣಿಸಿ, ಶುಲ್ಕ ಪಾವತಿಗಾಗಿ ಅರ್ಜಿದಾರರ ಅರ್ಜಿಗೆ ಅನುಮೋದನೆ ಯಿದೆ. ಶುಲ್ಕ ಪಾವತಿಗಾಗಿ ಅರ್ಜಿದಾರರ ಲಾಗಿನ್‌ಗೆ ವರ್ಗಾವಣೆಯಾಗುತ್ತದೆ. ಹಾಗೂ ಶುಲ್ಕ ಪಾವತಿಯಾದ ನಂತರ ತಂತ್ರಾಂಶದ ಮೂಲಕ ಸ್ವಯಂ ಚಾಲಿತವಾಗಿ ಭೂಪರಿವರ್ತನೆ ಆದೇಶ ಸೃಜಿಸಲ್ಪಡುತ್ತದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಇಂದು ಉಚಿತ ಆರೋಗ್ಯ ತಪಾಸಣೆ ಶಿಬಿರ



ಮೈಸೂರು,ಏ.23– ನಟ ಸಾರ್ವಭೌಮ ಡಾ.ರಾಜಕುಮಾರ್ ಅವರ ಹುಟ್ಟುಹಬ್ಬದ ಪ್ರಯುಕ್ತ ಏ.24 ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಮೈಸೂರಿನ ದಟ್ಟಗಳ್ಳಿಯ ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಬೆಳಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ.

ಶಿಬಿರದಲ್ಲಿ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ಸಮಾಲೋಚನೆ, ಬಿಪಿ, ಶುಗರ್, ಇಸಿಜಿ, ಜನರಲ್ ಮೆಡಿಸಿನ್ ಸೇವೆ ನೀಡಲಾಗುವುದು. ಅಗತ್ಯವಿರುವವರಿಗೆ ವೈದ್ಯರ ಸಲಹೆ ಮೇರೆಗೆ ಔಷಧಿಗಳು, ಲ್ಯಾಬ್‌ಟೆಸ್ಟ್, ಸಿಟಿ ಸ್ಕ್ಯಾನ್, ಎಕ್ಸರೇ ಮುಂತಾದ ಆರೋಗ್ಯ ಸೇವೆಗಳನ್ನು ಉಚಿತವಾಗಿ ನೀಡಲಾಗುವುದು. ಶಿಬಿರದಲ್ಲಿ ಮಕ್ಕಳ ತಜ್ಞರು, ಚರ್ಮರೋಗ ತಜ್ಞರು, ಸಾಮಾನ್ಯ ವೈದ್ಯಕೀಯ ತಜ್ಞರು, ಕಿವಿ, ಮೂಗು, ಗಂಟಲು ತಜ್ಞರು, ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು, ಶಸ್ತ್ರ ಚಿಕಿತ್ಸಾ ತಜ್ಞರು ಭಾಗ ವಹಿಸಲಿದ್ದಾರೆ. ಮಾಹಿತಿಗೆ ಮೊ:9513310100, 9513310102 ಸಂಪರ್ಕಿಸಬಹುದು.

## ಅಭಿನಂದನೆ....



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ.ಗಿರೀಶ್ ಅವರನ್ನು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಚಿವ ಎನ್.ಮಹೇಶ್, ನಗರ ಅಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಉಪ ಮೇಯರ್ ವಿ.ಶೈಲೇಂದ್ರ ಆತ್ಮೀಯವಾಗಿ ಅಭಿನಂದಿಸಿದರು


# ಇಂದು 'ಎಲ್ರ ಕಾಲೆಳೆಯುತ್ತೆ ಕಾಲ' ತೆರೆಗೆ

ಮೈಸೂರು, ಏ.23(ಜಿಎ)–ಸಿನಿಮಾ ಪ್ರಿಯರನ್ನು 80–90ರ ದಶಕಕ್ಕೆ ಕರೆದೊಯ್ಯುವ ಗ್ರಾಮೀಣ ಜೀವನದ ಕಥಾ ಹಂದರವುಳ್ಳ 'ಎಲ್ರ ಕಾಲೆಳೆಯುತ್ತೆ ಕಾಲ' ಚಲನಚಿತ್ರ ಇದೇ ಏ.24 ರಂದು ರಾಜ್ಯವೂ ಸೇರಿದಂತೆ ವಿದೇಶಗಳಲ್ಲಿಯೂ ತೆರೆ ಕಾಣಲಿದೆ ಎಂದು ನಿರ್ದೇಶಕ ಸುಜಯ್ ಶಾಸ್ತ್ರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದಲ್ಲಿ ಹಿರಿಯ ಕಲಾವಿದರಾದ ತಾರಾ, ದತ್ತಣ್ಣ, ಮಂಡ್ಯ ರಮೇಶ್ ಬಹು ದೊಡ್ಡ ತಾರಾಗಣವಿದೆ. ಇಡೀ ಚಿತ್ರ ರೆಟ್ರೋ ಶೈಲಿಯಲ್ಲಿ ಮೂಡಿ ಬಂದಿದ್ದು, ಕಳೆದ ಹಲವು ವರ್ಷಗಳಲ್ಲಿ ಈ ಶೈಲಿಯ ಚಿತ್ರಗಳು ಉತ್ತಮ ಫಲಿತಾಂಶ ನೀಡಿರುವ ನಿಟ್ಟಿನಲ್ಲಿ ಮಾಡಲಾಗಿದೆ ಎಂದರು.

ಹಿರಿಯ ನಟಿ ತಾರಾ ಮಾತನಾಡಿ, ಈ ಚಿತ್ರದಲ್ಲಿರುವ ಹಳಬರೊಡನೆ ಹೊಸ ಮುಖಗಳು ಭರವಸೆ ಮೂಡಿಸುತ್ತವೆ. ಯಾವುದೇ ಚಿತ್ರ ಮೈಸೂರಿನಲ್ಲಿ ಯಶಸ್ಸು ಕಂಡರೆ ಇತರೆಡೆಯೂ ಯಶಸ್ವಿಯಾಗುತ್ತದೆ ಎಂಬ ಮಾತು ಸತ್ಯ. ಹಿರಿಯರು ಯಾವ ರೀತಿ ಕಾಲ ಅಳೆಯುತ್ತಿದ್ದರು ಎಂಬುದನ್ನು ಈ ಚಿತ್ರ ತಿಳಿಸುತ್ತದೆ. ಹೀಗಾಗಿಯೇ ಇರಬೇಕು ನಿರ್ದೇಶಕರು ಚಿತ್ರಕ್ಕೆ ಈ ಹೆಸರಿಟ್ಟಿದ್ದಾರೆ ಎನಿಸುತ್ತದೆ. ಎಲ್ಲರ ಕೈಗೆ ಮೊಬೈಲ್ ಬಂದಿದ್ದು, ಈ ಹಿಂದಿನಂತೆ ಮೂರು ಗಂಟೆ ಸಿನಿಮಾ ವೀಕ್ಷಿಸುತ್ತಿದ್ದ ಸಾಮರ್ಥ್ಯ ಎಲ್ಲರೂ ಕಳೆದುಕೊಂಡಿದ್ದಾರೆ ಎನ್ನಿಸುತ್ತದೆ. ಇದೇ ವೇಳೆ ಮಲೆಯಾಳಂನಲ್ಲಿನ ಈಚಿನ ಸಿನಿಮಾ ಪ್ರಯೋಗಗಳು ಹೆಚ್ಚು ಜನರನ್ನು ಆಕರ್ಷಿಸುತ್ತಿವೆ. ಇದೇ ಹಾದಿಯಲ್ಲಿನ ಚಿತ್ರ ಇದು ಸಹ ಆಗಿರುವುದರಿಂದ ಯಶಸ್ವಿಯಾಗುವ ಭರವಸೆ ಇದೆ ಎಂದರು. ಗೋಷ್ಠಿಯಲ್ಲಿ ನಟ ಚಂದನ್‌ಶೆಟ್ಟಿ, ನಟಿ ಅರ್ಚನಾ ಕೊಟ್ಟಿಗೆ, ನಿರ್ಮಾಪಕ ಗೋವಿಂದರಾಜು ಇದ್ದರು.

## ಹುಟ್ಟುಹಬ್ಬದ ಶುಭಾಶಯ...



ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ ಸುಬ್ಬಣ್ಣ ಅವರನ್ನು ಕಾಂಗ್ರೆಸ್ ಮುಖಂಡ ರಮೇಶ್ ರಾಮಪ್ಪ, ಕನಕದಾಸ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ರವಿಚಂದ್ರ, ಕುಮಾರ್ ನಾಯಕ್, ಪವನ್ ಸಿದ್ದರಾಮ, ದಾಸ, ರವಿ ಹುಟ್ಟುಹಬ್ಬದ ಶುಭಾಶಯ ಕೋರಿದರು.

# ಜೈಲಿಗೆ ವೀಕ್ಷಕರ ಹುದ್ದೆಗೆ 550 ಮಾಜಿ ಸೈನಿಕರ ತಾತ್ಕಾಲಿಕ ನೇಮಕ

ಮೈಸೂರು, ಏ.23(ಎಸ್‌ಪಿಎನ್)– ರಾಜ್ಯದ ವಿವಿಧ ಜಿಲ್ಲೆಗಳ ಕಾರಾಗೃಹಗಳಲ್ಲಿ ಖಾಲಿ ಇರುವ ವೀಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ತಾತ್ಕಾಲಿಕವಾಗಿ 550 ಮಾಜಿ ಸೈನಿಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವಂತೆ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ ಪೊಲೀಸ್ ಮಹಾ ನಿರ್ದೇಶಕ ಅಲೋಕ್‌ಕುಮಾರ್ ಆದೇಶಿಸಿದ್ದಾರೆ.

ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಗೆ ಅವಶ್ಯಕವಿರುವ 550 ಮಾಜಿ ಸೈನಿಕರ ಸೇವೆಯನ್ನು ಕರ್ನಾಟಕ ಮಾಜಿ ಸೈನಿಕರ ಕಲ್ಯಾಣ ಸಮಾಜದಿಂದ ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ–1999ರ ಕಲಂ ಅಡಿಯಲ್ಲಿ ವಿನಾಯಿತಿ ನೀಡಿ, ರಾಜ್ಯ ಸರ್ಕಾರವು ಅಧಿಸೂಚನೆ ಹೊರಡಿಸಿದೆ. ಸರ್ಕಾರದ ನಿರ್ದೇಶನದ ಅನುಸಾರ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯು ವಿವಿಧ ಜಿಲ್ಲಾ ಕಾರಾಗೃಹಗಳಿಗೆ ಒಟ್ಟು 550 ಮಾಜಿ ಸೈನಿಕರು, ಜಿಎಸ್‌ಟಿ ಒಳಗೊಂಡಂತೆ ಒಟ್ಟು 1,87,56,100 ರೂ.ಗಳನ್ನು ಷರತ್ತುಗಳೊಂದಿಗೆ 11 ತಿಂಗಳೊಳಗೆ ಗುತ್ತಿಗೆ ಆಧಾರದ ಮೇಲೆ ನಿಯೋಜಿಸುವಂತೆ ಸೂಚಿಸಿದ್ದಾರೆ.

**550 ಮಾಜಿ ಸೈನಿಕರ ನೇಮಕ:** ಮೈಸೂರು ಕೇಂದ್ರ ಕಾರಾಗೃಹಕ್ಕೆ 45, ಹಾಸನ 10, ಮಡಿಕೇರಿ 10, ಮಂಡ್ಯ 10 ಸೇರಿದಂತೆ ಇತರೆ ಜಿಲ್ಲೆಗಳು ಸೇರಿದಂತೆ ಒಟ್ಟು 550 ಹುದ್ದೆಗಳ ನೇಮಕಾತಿಗೆ ಆದೇಶಿಸಿದ್ದಾರೆ.

### ಷರತ್ತುಗಳು

45 ವರ್ಷಗಳಿಗಿಂತಲೂ ವಯೋಮಿತಿ ಕಡಿಮೆ ಇರಬೇಕು. ದೈಹಿಕ ಸಾಮರ್ಥ್ಯ ಪರೀಕ್ಷೆ 3 ಕಿಮೀ ಅಂತರವನ್ನು 20 ನಿಮಿಷಗಳೊಳಗಾಗಿ ಪೂರ್ಣಗೊಳಿಸಬೇಕು. ಶೇಫ್ ಒನ್ ದೇಹದಾರ್ಢ್ಯತೆ ಹೊಂದಿರಬೇಕು. ಯಾವುದೇ ನ್ಯಾಯಿಕ (ಕ್ರಿಮಿನಲ್) ಪ್ರಕರಣಗಳು ಇರಬಾರದು.

# ಅಲ್ಪಸಂಖ್ಯಾತರಿಗೆ ನೀಡುವ ಸೌಲಭ್ಯಗಳ ಅರ್ಹರಿಗೆ ತಲುಪಿಸಿ

**● ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ ● ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿರಬೇಕು**




**ಮೈಸೂರಿನ ಜಿ.ಪಂ. ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.**

ಮೈಸೂರು,ಏ.23(ಎಂಟಿವೈ)– ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮ ದಡಿ ಅಲ್ಪಸಂಖ್ಯಾತರಿಗೆ ನೀಡುವ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಪಾರದರ್ಶಕವಾಗಿ ತಲುಪಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಸೂಚಿಸಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಪ್ರಧಾನಮಂತ್ರಿಗಳ 15 ಅಂಶಗಳ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ವಿವಿಧ ಇಲಾಖೆಗಳಿಂದ ಸಿಗುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಬೇಕು. ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿರಬೇಕು. ಸೌಲಭ್ಯ ನೀಡುವಲ್ಲಿ ಇರುವ ಮಾನದಂಡವನ್ನು ಕಡ್ಡಾಯವಾಗಿ ಅನುಸರಿಸಬೇಕು ಎಂದರು.

ಆಶ್ರಯ ಯೋಜನೆಯಡಿ ಗ್ರಾ.ಪಂ. ಮಟ್ಟದಲ್ಲಿ ನಿವೇಶನ ರಹಿತರಿಗೆ ನಿವೇಶನ ನೀಡಲಾಗುವುದು. ಪಟ್ಟಣ ಪ್ರದೇಶದಲ್ಲಿ ಮನೆ ನಿರ್ಮಾಣ ಮಾಡಿ ಮನೆಗಳ ಹಂಚಿಕೆ ಮಾಡಲಾಗುವುದು. ನರಸಿಂಹ ರಾಜ ಕ್ಷೇತ್ರದಲ್ಲಿ ಮನೆಗಳ ನಿರ್ಮಾಣಕ್ಕೆ ಡಿಪಿಆರ್ ತಯಾರಿಸಿ ಸರ್ಕಾರಕ್ಕೆ ಕಳುಹಿಸಲಾಗಿದೆ. ಪಿಎಂ ಸ್ವ–ನಿಧಿ ಯೋಜನೆಯಡಿ ಮೈಸೂರು ಮಹಾನಗರ ಪಾಲಿಕೆಯಿಂದ ಸೌಲಭ್ಯ ಪಡೆಯಲು ಬೀದಿಬದಿ ವ್ಯಾಪಾರಿಗಳು 30 ಸಾವಿರ ಅರ್ಜಿ ಸಲ್ಲಿಕೆಯಾಗಿದ್ದು, 22 ಸಾವಿರ ಜನರು ಸೌಲಭ್ಯ ಪಡೆದಿದ್ದಾರೆ ಎಂದು ತಿಳಿಸಿದರು.

ಸಮಿತಿಯ ಸದಸ್ಯ ಸುರೇಶ್ ಕುಮಾರ್ ಜೈನ್ ಮಾತನಾಡಿ, ಸಯ್ಯಾಜಿರಾವ್ ರಸ್ತೆಯ ಬನುಮಯ್ಯ ಕಾಲೇಜಿನ ಪಕ್ಕದಲ್ಲಿರುವ ಶ್ರೀ ಶಾಂತಿನಾಥ ಜೈನ ಬಸದಿಯ ಜಾಗದ ಗಡಿಯನ್ನು ಗುರುತಿಸಿ ಕೊಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಸಮಿತಿಯ ಇನ್ನಿತರ ಸದಸ್ಯರು ಮಾತನಾಡಿ, ಮೈಸೂರು ಜಿಲ್ಲೆಯನ್ನು ಮಾದಕ ವಸ್ತು ಮುಕ್ತ ಮಾಡಬೇಕು. ಮುಸ್ಲಿಂ ಸಮುದಾಯದಲ್ಲಿ ಹೆಚ್ಚಿನ ಬಾಲಕಾರ್ಮಿಕರು ಇದ್ದು, ಪತ್ತೆ ಹಚ್ಚಿ ಸೂಕ್ತ ಕ್ರಮ ಕೈಗೊಳ್ಳಬೇಕು. ಮುದ್ರಾ ಯೋಜನೆಯಡಿ ಸಾಲ ಸೌಲಭ್ಯ ನೀಡಬೇಕು. ಸಾಲ ನೀಡುವಲ್ಲಿ ಸಿಬಿಲ್ ಇಲ್ಲ ಎಂದು ರಿಜೆಕ್ಟ್ ಮಾಡುತ್ತಾರೆ. ಸಾಲ ನೀಡುವಲ್ಲಿ ಸ್ಥಳೀಕರಣ ಮಾಡಬೇಕು. ಹಳ್ಳದ ಕೇರಿಗೆ ಮಹಾವೀರ ನಗರ ಎಂದು ಹೆಸರು ಇದ್ದು ಇಲ್ಲಿ ನಾಮಫಲಕ ಅಳವಡಿಸಬೇಕು. ಅಲ್ಪ ಸಂಖ್ಯಾತ ಸಮುದಾಯದ ನಿರುದ್ಯೋಗಿ ಯುವಕ–ಯುವತಿಯರಿಗೆ ಕೌಶಲ್ಯ ತರಬೇತಿ ನೀಡಬೇಕು. ಗ್ರಾಮೀಣ ಭಾಗದ ಜನರಿಗೆ ಸೌಲಭ್ಯಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಆದ್ದರಿಂದ ವಿವಿಧ ಇಲಾಖೆಗಳಿಂದ ಅಲ್ಪಸಂಖ್ಯಾತ ಸಮುದಾಯದವರಿಗೆ ಇರುವ ಸೌಲಭ್ಯಗಳ ಕುರಿತು ಹೆಚ್ಚಿನ ಪ್ರಚಾರ ನೀಡಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಸಮಿತಿಯ ಸದಸ್ಯರಾದ ಸುರೇಶ್‌ಕುಮಾರ್ ಜೈನ್, ಸುಭಾನುದ್ದೀನ್, ಫಾಜಿಲ್, ನಿಪ್ತಿನ್ ಅಲ್ಪಸಂಖ್ಯಾತರ ಇಲಾಖೆ ಜಿಲ್ಲಾ ಅಧಿಕಾರಿ ಕೆ. ಶಿಲ್ಪಾ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.



## ರೈಲ್ವೆ ಬ್ರಿಡ್ಜ್ ಪರಿಶೀಲನೆ...

**ಮೈಸೂರಿನ ಕೆ.ಜಿ.ಕೊಪ್ಪಲಿನ ರೈಲ್ವೆ ಅಂಡರ್ ಬ್ರಿಡ್ಜ್ ಸ್ಥಳಕ್ಕೆ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಭೇಟಿ ನೀಡಿ, ಪರಿಶೀಲಿಸಿದರು. ಈ ವೇಳೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಉಪಮೇಯರ್ ವಿ.ಶೈಲೇಂದ್ರ, ಮಾಜಿ ಪಾಲಿಕೆ ಸದಸ್ಯ ಚೆನ್ನಪ್ಪ ಬಾಲು, ಕನ್ನೇಗೌಡಕೊಪ್ಪಲಿನ ಪ್ರಮುಖ ಮುಖಂಡರು ಜೊತೆಯಲ್ಲಿದ್ದರು. ಈ ವೇಳೆ ರೈಲ್ವೆ ಬ್ರಿಡ್ಜ್ ಅನ್ನು ಜನಸಂಖ್ಯೆಯ ಆಧಾರದ ಮೇಲೆ ಅಗಲೀಕರಣ ಮಾಡಲು ರೈಲ್ವೆ ಅಧಿಕಾರಿಗಳಾದ ಡಿಆರ್‌ಎಂ ಹಾಗೂ ಇತರ ಅಧಿಕಾರಿಗಳಿಗೆ ಡಿಪಿಆರ್ ತಯಾರಿಸಿ ಕೂಡಲೇ ನೀಡಬೇಕು. ಕಾಮಗಾರಿಯನ್ನು ಶೀಘ್ರವಾಗಿ ಮುಗಿಸಬೇಕೆಂದು ಸೋಮಣ್ಣ ಅಧಿಕಾರಿಗಳಿಗೆ ತಾಕೀತು ಮಾಡಿದರು.**

## ಪಾರ್ವತಿ ನಿಧನ



**ಮೈಸೂರು:** ಮೈಸೂರು ಅಗ್ರಹಾರ ಹುಲ್ಲಿನ ಬೀದಿಯ ನಿವಾಸಿ ಆದಿಶೇಷ ರಾವ್ ಅವರ ಧರ್ಮ ಪತ್ನಿ ಶ್ರೀಮತಿ ಪಾರ್ವತಿ(63) ಅವರು ಬುಧವಾರ ರಾತ್ರಿ ನಿಧನರಾದರು. ಮೃತರು ಪತಿ ಆದಿಶೇಷ ರಾವ್, ಪುತ್ರ ಕಿರಣ್, ಪುತ್ರಿ ಆಶಾ, ಅಳಿಯ, ಮೊಮ್ಮಗ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು (ಗುರುವಾರ) ಮಧ್ಯಾಹ್ನ 3 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**24.4.2026 ಶುಕ್ರವಾರ, ಮಳೆ ನಕ್ಷತ್ರ: ಅಶ್ವಿನಿ 14.04.2026 ರಿಂದ 26.04.2026**
**ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,**
**ತಿಥಿ: ಅಷ್ಟಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ**

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಕೊಲೆಸ್ಟ್ರಾಲ್, ಬೊಜ್ಜು ನಿವಾರಣಾ ಚಿಕಿತ್ಸಾ, ಕುತ್ತಿಗೆ ನೋವು ಮತ್ತು ಭುಜದ ನೋವು, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್** : ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 102ನೇ ವರ್ಷದ ಮೈಸೂರು ಕರಗ ಮಹೋತ್ಸವ, ಬೆಳಗ್ಗೆ 7ಕ್ಕೆ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಪ್ರಮುಖ ಬಡಾವಣೆಗಳಲ್ಲಿ ಮೆರವಣಿಗೆ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ಇಟ್ಟಿಗೆಗೂಡು.

■ **ನಯನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ:** ಸಾರ್ವಭೌಮ ಡಾ.ರಾಜಕುಮಾರ್ ಅವರ ಹುಟ್ಟುಹಬ್ಬದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ದಟ್ಟಗಳ್ಳಿ, ಬೆಳಗ್ಗೆ 9ರಿಂದ.

■ **ಕಾವೇರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ** : ಮಕ್ಕಳಿಗಾಗಿ ಸ್ವರ್ಣಪ್ರಾಶನ ಕಾರ್ಯಕ್ರಮ, ಸ್ಥಳ: ಆಸ್ಪತ್ರೆ ಆವರಣ, ಕೆಬಿಎಲ್ ಲೇಔಟ್, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ** : ಮೂತ್ರಜನಕಾಂಗದ ಕಲ್ಲುಗಳ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘ** : 21ನೇ ಮಹಾ ಸಮ್ಮೇಳನ ಮತ್ತು ರಜತ ಮಹೋತ್ಸವ, ರಾಜ್ಯಶಾಸ್ತ್ರದ ಪರಿಶೀಲನೆ: ರಾಜ್ಯ, ಸಮಾಜ, ಮಾರುಕಟ್ಟೆ ಮತ್ತು ವ್ಯಕ್ತಿ, ಅಧ್ಯಕ್ಷತೆ : ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಉಮಾಪತಿ, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಕಾವೇರಿ ಸಭಾಂಗಣ, ಬೆಳಗ್ಗೆ 10ಕ್ಕೆ

■ **ಜಿಲ್ಲಾಡಳಿತ, ಮೈಸೂರು ನಗರಪಾಲಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ**: ಡಾ.ರಾಜ್‌ಕುಮಾರ್ ದಿನಾಚರಣೆ, ಗೀತಗಾಯನ, ಸ್ಥಳ: ಡಾ. ರಾಜ್‌ಕುಮಾರ್ ಉದ್ಯಾನವನ, ಬೆಳಗ್ಗೆ 10ಕ್ಕೆ.

■ **ಮೈಸೂರು ಚೆಸ್ ಸೆಂಟರ್** : ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಅಂಡರ್–13 ಚೆಸ್ ಚಾಂಪಿಯನ್‌ಶಿಪ್, ಸ್ಥಳ: ದಾಸಪ್ರಕಾಶ್ ಪ್ಯಾರಡೈಸ್, ಯಾದವಗಿರಿ, ಬೆಳಗ್ಗೆ 10 ರಿಂದ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು**: ಸಾಂಸ್ಕೃತಿಕ, ಕ್ರೀಡಾ ವೇದಿಕೆ, ಎನ್‌ಎಸ್‌ಎಸ್ ಘಟಕದ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು: ಗಾಯಕ ಮೈಸೂರು ಮಹಾಲಿಂಗು, ಅಧ್ಯಕ್ಷತೆ : ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಶಾರದಾ, ಸ್ಥಳ: ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು** : ಸಮರ್ಪಣಾ ಸಮಾರಂಭ, ಮುಖ್ಯ ಅತಿಥಿಗಳು : ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಅಧ್ಯಕ್ಷತೆ: ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಉಪಸ್ಥಿತರು: ಜಾನೆಟ್ ಮಥಯಾಸ್, ಸ್ಥಳ: ಶ್ರೀರಾಜೇಂದ್ರ ಶತಮಾನೋತ್ಸವ ಸಮಾರಂಭ, ಬೆಳಗ್ಗೆ 11ಕ್ಕೆ.

■ **ಕನ್ನಡ ಜಾನಪದ ಪರಿಷತ್**: ಸಂಸ್ಥಾಪನಾ ದಿನಾಚರಣೆ, ಸಾನ್ನಿಧ್ಯ : ಕಾಗಿನೆಲೆ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಅಧ್ಯಕ್ಷತೆ : ಕಾರ್ಯದರ್ಶಿ ಎಂ. ಪುಟ್ಟಬಸವೇಗೌಡ, ಉದ್ಘಾಟನೆ : ರಾಜ್ಯ ಭೋವಿ ನಿಗಮದ ಅಧ್ಯಕ್ಷ ಎಂ. ರಾಮಪ್ಪ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಕೆ.ಕೆ. ವಿಶಾಲಾಕ್ಷಿ, ಕಜಪ ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ವಿಭಾಗೀಯ ಸಂಚಾಲಕ ಡಾ. ಕಾವೇರಿ ಪ್ರಕಾಶ್, ಬೈಪಾಸ್ ಮಂಜುನಾಥ್, ಪನ್ನಗ ವಿಜಯಕುಮಾರ್, ಗೀತಾ ಶ್ರೀಧರ್ ಮತ್ತು ತಂಡದವರಿಂದ ಗೀತಗಾಯನ, ಸ್ಥಳ: ಶ್ರೀಕಾಗಿನೆಲೆ ಶಿಕ್ಷಣ ಮಹಾವಿದ್ಯಾಲಯ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮಧ್ಯಾಹ್ನ 2ಕ್ಕೆ.

■ **ಕೆ.ಆರ್.ಆಸ್ಪತ್ರೆ:** ಹಿಮೋಫಿಲಿಯಾ ರೋಗಿಗಳ ಜಾಗೃತಿ ಕಾರ್ಯಕ್ರಮ, ವಿಶ್ವ ಹಿಮೋಫಿಲಿಯಾ ದಿನಾಚರಣೆ, ಅಶೋಕ್ ವರ್ಮ ಸಮ್ಮಾನ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ, ಉದ್ಘಾಟನೆ: ಕೆ.ಆರ್.ಆಸ್ಪತ್ರೆಯ ಡೀನ್, ಎಂಎಂಸಿ ಮತ್ತು ಆರ್‌ಐ ನಿರ್ದೇಶಕಿ ಡಾ.ದಾಕ್ಷಾಯಿಣಿ, ಉಪಸ್ಥಿತರು: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಡಾ.ಪ್ರಕಾಶ್ ಪುರಾಣಿಕ್, ಮೈಸೂರಿನ ಹಿಮೋಫಿಲಿಯಾ ಸೊಸೈಟಿ ಅಧ್ಯಕ್ಷ ಡಾ.ಎಸ್‌ಕೆ ಮಿತ್ತಲ್, ಆರೋಗ್ಯ ಇಲಾಖೆಯ ಉಪ ನಿರ್ದೇಶಕರಾದ ಡಾ.ಬಿ.ಮಲ್ಲಿಕಾ, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಶೋಭಾ, ಪ್ಯಾಥಾಲಜಿ ವಿಭಾಗದ ಮುಖ್ಯಸ್ಥರಾದ ಡಾ.ಶರತ್‌ಕುಮಾರ್, ಸ್ಥಳ: ಕೆ.ಆರ್.ಆಸ್ಪತ್ರೆಯ ಪ್ಯಾಥಾಲಜಿ ಉಪನ್ಯಾಸ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ವಿವಿಧ ಆರ್ಟ್ ಗ್ರೂಪ್**: ಚಿತ್ರಕಲಾ ಪ್ರದರ್ಶನ, ಉದ್ಘಾಟನೆ : ಕಲಾವಿದ ಡಾ. ಎಂ.ಎಸ್. ಮೂರ್ತಿ, ಮುಖ್ಯ ಅಭ್ಯಾಗತರು : ಕಲಾವಿದ ಎಸ್.ಎಂ. ಜಂಬುಕೇಶ್ವರ, ಶ್ರೀ ಕಲಾನಿಕೇತನ ಕಲಾಶಾಲೆ ಪ್ರಿನ್ಸಿಪಾಲ್ ಕೆ.ಸಿ. ಮಹದೇವಶೆಟ್ಟಿ, ಡಾ. ವಿಠ್ಠಲ್ ರೆಡ್ಡಿ ಎಫ್. ಚುಳಕಿ, ಕೆ.ಎಸ್. ಪರಮೇಶ್ವರ, ಡಾ. ಶಂಕರ ಕುಂದಗೋಳ, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರ, ಸಂಜೆ 4.30ಕ್ಕೆ.

■ **ನಯನಜ ಕ್ಷತ್ರಿಯ ಕನ್ನಡಿಗರ ಟ್ರಸ್ಟ್** : ಅರಮನೆ ಆಸ್ಥಾನ ವಿದ್ವಾನ್, ತಾಳವಾದ್ಯ ಚತುರ ಮತ್ತು ಪ್ರವೀಣ, ಮಯೂರ ಪ್ರಶಸ್ತಿ ಪುರಸ್ಕೃತ ದಿವಂಗತ ಎಂ.ಎನ್. ನರಸಿಂಹಯ್ಯ ಅವರ ನೆನಪಿನ ಸಂಗೀತ ಸಂಭ್ರಮ, ಮುಖ್ಯ ಅತಿಥಿಗಳು: ಬಿ.ವಿ. ಇಳೈ ಆಳ್ವಾರ್ ಸ್ವಾಮೀಜಿ, ಪ್ರೊ ಭಾಷ್ಯಂ ಸ್ವಾಮೀಜಿ, ಶೆಲ್ವಪಿಳ್ಳೈ ಅಯ್ಯಂಗಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಸುದರ್ಶನ್, ವಾಸ್ತು ತಜ್ಞ ಬಿ.ಎಸ್. ನಾಗೇಂದ್ರ, ಸಮಾಜ ಸೇವಕ ರಘುರಾಂ ವಾಜಪೇಯಿ, ಬೆಳಗ್ಗೆ 9.15ರಿಂದ ವಿದ್ವಾನ್ ಆರ್. ಶ್ರೀಧರ್ ಮತ್ತು ವಿದ್ವಾನ್ ಗೌತಮ್ ಅವರಿಂದ ನಾದಸ್ವರ, ವಿದ್ವಾನ್ ರತ್ನಣ್ಣ–ಡೋಲು, ವಿದ್ವಾನ್ ತೋಪಯ್ಯ–ಡೋಲು, ವಿದ್ವಾನ್ ಜಗದೀಶ್–ತಾಳ; ಬೆಳಗ್ಗೆ 10 ರಿಂದ ವಿದ್ವಾನ್ ವಿ. ಜಗದೀಶ್ ಮತ್ತು ವಿದ್ವಾನ್ ಅಂಕನಹಳ್ಳಿ ಕುಮಾರ ಅವರಿಂದ ನಾದಸ್ವರ, ವಿದ್ವಾನ್ ಎಸ್. ಸಂಪತ್ತು–ಡೋಲು, ವಿದ್ವಾನ್ ನಿಖಿಲ್‌ಕುಮಾರ್–ಡೋಲು, ವಿದ್ವಾನ್ ರಘು–ತಾಳ; ಬೆಳಗ್ಗೆ 10.45 ರಿಂದ ಪಂಚ ಪಿಟೀಲು ವಾದನ, ವಿದ್ವಾನ್ ಹೆಚ್.ಎಸ್. ತಾಂಡವಮೂರ್ತಿ ಮತ್ತು ಶಿಷ್ಯರಿಂದ ಪಿಟೀಲು, ವಿದ್ವಾನ್ ಉದಯ್‌ಕುಮಾರ್–ಮೃದಂಗ, ವಿದ್ವಾನ್ ಅಪ್ಪು–ತಬಲ; ಬೆಳಗ್ಗೆ 11.30ರಿಂದ ಕ್ಲಾರಿಯೋನೆಟ್ ವಾದನ, ವಿದ್ವಾನ್ ಮೋಹನ್ ಮತ್ತು ತಂಡದವರಿಂದ ಕ್ಲಾರಿಯೋನೆಟ್, ವಿದ್ವಾನ್ ಎಂ.ನಾರಾಯಣ–ಡೋಲು; ಮಧ್ಯಾಹ್ನ 12.15 ರಿಂದ ಕೊಳಲು ವಾದನ, ವಿದ್ವಾನ್ ಪದ್ಮನಾಭ್ ಮತ್ತು ತಂಡದವರಿಂದ ಕೊಳಲು, ವಿದ್ವಾನ್ ಕುಮಾರ–ಮೃದಂಗ, ವಿದ್ವಾನ್ ಸಿದ್ದರಾಮು–ತಬಲ; ಮಧ್ಯಾಹ್ನ 2ರಿಂದ ಸ್ಯಾಕ್ಸೋಫೋನ್ ವಾದನ, ವಿದ್ವಾನ್ ಹರಿದಾಸ್ ಡೋಗ್ರ–ಸ್ಯಾಕ್ಸೋಫೋನ್, ವಿದ್ವಾನ್ ಶಾಂತಕುಮಾರ್–ಪಿಟೀಲು, ವಿದುಷಿ ಎಂ.ಎಸ್.ರಮ್ಯಶ್ರೀ–ಸ್ಯಾಕ್ಸೋಫೋನ್, ವಿದ್ವಾನ್ ಎಂ.ಎಸ್. ಸಾಗರ್–ಸ್ಯಾಕ್ಸೋಫೋನ್, ವಿದ್ವಾನ್ ಎಂ.ಎನ್.ಶ್ರೀನಿವಾಸ್–ಡೋಲು, ವಿದ್ವಾನ್ ಎಂ.ಆರ್. ಮೋಹನ್–ಮೋರ್ಚಿಂಗ್, ವಿದ್ವಾನ್ ವಿಕ್ರಮ್ ಭಾರದ್ವಾಜ್–ಮೃದಂಗ, ವಿದ್ವಾನ್ ಜಗದೀಶ್–ತಾಳ; ಮಧ್ಯಾಹ್ನ 2.45 ರಿಂದ ನಾದಸ್ವರ ವಾದನ, ವಿದ್ವಾನ್ ವಿ. ಕೃಷ್ಣಮೂರ್ತಿ–ನಾದಸ್ವರ, ವಿದ್ವಾನ್ ಸತ್ಯನಾರಾಯಣ–ನಾದಸ್ವರ, ವಿದ್ವಾನ್ ಎಂ.ಎನ್. ನವೀನ–ಡೋಲು, ವಿದ್ವಾನ್ ಎಸ್. ಮಂಜು–ಡೋಲು, ವಿದ್ವಾನ್ ಬಾಲು–ತಾಳ; ಮಧ್ಯಾಹ್ನ 3.30 ರಿಂದ ವಿದ್ವಾನ್ ಆರ್. ರಂಗಸ್ವಾಮಿ–ನಾದಸ್ವರ, ವಿದ್ವಾನ್ ಎಂ.ಆರ್. ಕೃಷ್ಣ–ನಾದಸ್ವರ, ವಿದ್ವಾನ್ ಎಂ.ಎಸ್. ಆನಂದ್–ನಾದಸ್ವರ, ವಿದ್ವಾನ್ ಎಸ್. ಪುಟ್ಟರಾಜು–ಡೋಲು, ವಿದ್ವಾನ್ ಕೆ. ಅಜಯ್–ಡೋಲು, ವಿದ್ವಾನ್ ಆರ್. ಚಂದನ್–ಡೋಲು, ವಿದ್ವಾನ್ ರಘು–ತಾಳ, ಸ್ಥಳ: ನಯನಜ ಕ್ಷತ್ರಿಯ ಕನ್ನಡಿಗರ ಟ್ರಸ್ಟ್, ಶ್ರೀರಾಮ ಮಂದಿರ, ಕುಂಬಾರಗೇರಿ.

■ **ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ** : ಅಷ್ಟಮ ವರ್ಷದ ವಾರ್ಷಿಕೋತ್ಸವ, ಶ್ರೀ ಉತ್ತರಾಧಿ ಮಠಾಧೀಶರಾದ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಸಾನ್ನಿಧ್ಯದಲ್ಲಿ ವಿಶೇಷ ಕಾರ್ಯಕ್ರಮಗಳು, ಪಂಡಿತ್ ಬಾದರಾಯಣಾಚಾರ್ಯ ಅವರಿಂದ ಗಾಯತ್ರಿ ಚಿಂತನ ಪ್ರವಚನ, ಸ್ಥಳ: ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ, ಶ್ರೀ ಉತ್ತರಾದಿ ಮಠ, ಶ್ರೀರಾಂಪುರ, ಸಂಜೆ 4 ರಿಂದ.

■ **ನಕ್ಷತ್ರ ಅಕಾಡೆಮಿ ಆಫ್ ಆರ್ಟ್ಸ್** : ಮೋಹನ ಮಾಧುರ್ಯ ಅರ್ಪಿಸುವ ಡಾ.ರಾಜ್‌ಕುಮಾರ್ ಹಾಗೂ ಎಸ್.ಜಾನಕಮ್ಮನವರ ಸಂಗೀತ ಸಂಜೆ ಕಾರ್ಯಕ್ರಮ, ಸ್ಥಳ: ಶಾರದಾವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 4ರಿಂದ.

■ **ಮೈಸೂರು ವಿವಿ ಗೌತಮ ವಿದ್ಯಾರ್ಥಿನಿಲಯ:** ಡಾ.ಅಂಬೇಡ್ಕರ್ ಜಯಂತಿ, ಉದ್ಘಾಟನೆ : ಇನ್‌ಸ್ಪೆಕ್ಟರ್ ಜಿ.ಪುರುಷೋತ್ತಮ್, ಅಧ್ಯಕ್ಷತೆ: ವಿದ್ಯಾರ್ಥಿನಿಲಯ ನಿರ್ದೇಶಕ ಪ್ರೊ.ಸಿ.ಗುರುಸಿದ್ದಯ್ಯ, ಮುಖ್ಯ ಅತಿಥಿಗಳು: ಪ್ರಿನ್ಸಿಪಾಲ್ ಪ್ರೊ.ಷಣ್ಮುಗಂ, ಸ್ಥಳ: ಗೌತಮ್ ಹಾಸ್ಟೆಲ್ ಆವರಣ, ಮಾನಸಗಂಗೋತ್ರಿ, ಸಂಜೆ 5ಕ್ಕೆ

■ **ರಂಗನಂದ ಕಲಾ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ** :ಡಾ. ರಾಜ್‌ಕುಮಾರ್ ಹುಟ್ಟುಬ್ಬದ ಅಂಗವಾಗಿ ಕುಮಾರರಾಮ ಐತಿಹಾಸಿಕ ನಾಟಕ ಹಾಗೂ ಡಾ. ರಾಜ್‌ಕುಮಾರ್ ಚಿತ್ರಗಳ ಅಪರೂಪದ ದೃಶ್ಯಗಳ ಪ್ರದರ್ಶನ, ಉದ್ಘಾಟನೆ : ಬಿಜೆಪಿ ಮುಖಂಡ ಆರ್. ರಘು ಕೌಟಿಲ್ಯ, ಅತಿಥಿಗಳು : ಮಾಜಿ ಮೇಯರ್ ಶಿವಕುಮಾರ್, ಡಾ. ಎಂ.ಡಿ. ಸುದರ್ಶನ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಂತಾರಾಷ್ಟ್ರೀಯ ಅಥ್ಲೆಟ್ ಎಂ. ಯೋಗೇಂದ್ರ, ಪ್ರಿನ್ಸಿಪಾಲ್ ಎನ್. ಉದಯ್‌ಶಂಕರ್, ಸ್ಥಳ: ರಮಾಗೋವಿಂದ ರಂಗ ಮಂದಿರ, ಸಂಜೆ 5.30ಕ್ಕೆ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್** : ಬ್ರಹ್ಮ ರಥೋತ್ಸವ, ಗರುಡೋತ್ಸವ, ಸುದರ್ಶನ ಹೋಮ, ರಥೋತ್ಸವ, ಪೂಜಾ ಮಹೋತ್ಸವಗಳು, ಬೆಳಗ್ಗೆ 9ಕ್ಕೆ ಉತ್ಸವ, ಧ್ವಜಾರೋಹಣ, ಕುಂಭಾರಾಧನಪೂರ್ವಕ ಯಾಗಶಾಲಾ ಪ್ರವೇಶ, ಸಂಜೆ 6ಕ್ಕೆ ಚತುಸ್ಥಾನಾರ್ಚನಪೂರ್ವಕ ವಿಷ್ಣು ಸಹಸ್ರನಾಮ ಹೋಮ, ಚಂದ್ರಮಂಡಲೋತ್ಸವ, ಸ್ಥಳ: ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್, ಗೋಕುಲಂ 3ನೇ ಹಂತ.

■ **ಮೈಸೂರು ವಿಶ್ವವಿದ್ಯಾನಿಲಯ, ಪಠ್ಯೇತರ ಚಟುವಟಿಕೆಗಳ ಸಮಿತಿ** : ಡಾ. ಬಿ.ಆರ್. ಅಂಬೇಡ್ಕರ್ 135ನೇ ಜನ್ಮ ದಿನಾಚರಣೆ, ಕಾಲೇಜು ವಾರ್ಷಿಕೋತ್ಸವ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಕೆ. ತಿಮ್ಮಯ್ಯ, ಮುಖ್ಯ ಅತಿಥಿಗಳು: ಕವಿ ಮಲ್ಲುಂಡಿ ಮಹದೇವಸ್ವಾಮಿ, ಸ್ಥಳ: ಹೊಸ ಕಟ್ಟಡ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಸಂಜೆ 6ಕ್ಕೆ

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ. ಮೀನಾಕ್ಷಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಪಿ. ಸುರಭಿ ಹಾಗೂ ಸಿ. ವಿಶ್ವನಾಥ್, ವ್ಯಾಖ್ಯಾನ–ಡಾ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಮತ್ತು ಸಂಜೆ 5.30– ಚೂಟಿ ಚೂಟಿ ಚುಟುಕ್ ಗುಳುಂ ಗುಟಕ್ – ಶಿಶು ಗೀತೆಗಳ ಕಾರ್ಯಕ್ರಮ, 8.35 ರೂಪಕ ಕನ್ನಡದ ಮುತ್ತು, ರಚನೆ ಹಾಗೂ ನಿರ್ಮಾಣ–ಎಸ್. ಶ್ರೀಮಾನ್, 9.00 ನಮ್ಮ ಆರೋಗ್ಯ, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಾ. ಎಂ. ಮೈಸೂರು ಮಂಜುನಾಥ್ ಹಾಗೂ ಸುಮಂತ್ ಎಂ.–ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್. ಎಲ್. ಶಿವಶಂಕರಸ್ವಾಮಿ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯತ್ರಿ ವೆಂಕಟರಾಘವನ್ – ಹಾಡುಗಾರಿಕೆ, 4.00 ಮಹಿಳಾರಂಗ–ಸಖೀ ಸಾಹಿತ್ಯ, 4.30 ವೃತ್ತಿ ಮಾರ್ಗದರ್ಶನ ಭಾರತೀಯ ಸಶಸ್ತ್ರಪಡೆಗಳಲ್ಲಿ ಯುವಜನರಿಗೆ ಇರುವ ಅವಕಾಶಗಳು ಈ ಕುರಿತು ನಿವೃತ್ತ ಸೇನಾಧಿಕಾರಿ ಮೇಜರ್ ಅಶ್ವಥ್ ಕುಮಾರ್ ಅವರೊಂದಿಗಿನ ಸಂದರ್ಶನ. ಸಂದರ್ಶಕರು– ಬಿ. ಕೆ. ಸರಸ್ವತಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಫ್ಲೋರ್ ಮಿಲ್ಲಿಂಗ್ ಹಾಗೂ ಬೇಕಿಂಗ್ ತಾಂತ್ರಿಕತೆಗಳು ಈ ಕುರಿತು ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯದ ವಿಜ್ಞಾನಿ ಡಾ. ಕೆ. ಅಶ್ವಥ್ ಕುಮಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು –ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಸಂಧ್ಯಾರಾಗ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಿ. ಎಸ್. ವಿಜಯ ರಾಘವನ್ – ಹಾಡುಗಾರಿಕೆ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

# ಕದ್ದ ಮಾಲು ಮಾರಾಟ ಮಾಡಲೆತ್ನಿಸಿದ ಕಳ್ಳನ ಸೆರೆ

## 3 ಲಕ್ಷ ಮೌಲ್ಯದ ಚಿನ್ನಾಭರಣ ವಶ

ಮೈಸೂರು, ಏ.23(ಜಿಎ)–ಕದ್ದ ಮಾಲನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಕಳ್ಳನನ್ನು ಸಿಸಿಬಿ ಪೊಲೀಸರು ಬಂಧಿಸಿ 3 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಮೈಸೂರು ನಗರ ಅಪರಾಧ ವಿಭಾಗದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಾದ ಎಸ್.ರಾಘವೇಂದ್ರ, ಪ್ರಕಾಶ್ ರಾಥೋಡ್ ಸ್ವತ್ತು ಕಳವು, ಮನೆ ಕನ್ನ ಮತ್ತು ವಾಹನ ಕಳವು ಪ್ರಕರಣಗಳ ಪತ್ತೆಗೆ ಸಂಬಂಧಿಸಿದಂತೆ ನರಸಿಂಹರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಗಸ್ತು ತಿರುಗುತ್ತಿದ್ದಾಗ ಹಳೆಯ ಆಸಾಮಿ ಮೊಹಮ್ಮದ್ ಮುನ್ನಾನ ಸಹಚರನಾದ ಪ್ರಸಾದ್ ಅಲಿಯಾಸ್ ಪ್ರಸಾದಿ ಪೈಲೆಟ್ ಸರ್ಕಲ್‌ನಿಂದ ಅಶೋಕ ರಸ್ತೆಯಲ್ಲಿರುವ ಜ್ಯೂವೆಲರಿ ಅಂಗಡಿ ಕಡೆ ನಡೆದುಕೊಂಡು ಹೋಗುವುದನ್ನು ಗಮನಿಸಿದ್ದಾರೆ.

ಆತ ಯಾವುದೋ ಕದ್ದ ಒಡವೆಗಳನ್ನು ಮಾರಾಟ ಮಾಡಲು ಹೋಗುತ್ತಿರಬಹುದು ಎಂದು ಆತನನ್ನು ಹಿಂಬಾಲಿಸಿ ಹಿಡಿದು ವಿಚಾರಣೆಗೊಳಪಡಿಸಿದಾಗ ಮನೆ ಬೀಗ ಹೊಡೆದು ಕದ್ದಿರುವ ಒಡವೆಗಳನ್ನು ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿದ್ದಾನೆ.

ಈ ಬಗ್ಗೆ ತೀವ್ರ ವಿಚಾರಣೆ ಮಾಡಿದಾಗ 2025ರ ಅಕ್ಟೋಬರ್‌ನಲ್ಲಿ ಕೆ.ಆರ್.ನಗರ ತಾಲೂಕಿನ ಚುಂಚನಕಟ್ಟೆ ರಸ್ತೆಯ ಹೆಬ್ಬಾಳು ಗ್ರಾಮದ ಮನೆಯಲ್ಲಿ ರಾತ್ರಿ ಸಮಯದಲ್ಲಿ ತಾನು ಮತ್ತು ಮೊಹಮ್ಮದ್ ಮುನ್ನಾ ಮನೆ ಬೀಗ ಮುರಿದು ಕದ್ದ ಚಿನ್ನದಲ್ಲಿ ನನ್ನ ಪಾಲಿಗೆ ಬಂದಿದ್ದ ಕೆಲವು ಚಿನ್ನದ ಐಟಂ ಅನ್ನು ಈಗಾಗಲೇ ಮಾರಾಟ ಮಾಡಿದ್ದು, ಉಳಿದ ಚಿನ್ನ ಮಾರಾಟ ಮಾಡುವ ಉದ್ದೇಶದಿಂದ ಇಲ್ಲಿಗೆ ಬಂದಿರುವುದಾಗಿ ತಿಳಿಸಿ, ಸಹಚರನಾದ ಮುನ್ನಾ ಪಾಲಿಗೆ ಬಂದಿದ್ದ ಚಿನ್ನವನ್ನು ಆತ ತೆಗೆದುಕೊಂಡು ಹೋಗಿರುವುದಾಗಿ ಹೇಳಿಕೆ ನೀಡಿದ್ದಾನೆ. ಪೊಲೀಸರು ಆತನಿಂದ 3 ಲಕ್ಷ ರೂ ಮೌಲ್ಯದ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

# ಮೈಸೂರು ಕೇಂದ್ರ ಗ್ರಂಥಾಲಯದಲ್ಲಿ ವಿಶ್ವ ಪುಸ್ತಕ, ಕೃತಿ ಸ್ವಾಮ್ಯ ದಿನಾಚರಣೆ

## ಜ್ಞಾನಾರ್ಜನೆಗೆ ಗ್ರಂಥಾಲಯಗಳು ಅತ್ಯಂತ ಸೂಕ್ತ ತಾಣ: ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅಭಿಮತ

ಮೈಸೂರು,ಏ.23(ಎಂಕೆ)– ಮೈಸೂರು ನಜರ್‌ಬಾದ್‌ನ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯದಲ್ಲಿ ಬಾಲ್ಯ ಫೌಂಡೇಶನ್ ಸಹಯೋಗದೊಂದಿಗೆ 'ವಿಶ್ವ ಪುಸ್ತಕ' ಮತ್ತು 'ಕೃತಿ ಸ್ವಾಮ್ಯ ದಿನಾಚರಣೆ' ಹಾಗೂ 'ಅಂತರ ರಾಷ್ಟ್ರೀಯ ಮಹಿಳಾ ದಿನ' ಆಚರಿಸಲಾಯಿತು.



ಮೈಸೂರು ನಗರ ಕೇಂದ್ರ ಗ್ರಂಥಾಲಯದಲ್ಲಿ ಬಾಲ್ಯ ಫೌಂಡೇಶನ್ ಸಹಯೋಗದೊಂದಿಗೆ 'ವಿಶ್ವ ಪುಸ್ತಕ' ಮತ್ತು 'ಕೃತಿ ಸ್ವಾಮ್ಯ ದಿನಾಚರಣೆ' ಹಾಗೂ 'ಅಂತರ ರಾಷ್ಟ್ರೀಯ ಮಹಿಳಾ ದಿನ' ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ನೋಟ್ ಪುಸ್ತಕಗಳಲ್ಲಿ ಬಳಕೆಯಾಗದ ಹಾಳೆಗಳ ಮರು ಬಳಕೆ ಅಭಿಯಾನಕ್ಕೆ ಚಾಲನೆ ನೀಡಿದರು. ಹಾಗೆಯೇ ಗ್ರಂಥಾಲಯಗಳಲ್ಲಿ ಪರಾಮರ್ಶಿಸಿ ಸರ್ಕಾರಿ ಹುದ್ದೆಗಳನ್ನು ಪಡೆದವರು ಮತ್ತು ಗ್ರಂಥಾಲಯಗಳಲ್ಲಿ ಗೌರವ ಸಂಭಾವನೆ ಆಧಾರದ ಮೇಲೆ ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಸನ್ಮಾನಿಸಿದರು.

ಬಳಿಕ ಮಾತನಾಡಿದ ಅವರು, ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖಾಯಂ ಸಿಬ್ಬಂದಿ ಕೊರತೆಯ ನಡುವೆ ಗೌರವ ಸಂಭಾವನೆ ಪಡೆದು ಕೆಲಸ ಮಾಡುತ್ತಿರುವ ಸಿಬ್ಬಂದಿ ಪೀಪಲ್ಸ್ ಪಾರ್ಕ್‌ನಲ್ಲಿರುವ ಗ್ರಂಥಾಲಯ ಸೇರಿದಂತೆ ನಗರದಲ್ಲಿನ ಗ್ರಂಥಾಲಯಗಳನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಗ್ರಂಥಾಲಯಗಳಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೆ ಓದಿ, ವಿವಿಧ ಇಲಾಖೆಗಳಲ್ಲಿ ಕೆಲಸ ಪಡೆದು ತಮ್ಮ ಗುರಿ ಸಾಧಿಸಿರುವವರು ಇತರರಿಗೆ ಪ್ರೇರಣೆಯಾಗಿದ್ದಾರೆ. ಗ್ರಂಥಾಲಯಗಳಲ್ಲಿ ಕುಳಿತು ಓದುವುದರಿಂದ ಜ್ಞಾನಾರ್ಜನೆ ವೃದ್ಧಿಯಾಗಲಿದೆ. ಪರೀಕ್ಷಾ ಪ್ರತಿಸ್ಪರ್ಧಿಗಳು ಒಟ್ಟಿಗೆ ಅಧ್ಯಯನ ಮಾಡುವುದರಿಂದ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಲು ಸಹಕಾರಿಯಾಗಲಿದೆ ಎಂದು ಹೇಳಿದರು.

**ಸದುಪಯೋಗ ಪಡೆದುಕೊಳ್ಳಿ:** ಸಾರ್ವಜನಿಕ ಗ್ರಂಥಾಲಯ ಇಲಾಖೆ ಉಪನಿರ್ದೇಶಕ ಬಿ.ಮಂಜುನಾಥ್ ಮಾತನಾಡಿ, ವಿಲಿಯಂ ಷೇಕ್ಸ್‌ಪಿಯರ್ ಅವರ ಜನ್ಮದಿನವಾದ ಏ.23ರಂದು ವಿಶ್ವ ಪುಸ್ತಕ ದಿನ ಆಚರಿಸಲಾಗುತ್ತದೆ. ಖಾಯಂ ಸಿಬ್ಬಂದಿ ಕೊರತೆ ನಡುವೆಯೂ ವಿದ್ಯಾರ್ಥಿಗಳ ಓದಿಗೆ ತೊಂದರೆಯಾಗದಂತೆ ಗ್ರಂಥಾಲಯಗಳನ್ನು ನಿರ್ವಹಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

**ಉಚಿತ ಆರೋಗ್ಯ ತಪಾಸಣೆ:** ಇದಕ್ಕೂ ಗ್ರಂಥಾಲಯದಲ್ಲಿ ಓದುವ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣೆ ಶಿಬಿರ ನಡೆಸಲಾಯಿತು. ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಉಪ ಆಯುಕ್ತ ರಮೇಶ್ ನರಸಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಬಾಲ್ಯ ಫೌಂಡೇಶನ್‌ನ ಸ್ಥಾಪಕ ಕೆ.ಎಸ್. ಅನಿಲ್, ಸಹ ಸ್ಥಾಪಕಿ ಉಮಾ ಅನಿಲ್, ಪ್ರಾದೇಶಿಕ ಶಿಕ್ಷಣ ಸಂಸ್ಥೆ ಗ್ರಂಥಪಾಲಕ ಡಾ.ಎಸ್.ನಾಗರಾಜ್, ಸರ್ಕಾರಿ ವಿದ್ಯಾರ್ಥಿ ನಿಯರ ಪ್ರೌಢಶಾಲೆ ಉಪ ಪ್ರಾಂಶುಪಾಲ ಡಾ.ಬಿ.ಮಲ್ಲಿಕಾರ್ಜುನಸ್ವಾಮಿ, ಕನ್ನಡ ಉಪನ್ಯಾಸಕಿ ದಿವ್ಯಜ್ಯೋತಿ, ಜಿಲ್ಲಾ ಕೇಂದ್ರ ಗ್ರಂಥಾಲಯ ಉಪ ನಿರ್ದೇಶಕಿ ಸುಮ ಕೋಡಿಹಳ್ಳಿ, ನಗರ ಕೇಂದ್ರ ಗ್ರಂಥಾಲಯ ಅಧಿಕಾರಿ ಟಿ.ಪದ್ಮಶ್ರೀ, ಸಹಾಯಕ ಗ್ರಂಥಪಾಲಕಿ ಎಸ್.ಸೌಮ್ಯ, ಹೆಚ್.ವಿ.ರಮೇಶ್, ಎಂ. ಕುಸುಮ ಮತ್ತಿತರರು ಉಪಸ್ಥಿತರಿದ್ದರು.

> ಸರಿಯಾಗಿ ಗಮನವಿಟ್ಟು ಓದಿದರೆ, ಪರಿಶ್ರಮ ಪಟ್ಟರೆ ಯಶಸ್ಸು ಸಿಕ್ಕೇ ಸಿಗುತ್ತದೆ. ನಾನೂ ಕೂಡ ಗ್ರಂಥಾಲಯದಲ್ಲಿ ಓದಿಯೇ ಯುಪಿಎಸ್‌ಸಿ ಪರೀಕ್ಷೆ ಬರೆದದ್ದು. ಮುಖ್ಯವಾಗಿ ತಾಳ್ಮೆ ಇರಬೇಕು. ಒಂದೆರಡು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಿಗಲಿಲ್ಲವೆಂದು ಓದುವುದನ್ನು ನಿಲ್ಲಿಸಬಾರದು. ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ಪರೀಕ್ಷೆಗಳನ್ನು ನಿರಂತರವಾಗಿ ಬರೆಯುವುದರಿಂದ ಜ್ಞಾನದ ಜೊತೆಗೆ ಪರೀಕ್ಷೆಯ ಸಮಯ ಪ್ರಜ್ಞೆ ಮೂಡಲಿದೆ.
> –ನಿಶಾಂತ್ ಪಟೇಲ್

## ವಾರ್ಷಿಕ ವಿಶೇಷ ಸಂಚಿಕೆ 'ಚಿಂತನ' ಬಿಡುಗಡೆ



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ಪದವಿ ಪೂರ್ವ ಕಾಲೇಜಿನ ವಾರ್ಷಿಕ ವಿಶೇಷ ಸಂಚಿಕೆ 'ಚಿಂತನ' ಪುಸ್ತಕವನ್ನು ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್.ದಿನೇಶ್ ಬಿಡುಗಡೆ ಮಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಸಿ.ಕೆ. ಅಶೋಕ್‌ಕುಮಾರ್, ಚಿಂತನ ವಾರ್ಷಿಕ ಸಂಚಿಕೆಯ ಸಂಪಾದಕರಾದ ಹಿರಿಯ ಉಪನ್ಯಾಸಕ ರಾಜೇಂದ್ರ ಪ್ರಸಾದ್ ಹೊನ್ನಲಗೆರೆ, ಹೆಚ್.ಆರ್.ಪರಮೇಶ್, ಸಂಚಿಕೆ ಸದಸ್ಯರಾದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾದ ಮನೋಜ್‌ಕುಮಾರ್, ಮನೋಹರ್, ಇಂಟಿಗ್ರೇಟೆಡ್ ವಿಭಾಗದ ಸಂಚಾಲಕಿ ರಶ್ಮಿ ಉಪಸ್ಥಿತರಿದ್ದರು.

## ಭಗೀರಥ ಜಯಂತಿ...



ಮೈಸೂರಿನ ಬಿಜೆಪಿ ಕಾರ್ಯಾಲಯದಲ್ಲಿ ಶ್ರೀ ಭಗೀರಥ ಜಯಂತಿಯನ್ನು ಆಚರಿಸಲಾಯಿತು. ಮೈಸೂರು ಪಾಲಿಕೆ ಮಾಜಿ ಸದಸ್ಯ ಜಗದೀಶ್ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿದರು. ಮಾಜಿ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾರಾಜ್, ಪಾಲಿಕೆ ಮಾಜಿ ಸದಸ್ಯರಾದ ಕಮಲಮ್ಮ, ಸೌಭಾಗ್ಯ ಮೂರ್ತಿ, ಚಂದ್ರಕಲಾ, ಮುರುಗೇಶ್, ಕವಿತಾ ಸಿಂಗ್, ಬಿಜೆಪಿ ಮುಖಂಡರಾದ ವೇಲು, ಶಿವಣ್ಣ, ರಾಜು, ಸುರೇಂದ್ರ, ಯೋಗೇಶ್ ಇನ್ನಿತರರು ಉಪಸ್ಥಿತರಿದ್ದರು.

## ಮೀನು ಮಾರಾಟ ಮಳಿಗೆಯಲ್ಲಿ ಬೆಂಕಿ

ಮೈಸೂರು,ಏ.23(ಪಿಎಂ)–ಮೈಸೂರಿನ ವಿಶ್ವೇಶ್ವರನಗರದ ಸ್ಟರ್ಲಿಂಗ್ ಥಿಯೇಟರ್ ರಸ್ತೆಯ ಮೀನು ಮಾರಾಟದ ಸಣ್ಣ ಮಳಿಗೆಯೊಂದರಲ್ಲಿ ಬುಧವಾರ ರಾತ್ರಿ ಅಗ್ನಿ ಅವಘಡ ಸಂಭವಿಸಿದೆ. ಸರಸ್ವತಿಪುರಂ ಅಗ್ನಿಶಾಮಕ ಠಾಣಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದಾರೆ. ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ.

## ಡಾ.ರಾಜ್ ಚಿತ್ರಗೀತೆಗಳ ಕರೋಕೆ ಕಾರ್ಯಕ್ರಮ

ಮೈಸೂರು, ಏ.23(ಜಿಎ)–ಮೈಸೂರಿನ ಎಂ.ಬಿ.ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್ ವತಿಯಿಂದ ಏ.24 ರಂದು ಮಧ್ಯಾಹ್ನ 12ರಿಂದ ರಾತ್ರಿ 8.30 ರವರೆಗೆ ನಗರದ ಪುರಭವನದಲ್ಲಿ ಡಾ. ರಾಜ್‌ಕುಮಾರ್ ಕಂಠ ಸಿರಿಯಲ್ಲಿ ಮೂಡಿ ಬಂದಿರುವ ಡಾ.ರಾಜ್‌ಕುಟುಂಬದವರು ನಟಿಸಿರುವ ಚಿತ್ರ ಗೀತೆಗಳ ಕರೋಕೆ ಗಾಯನ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಎ.ಕಾಂತರಾಜು ಈ ವಿಷಯ ತಿಳಿಸಿ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ವಕೀಲ ಉಮ್ಮತ್ತೂರು ಇಂದುಶೇಖರ್, ಸಮಾಜ ಸೇವಕ ರಘುರಾಂ ವಾಜಪೇಯಿ, ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಈ ವೇಳೆ ಸುಮಾರು 80 ಹಾಡುಗಳನ್ನು ಕರೋಕೆ ಮೂಲಕ ಪ್ರಸ್ತುತಪಡಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಶ್ರೀಧರ್ ಗುಡ್ಡಪ್ಪ, ಚಂದ್ರು, ಜಯಲಕ್ಷ್ಮಿ, ವಿಜಯಶ್ರೀ, ಚಂದ್ರಶೇಖರ್, ತಾಂಡವಮೂರ್ತಿ ಉಪಸ್ಥಿತರಿದ್ದರು.

## ನಾಳೆ ವಿಶ್ವ ಪುಸ್ತಕ ದಿನಾಚರಣೆ

**ಮೈಸೂರು:** ಅದಮ್ಯ ರಂಗಶಾಲೆಯ ನೇತೃತ್ವದಲ್ಲಿ ವಿ.ಕೆ.ಪಬ್ಲಿಕ್ ಸ್ಕೂಲ್ ಸಹಯೋಗದೊಂದಿಗೆ ಏ.25ರಂದು ಬೆಳಿಗ್ಗೆ 11 ಗಂಟೆಗೆ ವಿಜಯನಗರದ 3ನೇ ಹಂತದಲ್ಲಿನ ಶಾಲೆಯಲ್ಲಿ ನಡೆಯುತ್ತಿರುವ ಬಾಲಂಗೋಚಿ ಮಕ್ಕಳ ಬೇಸಿಗೆ ಶಿಬಿರದಲ್ಲಿ 'ವಿಶ್ವ ಪುಸ್ತಕ ದಿನಾಚರಣೆ ಹಾಗೂ ಮಕ್ಕಳಿಗೆ ಸಾಹಿತ್ಯ ಪುಸ್ತಕಗಳ ಉಚಿತ ವಿತರಣಾ ಸಮಾರಂಭ' ಹಮ್ಮಿಕೊಳ್ಳಲಾಗಿದೆ. ಸಮಾರಂಭವನ್ನು ಹಿರಿಯ ಲೇಖಕಿ ಯಶೋಧ ರಾಮಕೃಷ್ಣ ಉದ್ಘಾಟಿಸಲಿದ್ದು, ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಹಾಗೂ ಸಾಹಿತಿ ಟಿ.ಸತೀಶ್ ಜವರೇಗೌಡ ಅಧ್ಯಕ್ಷತೆ ವಹಿಸುವರು.

## ಅಭಿನಂದನೆ...



ಮೈಸೂರು ನಗರ ಜೆಡಿಎಸ್ ಅಧ್ಯಕ್ಷರಾಗಿ ನೇಮಕಗೊಂಡ ಎಸ್‌ಬಿಎಂ ಮಂಜು ಹಾಗೂ ಚಾಮರಾಜ ಕ್ಷೇತ್ರದ ಜೆಡಿಎಸ್ ಅಧ್ಯಕ್ಷರಾಗಿ ನೇಮಕಗೊಂಡ ಚಂದ್ರಹಾಸ್ ಅವರನ್ನು ಮುಖಂಡರಾದ ದೇವೇಗೌಡ, ಬೋರಪ್ಪ, ಚಂದ್ರಶೇಖರ್, ಮಹೇಶ್, ಸ್ವಾಮಿಗೌಡ, ರಮೇಶ್, ಪ್ರಕಾಶ್, ಸತೀಶ್, ಕೃಷ್ಣೇಗೌಡ, ದೀಪಕ್‌ಗೌಡ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.

## ಶ್ರೀ ಕನಕ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷರಾಗಿ ನಾಡನಹಳ್ಳಿ ರವಿ ಆಯ್ಕೆ



ಮೈಸೂರು, ಏ.23–ಇಲ್ಲಿನ ಆಲನಹಳ್ಳಿ ಬಡಾವಣೆಯ ಗಿರಿದರ್ಶಿನಿ ಬಡಾವಣೆಯಲ್ಲಿನ ಶ್ರೀ ಕನಕ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷರಾಗಿ ನಾಡನಹಳ್ಳಿ ರವಿ ಆಯ್ಕೆಯಾದರು.

ಇದೇ ವೇಳೆ ಉಪಾಧ್ಯಕ್ಷರಾಗಿ ರಾಜ ಎಸ್, ಖಜಾಂಚಿಯಾಗಿ ಗೋಪಾಲ್ ರಾಜು ಅವರು ಅವಿರೋಧವಾಗಿ ಆಯ್ಕೆಯಾದರು. ಅಲ್ಲದೇ ನಿರ್ದೇಶಕರಾಗಿ ಮಾಯಪ್ಪ ಎಂಡಿ, ಬೈರೇಗೌಡ, ಜಿಎಂ. ರಾಜೇಗೌಡ, ಕೆಎಸ್.ರಾಮಲಿಂಗು, ನಂಜುಂಡಸ್ವಾಮಿ ಎಚ್.ಎಂ, ಕುಸುಮ ಎಸ್.ಜಿ ಅವರನ್ನು ಆಯ್ಕೆ ಮಾಡಲಾಯಿತು.

ಈ ವೇಳೆ ನೂತನ ಅಧ್ಯಕ್ಷರಾದ ನಾಡನಹಳ್ಳಿ ರವಿ ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆಯಂದೇ ಸಹಕಾರ ಸಂಘದ ಅಧ್ಯಕ್ಷರಾಗಿ ನೇಮಕಗೊಂಡಿರುವುದು ನನ್ನ ಪುಣ್ಯವಾಗಿದೆ. ಎಂದರು. ಗೋಪಾಲರಾಜು, ನಂಜುಂಡಸ್ವಾಮಿ, ರಾಮೇಗೌಡ, ರಾಜೀವ್, ರಾಜಣ್ಣ ಮತ್ತಿತರರು ಉಪಸ್ಥಿತರಿದ್ದರು.

## ಉಮೇರಾ ಭಾನುಗೆ 536 ಅಂಕ



**ಮೈಸೂರು:** ಇಲ್ಲಿನ ಮೇಸೋ ಪ್ರೌಢಶಾಲೆಯ ವಿದ್ಯಾರ್ಥಿ ಉಮೇರಾ ಭಾನು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 536 ಅಂಕ ಗಳಿಸಿ ತೇರ್ಗಡೆ ಹೊಂದಿದ್ದಾಳೆ. ಉರ್ದು–113, ಇಂಗ್ಲಿಷ್–94, ಕನ್ನಡ–96, ಗಣಿತ–68, ವಿಜ್ಞಾನ–69, ಸಮಾಜ ವಿಜ್ಞಾನ–96

## ಕಾಂಗ್ರೆಸ್‌ಗೆ ನೇಮಕ



**ಮೈಸೂರು:** ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಕಾರ್ಯದರ್ಶಿಯಾಗಿ ಮೈಸೂರು ರಾಜೀವ್‌ನಗರ 2ನೇ ಹಂತದ ನಿವಾಸಿ ಮೊಹಮ್ಮದ್ ಸಬೀರ್ ಅವರನ್ನು ನೇಮಕ ಮಾಡಲಾಗಿದೆ.

## ಫೇಸ್‌ಬುಕ್ ಹೂಡಿಕೆ ಜಾಹೀರಾತಿನಿಂದ 21.50 ಲಕ್ಷ ಕಳೆದುಕೊಂಡ ಗೃಹಿಣಿ

ಮೈಸೂರು, ಏ.23(ಜಿಎ)–ಫೇಸ್ ಬುಕ್‌ನಲ್ಲಿ ಬಂದ ಹೂಡಿಕೆ ಜಾಹೀರಾತನ್ನು ನಂಬಿ ಗೃಹಿಣಿಯೊಬ್ಬರು 21.50 ಲಕ್ಷ ರೂ. ಕಳೆದುಕೊಂಡಿರುವ ಪ್ರಕರಣ ಸೈಬರ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಮೈಸೂರಿನ ಗಂಗೋತ್ರಿ ಬಡಾವಣೆಯ 52 ವರ್ಷದ ಗೃಹಿಣಿಯೊಬ್ಬರು ಮಾ.13 ರಂದು ಫೇಸ್‌ಬುಕ್‌ನಲ್ಲಿ ಹೂಡಿಕೆ ಜಾಹಿರಾತು ನೋಡಿ ನೋಂದಣಿ ಮಾಡಿದ್ದಾರೆ. ನಂತರ ಅವರಿಗೆ ರಘುನಂದನ್‌ರಾವ್ ಎಂಬ ವ್ಯಕ್ತಿ ಕರೆ ಮಾಡಿ ಸೋಷಿಯಲ್ ವೆಂಚರ್ ಕ್ಯಾಪಿಟಲಿಸ್ಟ್ ಕಂಪನಿ ಬಗ್ಗೆ ಮಾಹಿತಿ ನೀಡಿ ಮೊದಲು ಪಿಲ್ಲಾಲ ಮರ್ರಿ ಬಾಲ ಎಂಬುವರ ಯುಪಿಐ ಐಡಿಗೆ 17,144ರೂ. ಮಾಡಿ ನಂತರ ಜಮೆ ಮಾಡಿಸಿ, ನಂತರ ಒಂದು ಲಿಂಕ್‌ನಿಂದ ಟ್ರೇಡಿಂಗ್ ಖಾತೆ ತೆರೆಸಿರುತ್ತಾನೆ. ನಂತರ ಮತ್ತೊಂದು ನಂಬರ್‌ನಿಂದ ಅಶ್ವಿನ್‌ಕುಮಾರ್ ಎಂಬ ವ್ಯಕ್ತಿ ಕರೆ ಮಾಡಿ ತಾನೂ ಸೋಷಿಯಲ್ ವೆಂಚರ್ ಕ್ಯಾಪಿಟಲಿಸ್ಟ್ ಕಂಪನಿ ಸಲಹೆಗಾರ ಎಂದೇಳಿ ಗೋಲ್ಡ್, ಸಿಲ್ವರ್ ಮತ್ತು ವಿವಿಧ ಕರೆನ್ಸಿ, ಕ್ರೂಡ್ ಆಯಿಲ್‌ನ ಇಂಟರ್ ನ್ಯಾಷನಲ್ ಮಾರ್ಕೆಟ್‌ನಲ್ಲಿ ಕಂಪನಿ ಹೂಡಿಕೆ ಮಾಡುವುದಾಗಿ ತಿಳಿಸಿ, ವಿವಿಧ ಖಾತೆ ಸಂಖ್ಯೆಗಳಿಗೆ ಮಾ.20ರಿಂದ ಏ.15 ರವರೆಗೆ 21,50 ಲಕ್ಷ ಹಣ ಕಳೆದು ಕೊಂಡಿದ್ದಾರೆ. ಅಂತಿಮವಾಗಿ ತಮ್ಮ ಲಾಭಾಂಶ ಹಣ ಪಡೆದುಕೊಳ್ಳಲು ಶೇ.15 ಟ್ಯಾಕ್ಸ್ ಪಾವತಿಸುವಂತೆ ತಿಳಿಸಿದಾಗ ಅನುಮಾನ ಮೂಡಿ ಸೈಬರ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

## ಎಸ್‌ಎಸ್‌ಎಲ್‌ಸಿ ಪರೀಕ್ಷೆ: ವಿದ್ಯಾಮಿತ್ರ ಅಕಾಡೆಮಿಗೆ ಶೇ.100ರಷ್ಟು ಫಲಿತಾಂಶ



ಮೈಸೂರಿನ ವಿದ್ಯಾಮಿತ್ರ ಅಕಾಡೆಮಿ ಫಾರ್ ಎಕ್ಸ್‌ಲೆನ್ಸ್ ಶಾಲೆಯು ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದುಕೊಂಡಿದೆ. ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳು ಪ್ರಥಮ ಮತ್ತು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

## ಎಸ್‌ಎಸ್‌ಎಲ್‌ಸಿ: ಬಿಟಿಎಲ್ ವಿದ್ಯಾವಾಹಿನಿ ಶಾಲೆಗೆ ಅತ್ಯುತ್ತಮ ಫಲಿತಾಂಶ



ತನುಶ್ರೀ, ವರ್ಷಿಣಿ, ವಿಸ್ಮಯ, ಫಾಥೂ ರೆಹಮಾನ್, ಭೂಮಿಕಾ, ವರ್ಷಿಣಿ ಬಿ., ಲಾವಣ್ಯ, ರಚಿತಾ ಎಂ., ದೀಕ್ಷಾ ಎಂ.



ಫೌಜಿಯಾ, ಕವನ್ ಶೆಟ್ಟಿ, ಆಯೇಷಾ, ಜೋಯಾ ಫಾತಿಮಾ

ಮೈಸೂರು: ಬಿಟಿಎಲ್ ವಿದ್ಯಾವಾಹಿನಿ ಶಾಲೆಯ ವಿದ್ಯಾರ್ಥಿಗಳು 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದು, ಸಂಸ್ಥೆಗೆ ಹೆಮ್ಮೆಯನ್ನು ತಂದಿದ್ದಾರೆ.

ಈ ಸಾಲಿನ ಟಾಪರ್ ಆಗಿ ತನುಶ್ರೀ ಪಿ. 625ರಲ್ಲಿ 612 ಅಂಕಗಳು (97.92%) ಗಳಿಸಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ವರ್ಷಿಣಿ.ಎಂ 585/625 (93.60%), ವಿಸ್ಮಯಾ.ವಿ 581/625 (92.96%), ಮೊಹಮ್ಮದ್ ಫತ್ತೇಹ್ ಉರ್ ರಹ್ಮಾನ್ 580/625 (92.80%), ಭೂಮಿಕಾ.ಎಸ್ 578/625 (92.48%), ವರ್ಷಿಣಿ.ಬಿ 542/625 (86.72%), ಲಾವಣ್ಯ .ಎಲ್ 539/625 (86.24%), ರಿಚಿತಾ .ಎಂ 537/625 (85.92%), ದೀಕ್ಷಾ .ಎಂ 535/625 (85.60%), ಫೌಝಿಯಾ 530/625 (84.80%), ಕವನ್ ಶೆಟ್ಟಿ ಆರ್. 527/625 (84.32%), ಆಯೇಷಾ ಸಿದ್ದೀಖಾ 517/625 (82.72%) ಹಾಗೂ ಜೋಯಾ ಫಾತಿಮಾ 500/625 (80%) ಅಂಕ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಆಡಳಿತ ಮಂಡಳಿ, ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ ಹಾಗೂ ಸಂಬಂಧಿ ವೃಂದದವರು ಹರ್ಷ ವ್ಯಕ್ತಪಡಿಸಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದ್ದಾರೆ. ವಿದ್ಯಾರ್ಥಿಗಳ ಶ್ರಮ, ಪೋಷಕರ ಸಹಕಾರ ಹಾಗೂ ಶಿಕ್ಷಕರ ಮಾರ್ಗದರ್ಶನದಿಂದ ಈ ಸಾಧನೆ ಸಾಧ್ಯವಾಗಿದೆ ಎಂದರು.

# ದೇಶ – ವಿದೇಶ

## ವಾದ ಮಂಡಿಸಿದ ವೀಡಿಯೊ ಹಂಚಿಕೊಂಡ ಕೇಜ್ರಿವಾಲ್‌ಗೆ ನೋಟಿಸ್

**ನವದೆಹಲಿ:** ನ್ಯಾಯಾಲಯದ ವಿಚಾರಣೆಯ ವೀಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡ ಹಿನ್ನೆಲೆಯಲ್ಲಿ ದೆಹಲಿ ಹೈಕೋರ್ಟ್, ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ನೋಟಿಸ್ ಜಾರಿ ಮಾಡಿದೆ.



ಹೊಸ ಅಬಕಾರಿ ನೀತಿಯಲ್ಲಿ ಅಕ್ರಮ ಆರೋಪ ಪ್ರಕರಣದಲ್ಲಿ ಕೇಜ್ರಿವಾಲ್ ಅವರು ವೈಯಕ್ತಿಕವಾಗಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ವಾದ ಮಂಡಿಸಿದ್ದರು. ಬಳಿಕ ತಾವು ವಾದ ಮಾಡಿದ ವೀಡಿಯೊ ಅನ್ನು ಸಾಮಾಜಿಕ ಮಾಧ್ಯಮ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಹೀಗೆ ನ್ಯಾಯಾಲಯದ ವಿಚಾರಣೆ ವೀಡಿಯೊಗಳನ್ನು ಹರಡುವುದು ನ್ಯಾಯಾಂಗದ ಗೌರವ ಮತ್ತು ಮಾನವನ್ನು ಕುಂಠಿತಗೊಳಿಸುತ್ತದೆ ಎಂದು ಹೈಕೋರ್ಟ್ ಅಭಿಪ್ರಾಯಿಸಿ, ಇಂತಹ ವಿಷಯಗಳನ್ನು ತಕ್ಷಣ ತೆಗೆದುಹಾಕುವಂತೆ ಆದೇಶಿಸಿದೆ. ನ್ಯಾಯಮೂರ್ತಿ ಸ್ವರ್ಣಾ ಕಾಂತಾ ಶರ್ಮಾ ಅವರು ಕೋರ್ಟ್‌ನಲ್ಲಿ ನಡೆದ ವಿಚಾರಣೆ ವೀಡಿಯೊಗಳನ್ನು ತೆಗೆದುಹಾಕುವಂತೆ ಫೇಸ್‌ಬುಕ್, ಗೂಗಲ್, ಎಕ್ಸ್ ಸೇರಿದಂತೆ ಸಾಮಾಜಿಕ ಮಾಧ್ಯಮ ಮಧ್ಯಸ್ಥರಿಗೆ ಮತ್ತು ಸರ್ಚ್ ಎಂಜಿನ್‌ಗಳಿಗೆ ನಿರ್ದೇಶಿಸಿದ್ದಾರೆ. ಪತ್ರಕರ್ತ ರವೀಶ್‌ಕುಮಾರ್ ಸೇರಿದಂತೆ ವೀಡಿಯೊ ಅಪ್‌ಲೋಡ್ ಮಾಡಿದ ಎಲ್ಲರಿಗೂ ನೋಟಿಸ್ ಜಾರಿ ಮಾಡಲಾಗಿದೆ. ವೀಡಿಯೊದಲ್ಲಿ ಕೇಜ್ರಿವಾಲ್ ಅವರು ನ್ಯಾಯಮೂರ್ತಿ ಸ್ವರ್ಣಾ ಅವರ ಮುಂದೆ ವಾದಿಸುತ್ತಿರುವುದು ಕಂಡುಬಂದಿದೆ

## ಒಂದೇ ಬಾರಿ 18 ಹಲ್ಲುಗಳಿಗೆ ಶಸ್ತ್ರಚಿಕಿತ್ಸೆ; ಮಗು ಸಾವು

**ಕಝಾಕಿಸ್ತಾನ:** ದಂತ ವೈದ್ಯರ ಎಡವಟ್ಟಿನಿಂದ ನಾಲ್ಕು ವರ್ಷದ ಅಮಾಯಕ ಮಗು ಜೀವ ಕಳೆದುಕೊಂಡ ಘಟನೆ ಕಝಾಕಿಸ್ತಾನದಲ್ಲಿ ನಡೆದಿದೆ ಎಂದು ವರದಿಯಾಗಿದೆ.




ಒಂದು ಹಲ್ಲಿನ ಶಸ್ತ್ರಚಿಕಿತ್ಸೆ ನಡೆಸುವಾಗಲೇ ಸಾಕಷ್ಟು ಜಾಗ್ರತೆ ವಹಿಸಲಾಗುತ್ತದೆ. ಆದರೆ ದಂತ ವೈದ್ಯನೊಬ್ಬ, ನಾಲ್ಕು ವರ್ಷದ ಬಾಲಕಿಗೆ ಒಂದೇ ಬಾರಿಗೆ 18 ಹಲ್ಲುಗಳಿಗೆ ಶಸ್ತ್ರ ಚಿಕಿತ್ಸೆಗೆ ಮುಂದಾಗಿ ಮಗುವಿನ ಬಲಿ ಪಡೆದಿದ್ದಾನೆ. ಶಸ್ತ್ರಚಿಕಿತ್ಸೆ ನಂತರ ಮಗು ಎಚ್ಚರಗೊಳ್ಳದಿದ್ದಾಗ ಸಿಪಿಆರ್ ಮಾಡಿದ್ದಾರೆ. ಆದರೂ ಆಕೆ ಬದುಕುಳಿಯಲಿಲ್ಲ. ಶಸ್ತ್ರಚಿಕಿತ್ಸೆಗೆ ಮುನ್ನ ಅಧಿಕ ಪ್ರಮಾಣದ ಅನಸ್ತೇಶಿಯಾ ನೀಡಿದ್ದರಿಂದ ಮಗು ಸಾವನ್ನಪ್ಪಿದೆಯೋ ಅಥವಾ ಒಂದೇ ಬಾರಿ 18 ಹಲ್ಲುಗಳಿಗೆ ಶಸ್ತ್ರಚಿಕಿತ್ಸೆ ನಡೆಸಿದ್ದರಿಂದ ನೋವು ತಾಳಲಾರದೆ ಉಸಿರು ನಿಲ್ಲಿಸಿತೋ ಎಂಬುದು ತನಿಖೆಯಲ್ಲಿ ತಿಳಿಯಬೇಕಿದೆ. ಮಕ್ಕಳ ಹಲ್ಲುಗಳಿಗೆ ಚಿಕಿತ್ಸೆ ಕೊಡಿಸುವಾಗ ತುಂಬಾ ಎಚ್ಚರಿಕೆಯಿಂದಿರಬೇಕು. ವೈದ್ಯರು ತುಂಬಾ ನಿಗಾ ವಹಿಸಬೇಕು.

## ಮಗು ಜೊತೆ ಆಟವಾಡಿದ ಕೋತಿ!

**ಉತ್ತರ ಪ್ರದೇಶ:** ಛಾವಣಿ ಮೂಲಕ ಮನೆಯೊಳಗೆ ಪ್ರವೇಶಿಸಿದ ಕೋತಿಯೊಂದು ಮೂರು ತಿಂಗಳ ಮಗುವನ್ನು ಸುಮಾರು 2 ಗಂಟೆಗಳ ಕಾಲ ತನ್ನ ವಶದಲ್ಲಿರಿಸಿಕೊಂಡು ಆತಂಕ ಸೃಷ್ಟಿಸಿದ ಘಟನೆ ಉತ್ತರ ಪ್ರದೇಶದ ಮುಜಫರ್‌ನಗರ ಜಿಲ್ಲೆಯಲ್ಲಿ ನಡೆದಿದೆ.



ಮನೆಯವರು ಶಿಶುವನ್ನು ಕೋಣೆಯೊಳಗೆ ಮಲಗಿಸಿ ಕೆಲಸವನ್ನು ಮಾಡುತ್ತಿದ್ದರು. ಮಧ್ಯಾಹ್ನ 2 ಗಂಟೆ ಸುಮಾರಿಗೆ ಹೆಣ್ಣು ಮಂಗವೊಂದು ಛಾವಣಿ ಮೂಲಕ ಮನೆಯೊಳಗೆ ಪ್ರವೇಶಿಸಿ, ಸದ್ದಿಲ್ಲದೇ ಮಗುವಿನ ಪಕ್ಕದಲ್ಲಿ ಕುಳಿತು ಅದರೊಂದಿಗೆ ಆಟವಾಡಲು ಪ್ರಾರಂಭಿಸಿದೆ. ಕೆಲಹೊತ್ತಿನ ಬಳಿಕ ಮಗುವಿನ ತಾಯಿ ಕೋಣೆಯೊಳಗೆ ಪ್ರವೇಶಿಸಿದಾಗ ಮಗುವಿನ ಪಕ್ಕದಲ್ಲಿ ಕೋತಿ ಇರುವುದನ್ನು ಕಂಡು ಗಾಬರಿಯಿಂದ ಜೋರಾಗಿ ಕಿರುಚಲಾರಂಭಿಸಿದ್ದಾರೆ. ಇದರಿಂದ ಕುಟುಂಬಸ್ಥರು ಮತ್ತು ನೆರೆಹೊರೆಯವರು ಓಡಿಬಂದು, ಕೋತಿ ಓಡಿಸಲು ಎಲ್ಲಾ ರೀತಿಯ ಕಸರತ್ತು ನಡೆಸಿದ್ದಾರೆ. ಆದರೆ ಕೋತಿ ಮಗುವಿನ ಹತ್ತಿರ ಯಾರಾದರೂ ಬಂದರೆ ಆಕ್ರಮಣಕ್ಕೆ ಮುಂದಾಗಿದೆ. ಬಳಿಕ ಪ್ರಾಣಿ ರಕ್ಷಕ ಸನ್ನಿ ಚೋಪ್ರಾ ತಮ್ಮ ತಂಡದೊಂದಿಗೆ ಸ್ಥಳಕ್ಕೆ ದಾವಿಸಿ, ಕೋತಿಗೆ ಆಹಾರದ ಆಮಿಷ ಒಡ್ಡುವ ಪ್ರಯತ್ನ ಮಾಡಿದರು. ಆದರೂ ಕೋತಿ ಬಗ್ಗಲಿಲ್ಲ. ನಂತರ ರಕ್ಷಣಾ ಸಿಬ್ಬಂದಿ, ಕೋತಿಯ ಗಮನ ಬೇರೆಡೆ ಸೆಳೆಯಲು ಮೊಬೈಲ್‌ನಲ್ಲಿ ವನ್ಯಜೀವಿಗಳ ವೀಡಿಯೊ ಪ್ಲೇ ಮಾಡಿದರು. ಕೋತಿ ಆ ವೀಡಿಯೊಗಳ ಮೇಲೆ ಕೇಂದ್ರೀಕರಿಸುತ್ತಿದ್ದಂತೆ, ರಕ್ಷಣಾ ಸಿಬ್ಬಂದಿ ಮಗುವನ್ನು ಎಚ್ಚರಿಕೆಯಿಂದ ರಕ್ಷಿಸಿದರು.

## ಭಾರತ, ಚೀನಾ ವಲಸಿಗರ ವಿರುದ್ಧ ನಾಲಿಗೆ ಹರಿಬಿಟ್ಟ ಟ್ರಂಪ್

**ವಾಷಿಂಗ್ಟನ್:** ಪಶ್ಚಿಮ ಏಷ್ಯಾ ಸಂಘರ್ಷದಲ್ಲಿ ಶಕ್ತಿ ಕಳೆದುಕೊಂಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತ ಹಾಗೂ ಚೀನಾ ವಲಸಿಗರ ವಿರುದ್ಧ ವಾಗ್ದಾಳಿ ನಡೆಸುವ ವೇಳೆ ನಾಲಿಗೆ ಹರಿಬಿಟ್ಟಿದ್ದಾರೆ.



ಸಾಮಾಜಿಕ ಜಾಲತಾಣವಾದ ಟ್ರೂತ್ ಸೋಷಿಯಲ್ ಖಾತೆಯಲ್ಲಿ ರೇಡಿಯೋ ನಿರೂಪಕ ಮೈಕೆಲ್ ಸ್ಯಾವೇಜ್ ಬರೆದ ವಿವಾದಾತ್ಮಕ ಪತ್ರವನ್ನು ಹಂಚಿಕೊಳ್ಳುವ ಮೂಲಕ ಹೊಸ ಚರ್ಚೆಗೆ ನಾಂದಿ ಹಾಡಿರುವ ಟ್ರಂಪ್, ಜನ್ಮಸಿದ್ಧ ಪೌರತ್ವದ ನಿಯಮವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಅಮೆರಿಕನ್ನರ ಉದ್ಯೋಗಗಳನ್ನು ಭಾರತೀಯರು ಮತ್ತು ಚೀನಿಯರು ಕಬಳಿಸುತ್ತಿದ್ದಾರೆ. ಐಟಿ ಕ್ಷೇತ್ರದಲ್ಲಿ ಕೆಲಸ ಮಾಡುವ ಭಾರತೀಯ ಮತ್ತು ಚೀನೀಯರು 'ಗ್ಯಾಂಗ್‌ಸ್ಟರ್ಸ್ ವಿತ್ ಲ್ಯಾಪ್‌ಟಾಪ್'. ಅವರು ಅಮೆರಿಕದ ತಂತ್ರಜ್ಞಾನ ವ್ಯವಸ್ಥೆಯನ್ನು ಲೂಟಿ ಮಾಡುತ್ತಿದ್ದಾರೆ ಎಂದು ಟ್ರಂಪ್ ದೂರಿದ್ದಾರೆ. ಭಾರತ ಮತ್ತು ಚೀನಾದಂತಹ ದೇಶಗಳಿಂದ ಜನರು ಪ್ರವಾಸಿ ವೀಸಾದಲ್ಲಿ ಅಮೆರಿಕಕ್ಕೆ ಬಂದು, ಇಲ್ಲಿ ಮಗುವಿಗೆ ಜನ್ಮ ನೀಡಿ, ಮಗುವಿಗೆ ಜನ್ಮಸಿದ್ಧವಾಗಿ ಸಿಗುವ ಅಮೆರಿಕದ ಪೌರತ್ವವನ್ನು ಪಡೆಯುತ್ತಿದ್ದಾರೆ. ಒಮ್ಮೆ ಮಗುವಿಗೆ ಪೌರತ್ವ ಸಿಕ್ಕರೆ, ನಂತರ ಆ ಮಗುವಿನ ಮೂಲಕ ಇಡೀ ಕುಟುಂಬವನ್ನೇ ಅಮೆರಿಕಕ್ಕೆ ಕರೆಸಿಕೊಳ್ಳುತ್ತಾರೆ. ಇದು 'ಆಂಕರ್ ಬೇಬಿ' ಸಮಸ್ಯೆ ಎಂದು ಟೀಕಿಸಿದ್ದಾರೆ.

## ಟ್ರಕ್ ಬ್ರೇಕ್ ಫೇಲ್ ಆಗಿ ಸರಣಿ ಅಪಘಾತ; 11 ಮಂದಿ ದುರ್ಮರಣ

**ಉತ್ತರ ಪ್ರದೇಶ:** ಟ್ರಕ್‌ನ ಬ್ರೇಕ್ ಫೇಲ್ ಆದ ಪರಿಣಾಮ ಸರಣಿ ಅಪಘಾತ ಸಂಭವಿಸಿ, 11 ಮಂದಿ ಸಾವನ್ನಪ್ಪಿರುವ ಘಟನೆ ಮಿರ್ಜಾಪುರದ ಬಳಿ ಬುಧವಾರ ರಾತ್ರಿ ಸಂಭವಿಸಿದೆ. ಈ ಘಟನೆ ಮಿರ್ಜಾಪುರ್–ರೇವಾ ರಾಷ್ಟ್ರೀಯ ಹೆದ್ದಾರಿ 135ರ ಧರ್ಮಾಗಂಜ್‌ನ ಬೈಸೋದಾ ಹಿಲ್ ಬಳಿ ರಾತ್ರಿ 9 ಗಂಟೆ ಸುಮಾರಿಗೆ ನಡೆದಿದ್ದು, ಟ್ರಕ್‌ನ ಬ್ರೇಕ್ ಫೇಲ್ ಆಗಿ ಅದು ಅಡ್ಡಾದಿಡ್ಡಿ ಚಲಿಸಿದ್ದು ಈ ದುರಂತಕ್ಕೆ ಕಾರಣ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.



ಮಿರ್ಜಾಪುರ್ ಕಡೆಗೆ ಚಲಿಸುತ್ತಿದ್ದ ಟ್ರಕ್, ಬ್ರೇಕ್ ಫೇಲ್ ಆಗಿ ಮುಂದೆ ಹೋಗುತ್ತಿದ್ದ ಬೊಲೆರೊ ಹಾಗೂ ಆಲ್ಟೋ ಕಾರಿಗೆ ಡಿಕ್ಕಿ ಹೊಡೆದಿದೆ. ಆದರೂ ಟ್ರಕ್ ನಿಲ್ಲದೆ, ಆ ಎರಡೂ ಕಾರುಗಳೊಂದಿಗೆ ಇನ್ನೊಂದು ಟ್ರಕ್‌ಗೆ ಗುದ್ದಿದೆ. ಇದರಿಂದ ಅಕ್ಕಪಕ್ಕ ಬರುತ್ತಿದ್ದ ಇನ್ನೂ ಕೆಲವು ವಾಹನಗಳಿಗೆ ಹಾನಿಯಾಗಿದೆ. ಭಾರೀ ವೇಗದಲ್ಲಿದ್ದ ಟ್ರಕ್ ಡಿಕ್ಕಿಯಾಗಿದ್ದರಿಂದ ಬೊಲೆರೋ ಕಾರಿಗೆ ತಕ್ಷಣವೇ ಬೆಂಕಿ ಹೊತ್ತಿಕೊಂಡು ಮಕ್ಕಳು ಸೇರಿದಂತೆ ಏಳು ಜನ ಸಜೀವ ದಹನವಾಗಿದ್ದಾರೆ. ಜೊತೆಗೆ ಆಲ್ಟೋ ಕಾರಿನಲ್ಲಿದ್ದ 4 ಜನರೂ ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದು ಅವರನ್ನು ಮಿರ್ಜಾಪುರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ಕುರಿತು ವಿಸ್ತೃತ ತನಿಖೆ ನಡೆಸುವುದಾಗಿ ಎಸ್‌ಪಿ ಅಪರ್ಣಾ ಕೌಶಿಕ್ ತಿಳಿಸಿದ್ದಾರೆ. ಈ ಘಟನೆ ಬಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಘಾತ ವ್ಯಕ್ತಪಡಿಸಿದ್ದಾರೆ.

### ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಪ್ರಕಟ

# 8ನೇ ಸ್ಥಾನಕ್ಕೆ ಕುಸಿದ ಕೊಡಗು ಜಿಲ್ಲೆ

**ಕಳೆದ ಬಾರಿ 5ನೇ ಸ್ಥಾನ ಪಡೆದಿದ್ದ ಜಿಲ್ಲೆ** | **2966 ಬಾಲಕಿಯರು ತೇರ್ಗಡೆ** | **2776 ಬಾಲಕರು ತೇರ್ಗಡೆ**

ಮಡಿಕೇರಿ, ಏ.23– ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಪ್ರಕಟವಾಗಿದ್ದು ಕೊಡಗು ಜಿಲ್ಲೆ ಶೇ.96.70 ಫಲಿತಾಂಶ ಪಡೆದು ರಾಜ್ಯದಲ್ಲಿ 8ನೇ ಸ್ಥಾನ ಪಡೆದಿದೆ. ಕಳೆದ ಬಾರಿ 82.21 ಶೇಖಡವಾರು ಅಂಕಗಳನ್ನು ಗಳಿಸುವ ಮೂಲಕ ರಾಜ್ಯದಲ್ಲಿ 5ನೇ ಸ್ಥಾನ ಪಡೆದಿತ್ತು.

ಜಿಲ್ಲೆಯಲ್ಲಿ ಒಟ್ಟು 5943 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದು, ಈ ಪೈಕಿ 5742 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.96.70 ಫಲಿತಾಂಶ ದೊರಕಿದೆ. 2966 ಬಾಲಕಿಯರು ಮತ್ತು 2776 ಬಾಲಕರು ತೇರ್ಗಡೆಯಾಗಿದ್ದಾರೆ.



ಜಿಲ್ಲೆಯಲ್ಲಿ ಒಟ್ಟು 84 ಪ್ರೌಢ ಶಾಲೆಗಳು ಶೇ.100 ಫಲಿತಾಂಶ ದಾಖಲಿಸಿಕೊಂಡಿವೆ.

ಮಡಿಕೇರಿ ಸಂತ ಜೋಸೆಫರ ಶಾಲೆಯ ಲೆನ್ಸಿ ದೇಚಮ್ಮ ಟಿ.ಟಿ. 621 ಮತ್ತು ಕೊಡಗರ ಹಳ್ಳಿಯ ಶಾಂತಿನಿಕೇತನ ಪ್ರೌಢ ಶಾಲೆಯ ಕೆ.ಐ.ಸಿಂಚನ ಅವರು 621 ಅಂಕಗಳನ್ನು ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ವಿರಾಜಪೇಟೆ ಸೆಂಟ್‌ಆನ್ಸ್ ಶಾಲೆಯ ಡೀನ್ ಸಾಲ್ವೊ ಡಿಸೋಜಾ 620 ಅಂಕದೊಂದಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಸೋಮವಾರಪೇಟೆಯ ವಿಶ್ವ ಮಾನವ ಕುವೆಂಪು ಶಾಲೆಯ ಶಿವಾನಿ ಶಾರದ ಮಣಿ, ವಿರಾಜಪೇಟೆ ಶ್ರೀ ಕಾವೇರಿ ಹೈಸ್ಕೂಲ್ ಯು.ಎಸ್. ಶ್ರೀವತ್ಸ, ಗೋಣಿಕೊಪ್ಪ ಕಳತ್ಮಾಡುವಿನ ಲಯನ್ಸ್ ಹೈಸ್ಕೂಲ್ ಎನ್.ಟಿ. ಸಿದ್ದಾಂತ್ ಕಾವೇರಪ್ಪ ಅವರುಗಳು ತಲಾ 619 ಅಂಕಗಳನ್ನು ಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ನಾಸಿಕ್‌ನಲ್ಲಿ ಲವ್‌ಜಿಹಾದ್: ಮಡಿಕೇರಿಯಲ್ಲಿ ಪ್ರತಿಭಟನೆ

ಮಡಿಕೇರಿ,ಏ.23– ದೇಶದ ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ಮತಾಂತರ ಮತ್ತು ಇತ್ತೀಚೆಗೆ ಮಹಾರಾಷ್ಟ್ರದ ನಾಸಿಕನ ಟಿಸಿಎಸ್ ಕಾರ್ಪೋರೇಟ್ ಸಂಸ್ಥೆಯಲ್ಲಿ ಕೇಳಿ ಬಂದಿರುವ ಲವ್‌ಜಿಹಾದ್ ಪ್ರಕರಣವನ್ನು ಖಂಡಿಸಿ ಹಿಂದೂ ಜಾಗರಣ ವೇದಿಕೆ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಹಿಂದೂ ಸಂಘಟನೆ ಕಾರ್ಯಕರ್ತರು ಮತ್ತು ಮುಖಂಡರು ಮತಾಂತರ, ಲವ್ ಜಿಹಾದ್, ಕಾರ್ಪೋರೇಟ್ ಜಿಹಾದ್, ಲ್ಯಾಂಡ್ ಜಿಹಾದ್, ಗೋಹತ್ಯೆ ವಿರುದ್ಧ ಆಕ್ರೋಷ ವ್ಯಕ್ತಪಡಿಸಿದರು.

ಇಂತಹ ಘಟನೆಗಳ ಹಿಂದೆ ವಿದೇಶಿ ಹಣಕಾಸಿನ ವ್ಯವಸ್ಥಿತ ತಂತ್ರಗಾರಿಕೆ ಇದ್ದು, ದೇಶದ ಭದ್ರತೆ ಮತ್ತು ಜನಸಂಖ್ಯೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಸಂವಿಧಾನ ಬಾಹಿರವಾಗಿರುವ ಇಂತಹ ಘಟನೆಗಳನ್ನು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಕೆಲವು ಜಿಮ್‌ಗಳಲ್ಲಿ ಹಿಂದೂ ಹೆಣ್ಣು ಮಕ್ಕಳಿಗೆ ತರಬೇತಿ ನೀಡುವ ನೆಪದಲ್ಲಿ ಲೈಂಗಿಕ ಕಿರುಕುಳ ನೀಡಲಾಗುತ್ತಿದೆ. ಕೆಲವು ಘಟನೆಗಳನ್ನು ವಿಡಿಯೋ ಚಿತ್ರೀಕರಿಸಿ ಮತಾಂತರ, ಗೋಮಾಂಸ ಸೇವನೆ ಸಹಿತ ಭಯೋತ್ಪಾದಕ ಕೃತ್ಯಗಳಿಗೂ ಹಿಂದೂ ಹೆಣ್ಣು ಮಕ್ಕಳನ್ನು ಬಳಸಿಕೊಳ್ಳುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿರುವುದು.

ಕಳೆದ ಕೆಲವು ವರ್ಷಗಳಲ್ಲಿ ಕಾಣೆಯಾಗಿರುವ ಲಕ್ಷಕ್ಕೂ ಅಧಿಕ ಹಿಂದೂ ಹೆಣ್ಣು ಮಕ್ಕಳು ಇಂದಿಗೂ ಪತ್ತೆಯಾಗದ ಘಟನೆಗಳು ಇದೀಗ ಬೆಳಕಿಗೆ ಬರುತ್ತಿದೆ. ಇವುಗಳ ಹಿಂದೆ ಮಾನವ ಕಳ್ಳ ಸಾಗಾಣಿಕೆ, ಭಯೋತ್ಪಾದನಾ ಕೃತ್ಯಗಳ ನೇರ ಸಂಬಂಧವೂ ಇದೆ. ಸರಕಾರಗಳು ಇಂತಹ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿ ಇವುಗಳನ್ನು ಉನ್ನತ ಮಟ್ಟದ ತನಿಖೆಗೆ ಒಪ್ಪಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಬಳಿಕ ಪ್ರತಿಭಟನೆಯ ಮನವಿ ಪತ್ರವನ್ನು ಜಿಲ್ಲಾಡಳಿತ ಮೂಲಕ ಸೂಕ್ತ ಕ್ರಮಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಸಲ್ಲಿಸಲಾಯಿತು.

ಈ ಸಂದರ್ಭ ಜಿಪಂ ಮಾಜಿ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ಮದಿಯೊಕ್ಕಡ ರಮೇಶ್, ವಿನಯ್, ಚೇತನ್, ಗಣೇಶ್ ರೈ, ಸತ್ಯ ಕರ್ಕೆರ, ಬಿ.ಕೆ.ಜಗದೀಶ್, ಮನು ಮಂಜುನಾಥ್, ಡೀನ್ ಬೋಪಣ್ಣ ಇದ್ದರು.

## ಕೊಡವ ಕೌಟುಂಬಿಕ ಹಗ್ಗ–ಜಗ್ಗಾಟ ಪಂದ್ಯಾವಳಿಗೆ ಚಾಲನೆ



ಮಡಿಕೇರಿಯಲ್ಲಿ ಚೀಯಕಪೂವಂಡ ಕುಟುಂಬಸ್ಥರ ವತಿಯಿಂದ ಏರ್ಪಡಿಸಲಾಗಿರುವ 5ನೇ ವರ್ಷದ ಕೊಡವ ಕೌಟುಂಬಿಕ ಹಗ್ಗಜಗ್ಗಾಟ(ಕೇರ್ ಬಲಿ ನಮ್ಮೆ) ಪಂದ್ಯಾವಳಿಯನ್ನು ಶಾಸಕ ಎ.ಎಸ್.ಪೊನ್ನಣ್ಣ ಉದ್ಘಾಟಿಸಿದರು. ರಾಜ್ಯ ಕ್ರೀಡಾ ಪ್ರಾಧಿಕಾರ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ ಇತರರಿದ್ದರು.

### ವಿದೇಶಿ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ

# ಕುಟ್ಟದ ದೇವಿ ವಿಲ್ಲಾ ಹೋಂ ಸ್ಟೇ ಪರವಾನಗಿ ರದ್ದು

ಮಡಿಕೇರಿ,ಏ.23– ವಿದೇಶಿ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎನ್ನಲಾದ ಆರೋಪದ ಹಿನ್ನೆಲೆಯಲ್ಲಿ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹೋಬಳಿಯ ಕುಟ್ಟ ಗ್ರಾಮದ ದೇವಿ ವಿಲ್ಲಾ ಹೋಂ ಸ್ಟೇ ಪರವಾನಗಿಯನ್ನು ಜಿಲ್ಲಾಡಳಿತ ರದ್ದುಗೊಳಿಸಿ ಆದೇಶ ಹೊರಡಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಹೋಂ ಸ್ಟೇ ಮಾಲೀಕ ಸೇರಿದಂತೆ ಇಬ್ಬರು ಬಂಧನಕ್ಕೆ ಒಳಗಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿಗಳು ಈ ಆದೇಶ ಹೊರಡಿಸಿದ್ದಾರೆ.

ಕುಟ್ಟ ಗ್ರಾಮದ ಪಿ.ಎ.ಪೊನ್ನಪ್ಪ ಎಂಬುವರಿಗೆ ಸೇರಿದ ದೇವಿ ವಿಲ್ಲಾ ಹೋಂ ಸ್ಟೇ ನಡೆಸಲು 2024ರ ಜನವರಿ 15 ರಂದು ಪ್ರವಾಸೋದ್ಯಮ ಇಲಾಖೆಯಿಂದ ಪರವಾನಗಿ ನೀಡಲಾಗಿತ್ತು. ಏ.12ರಂದು ಹೋಂ ಸ್ಟೇನಲ್ಲಿ ವಿದೇಶಿ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವುದರಿಂದ ಕುಟ್ಟ ಪೊಲೀಸರು ಸ್ಟೇ ಮಾಲೀಕ ಹಾಗೂ ನೌಕರನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಮಾತ್ರವಲ್ಲದೇ ಹೋಂ ಸ್ಟೇ ಪರವಾನಗಿ ರದ್ದುಗೊಳಿಸುವಂತೆ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ಶಿಫಾರಸ್ಸು ಮಾಡಿದ್ದರು. ಈ ಹಿನ್ನೆಲೆಯಲ್ಲಿ ಸಮಿತಿ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿ ಸೋಮಶೇಖರ್ ಅವರು ಪರವಾನಗಿ ರದ್ದು ಮಾಡಿ ಆದೇಶ ಹೊರಡಿಸಿದ್ದಾರೆ.



## ಕ್ಷೇಮಾಭಿವೃದ್ಧಿ ನಿಧಿಗೆ 50ಸಾವಿರ ಕೊಡುಗೆ

**ಮಡಿಕೇರಿ:** ಪತ್ರಕರ್ತರ ಯೋಗ ಕ್ಷೇಮಕ್ಕಾಗಿ ಕೊಡಗು ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿ ನಿಧಿಗೆ ಕೊಡಗು ಪತ್ರಿಕಾ ಭವನ ಟ್ರಸ್ಟ್‌ನಿಂದ 50 ಸಾವಿರ ರೂ.ಗಳನ್ನು ನೀಡಲಾಯಿತು. ಈ ಮೊತ್ತವನ್ನು ಕ್ಷೇಮಾಭಿವೃದ್ಧಿ ನಿಧಿಯು ನಿರಖು ಠೇವಣಿಯಾಗಿಟ್ಟು ಅದರಿಂದ ಬರುವ ಬಡ್ಡಿ ಹಣವನ್ನು ಪತ್ರಕರ್ತರ ಅನಾರೋಗ್ಯದ ಚಿಕಿತ್ಸೆಗಾಗಿ ನೀಡುವಂತೆ ಕ್ಷೇಮಾಭಿವೃದ್ಧಿ ನಿಧಿ ಸಮಿತಿಗೆ ತಿಳಿಸಲಾಯಿತು. ರೂ.50 ಸಾವಿರದ ಚೆಕ್‌ನ್ನು ಕೊಡಗು ಪತ್ರಿಕಾ ಭವನ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಎಂ.ಪಿ.ಕೇಶವಕಾಮತ್ ಅವರು ಕ್ಷೇಮಾಭಿವೃದ್ಧಿ ಅಧ್ಯಕ್ಷ ಜಿ.ವಿ ರವಿಕುಮಾರ್ ಅವರಿಗೆ ಗುರುವಾರ ಹಸ್ತಾಂತರಿಸಿದರು. ಟ್ರಸ್ಟ್‌ನ ಕೋಶಾಧಿಕಾರಿ ಕೆ.ತಿಮ್ಮಪ್ಪ, ಸ್ಥಾಪಕ ಟ್ರಸ್ಟಿ ಟಿ.ಪಿ.ರಮೇಶ್, ಪ್ರವೀಣ್.ಟಿ.ಜೆ ಇದ್ದರು.

### ಜೋಸೆಫ್ ವಾಜ್ ನಿಧನ



ವಿರಾಜಪೇಟೆ, ಏ.23– ಪಟ್ಟಣದ ಅರಸು ನಗರ ನಿವಾಸಿ ಜೋಸೆಫ್ ವಾಜ್(74) ಬುಧವಾರ ಮಧ್ಯರಾತ್ರಿ ನಿಧನರಾಗಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರೀಯೆ ಬುದವಾರ ಸಂತ ಅನ್ನಮ್ಮ ದೇವಾಲಯದ ಆವರಣದಲ್ಲಿ ನಡೆಯಿತು.

## ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಕೆ.ಆರ್.ಪೇಟೆ, ಏ.23– ತಾಲೂಕಿನ ವಿಠಲಾಪುರ, ಅಂಬಿಗರಹಳ್ಳಿ, ಸಂಗಾಪುರ, ಯಗಚಗುಪ್ಪೆ, ಆಲಂಬಾಡಿ ಗ್ರಾಮಗಳಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಅಡಿ ನಿರ್ಮಿಸುತ್ತಿರುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ. ಮಂಜು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಸರ್ಕಾರವು ಗ್ಯಾರಂಟಿ ಯೋಜನೆಗಳಿಗೆ ಅನುದಾನ ನೀಡುತ್ತಿದ್ದು, ಮೂಲ ಸೌಲಭ್ಯಗಳಿಗೆ ಅಗತ್ಯ ಅನುದಾನ ನೀಡುತ್ತಿಲ್ಲ. ಕನಿಷ್ಠ ಪಕ್ಷ ಜನರ ಆರೋಗ್ಯದ ಹಿತದೃಷ್ಟಿಯಿಂದ ಸರ್ಕಾರಿ ಆಸ್ಪತ್ರೆಗಳಿಗೆ ಮಾತ್ರೆಗಳು ಮತ್ತು ಇಂಜಕ್ಷನ್‌ಗಳನ್ನು ಪೂರೈಸದೇ ಜನರ ಜೀವದೊಂದಿಗೆ ಚೆಲ್ಲಾಟವಾಡುತ್ತಿದೆ. ಕಳೆದ ತಿಂಗಳು ಇಡೀ ರಾಜ್ಯಾದ್ಯಂತ ಸರ್ಕಾರಿ ಆಸ್ಪತ್ರೆ ವೈದ್ಯರು ಇದರ ವಿರುದ್ಧ ಹೋರಾಟ ಮಾಡಿದ್ದಾರೆ. ಸರ್ಕಾರ ಇನ್ನಾದರೂ ಗ್ಯಾರಂಟಿ ಯೋಜನೆಗಳ ಜೊತೆಗೆ ಸರ್ಕಾರಿ ಆಸ್ಪತ್ರೆಗಳಿಗೆ ಬರುವ ಬಡ ಜನರಿಗೆ ಔಷಧ ವಿತರಿಸಲು ಕ್ರಮ ಕೈಗೊಳ್ಳಬೇಕು. ಆಸ್ಪತ್ರೆಗೆ ಸಿಬ್ಬಂದಿ ನೇಮಿಸಬೇಕು. ಇಲ್ಲದಿದ್ದರೆ ಜನರೇ ಸರ್ಕಾರದ ವಿರುದ್ಧ ಧಂಗೆ ಏಳುವ ಕಾಲ ದೂರವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ವಿಪಕ್ಷಗಳ ಶಾಸಕರಿಗೆ ನೀಡುತ್ತಿರುವ ಅನುದಾನವನ್ನು ಅಗತ್ಯ ಇರುವ ಗ್ರಾಮಗಳ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ ಆದ್ಯತೆ ಮೇರೆಗೆ ನೀಡುವ ಮೂಲಕ ಮತ ನೀಡಿದ ಜನರ ಋಣ ತೀರಿಸುತ್ತಿದ್ದೇನೆ. ಆದರ ನನಗೆ ಈ ಅನುದಾನ ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ನೀಡಿದಂತಾಗಿದೆ. ಹಾಗಾಗಿ 2028ಕ್ಕೆ ನಮ್ಮ ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರುವುದು ಶೇ.100ರಷ್ಟು ಸತ್ಯ, ಆಗ ಮತ್ತೊಮ್ಮೆ ನನಗೆ ಆಶೀರ್ವಾದ ಮಾಡಿದರೆ ತಾಲೂಕಿನ ಎಲ್ಲಾ ಜನರ ಸಮಗ್ರ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಕೆ.ಬಿ.ನಾಗೇಶ್, ಜೆಡಿಎಸ್ ಮುಖಂಡರಾದ ಪುಟ್ಟಸ್ವಾಮೀಗೌಡ, ಎಲ್‌ಐಸಿ ಶಿವಪ್ಪ, ತಾಪಂ ಮಾಜಿ ಸದಸ್ಯ ಹೆಳವೇಗೌಡ, ಕರಿಶೆಟ್ಟಿ, ವೆಂಕಟೇಶ್, ಚನ್ನಕೃಷ್ಣ, ತಾಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರೇಖಾ, ಅಕ್ಕಿಹೆಬ್ಬಾಳು ಹೋಬಳಿ ಜೆಡಿಎಸ್ ಅಧ್ಯಕ್ಷ ಬಸವಲಿಂಗಪ್ಪ, ಕಾಂತರಾಜು ಸೇರಿದಂತೆ ಇತರರಿದ್ದರು.

# ಎಸ್‌ಎಸ್‌ಎಲ್‌ಸಿ: ಮಂಡ್ಯ ಜಿಲ್ಲೆಗೆ ಐದನೇ ಸ್ಥಾನ

**• ಶೇ.97.45ರಷ್ಟು ಫಲಿತಾಂಶ • ಕಳೆದ ಬಾರಿ 12ನೇ ಸ್ಥಾನದಲ್ಲಿದ್ದ ಜಿಲ್ಲೆ**


ಮಂಡ್ಯ ಏ.23– ಪ್ರಸ್ತುತ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಗೊಂಡಿದ್ದು, ಸಕ್ಕರೆ ನಗರಿ ಮಂಡ್ಯ ಜಿಲ್ಲೆ ಶೇ.97.45 ರಷ್ಟು ಫಲಿತಾಂಶದೊಂದಿಗೆ ರಾಜ್ಯಕ್ಕೆ 5ನೇ ಸ್ಥಾನ ಪಡೆದಿದೆ.

ಪರೀಕ್ಷೆಗೆ ಹಾಜರಾಗಿದ್ದ 18,815 ವಿದ್ಯಾರ್ಥಿಗಳ ಪೈಕಿ 18,275 ಮಂದಿ ಉತ್ತೀರ್ಣರಾಗಿದ್ದಾರೆ. ಕಳೆದ ವರ್ಷ ಶೇ.69.27 ರಷ್ಟು ಫಲಿತಾಂಶದೊಂದಿಗೆ 12ನೇ ಸ್ಥಾನದಲ್ಲಿದ್ದ ಮಂಡ್ಯ ಈ ಬಾರಿ 7 ಸ್ಥಾನ ಜಿಗಿತಗೊಂಡು 5ನೇ ಸ್ಥಾನ ಅಲಂಕರಿಸುವ ಮೂಲಕ ಫಲಿತಾಂಶ ಪ್ರಮಾಣದಲ್ಲೂ ಉತ್ತಮ ಸುಧಾರಣೆ ಕಂಡಿದೆ. ಹಿಂದಿನ ವರ್ಷಕ್ಕಿಂತ ಶೇ.28.18ರಷ್ಟು ಹೆಚ್ಚುವರಿ ಫಲಿತಾಂಶ ಬಂದಿದೆ. ರಾಜ್ಯದ ಸರಾಸರಿ ಫಲಿತಾಂಶಕ್ಕಿಂತಲೂ (ಶೇ.94.1) ಹೆಚ್ಚಿನ ಫಲಿತಾಂಶ ಗಳಿಸಿದ್ದು, ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಜಿಲ್ಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗರಿಷ್ಠ ಫಲಿತಾಂಶ ದಾಖಲಿಸಿದೆ.

2025–26ನೇ ಶೈಕ್ಷಣಿಕ ಸಾಲಿನಲ್ಲಿ 18,815 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಪುನರಾವರ್ತಿತ ಮತ್ತು ಖಾಸಗಿ ಅಭ್ಯರ್ಥಿಗಳು ಸೇರಿದಂತೆ 20,669 ಮಂದಿ ಪರೀಕ್ಷೆ ತೆಗೆದುಕೊಂಡಿದ್ದರು. ಅದರಂತೆ ಹೊಸದಾಗಿ ಪರೀಕ್ಷೆ ತೆಗೆದುಕೊಂಡಿದ್ದ 18,815 ವಿದ್ಯಾರ್ಥಿಗಳಲ್ಲಿ 18,275 (ಶೇ. 97.45) ಮಂದಿ ಉತ್ತೀರ್ಣರಾಗಿದ್ದು, 540 ಮಂದಿ ಅನುತ್ತೀರ್ಣರಾಗಿದ್ದಾರೆ. ಎಂದಿನಂತೆ ಬಾಲಕಿಯರು ಮತ್ತು ಗ್ರಾಮೀಣ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಿದ್ದಾರೆ. ಕನ್ನಡ ಮಾಧ್ಯಮಕ್ಕಿಂತ (ಶೇ.95.34) ಆಂಗ್ಲ ಮಾಧ್ಯಮಕ್ಕೆ (ಶೇ.99.04) ಹೆಚ್ಚಿನ ಫಲಿತಾಂಶ ಬಂದಿದೆ.

2023ರಲ್ಲಿ ಶೇ.96.04ರಷ್ಟು ಫಲಿತಾಂಶದೊಂದಿಗೆ ಟಾಪ್–2 ಸ್ಥಾನದಲ್ಲಿದ್ದ ಮಂಡ್ಯ ಜಿಲ್ಲೆ 2024ರಲ್ಲಿ ಶೇ.74.54ರಷ್ಟು ಫಲಿತಾಂಶ ಪಡೆದು 19ನೇ ಸ್ಥಾನಕ್ಕೆ ದೂಡಲ್ಪಟ್ಟಿತ್ತು. ಈ ಸ್ಥಾನಪಲ್ಲಟದ ಬಗ್ಗೆ ಜಿಲ್ಲೆಯ ಶೈಕ್ಷಣಿಕ ವಲಯದಲ್ಲಿ ಗಂಭೀರ ಚರ್ಚೆ ನಡೆದಿತ್ತು. ಆದರೆ, 2025ರಲ್ಲಿ ಶೇ.69.27 ರಷ್ಟು ಫಲಿತಾಂಶದೊಂದಿಗೆ ಹಿಂದಿನ ವರ್ಷಕ್ಕಿಂತ ಶೇ.5.27ರಷ್ಟು ಕಡಿಮೆ ಫಲಿತಾಂಶ ಪಡೆದಿದ್ದರೂ ಸಹ ಜಿಲ್ಲಾವಾರು ಪಟ್ಟಿಯಲ್ಲಿ 12ನೇ ಸ್ಥಾನ ಗಳಿಸಿ, 7 ಸ್ಥಾನಗಳು ಮೇಲಕ್ಕೇರಿದ್ದು ಸಮಾಧಾನ ತಂದಿತ್ತು. ಆದರೆ, ಈ ವರ್ಷ ಫಲಿತಾಂಶವನ್ನು ಗರಿಷ್ಠ ಮಟ್ಟಕ್ಕೆ ಸುಧಾರಿಸಿಕೊಂಡು, ಜಿಲ್ಲಾವಾರು ಪಟ್ಟಿಯಲ್ಲಿ ಟಾಪ್ 5 ಜಿಲ್ಲೆಗಳೊಳಗೆ ಸ್ಥಾನ ಪಡೆದು ಪ್ರಗತಿ ಸಾಧಿಸಿದೆ. ರಾಜ್ಯದ ಫಲಿತಾಂಶಕ್ಕೆ (ಶೇ.94.1) ಹೋಲಿಸಿದರೆ ಮಂಡ್ಯ ಜಿಲ್ಲೆಯ ಫಲಿತಾಂಶವೇ ಹೆಚ್ಚಾಗಿದೆ. ಇದರಿಂದ ಜಿಲ್ಲೆಯ ಅಧಿಕಾರಿಗಳು ಹಾಗೂ ಶಿಕ್ಷಕ ಸಮುದಾಯದಲ್ಲಿ ಹರ್ಷ ಮೂಡಿದೆ.

### ಫಲಿತಾಂಶಕ್ಕೆ ಸಚಿವ ಎನ್.ಚಲುವರಾಯಸ್ವಾಮಿ ಹರ್ಷ



**ಮಂಡ್ಯ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮಂಡ್ಯ ಜಿಲ್ಲೆ ರಾಜ್ಯಕ್ಕೆ 5ನೇ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿರುವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಉತ್ತಮ ಫಲಿತಾಂಶಕ್ಕೆ ಕಾರಣರಾದ ಜಿಲ್ಲೆಯ ವಿದ್ಯಾರ್ಥಿಗಳು, ಶಿಕ್ಷಕರು, ಜಿಲ್ಲಾಧಿಕಾರಿ ಡಾ.ಕುಮಾರ್, ಜಿಪಂ ಸಿಇಓ ಕೆ.ಆರ್. ನಂದಿನಿ ಸೇರಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಚಿವರು, ಮಂಡ್ಯ ಜಿಲ್ಲೆ ಈ ಬಾರಿ ಶೇ.97.45ರಷ್ಟು ಫಲಿತಾಂಶದೊಂದಿಗೆ ರಾಜ್ಯಕ್ಕೆ 5ನೇ ಸ್ಥಾನ ಪಡೆದಿರುವುದು ಹೆಮ್ಮೆಯ ಸಂಗತಿ. ಇದು ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕರ ಬದ್ಧತೆ, ಪೋಷಕರ ಸಹಕಾರ ಮತ್ತು ಅಧಿಕಾರಿಗಳ ಸಮರ್ಥ ನಿರ್ವಹಣೆಯ ಫಲ. ಉಡುಪಿ, ಮಂಗಳೂರು ವಿದ್ಯಾರ್ಥಿಗಳ ಜೊತೆ ಪೈಪೋಟಿ ನೀಡಿರುವುದಕ್ಕೆ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷ 12ನೇ ಸ್ಥಾನದಲ್ಲಿದ್ದ ನಮ್ಮ ಜಿಲ್ಲೆ ಈ ಬಾರಿ 5ನೇ ಸ್ಥಾನಕ್ಕೇರಿರುವುದು ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಪ್ರಗತಿಗೆ ಸಾಕ್ಷಿ ಎಂದು ತಿಳಿಸಿದ್ದಾರೆ. ಮುಂದಿನ ವರ್ಷ ನಾವು ಮೊದಲ 3 ಸ್ಥಾನಗಳ ಗುರಿ ಹೊಂದಬೇಕು. ಇದಕ್ಕಾಗಿ ಸರ್ಕಾರದಿಂದ ಎಲ್ಲಾ ರೀತಿಯ ನೆರವು ನೀಡಲಾಗುವುದು. ಗ್ರಾಮೀಣ ಮಕ್ಕಳಿಗೆ ವಿಶೇಷ ತರಬೇತಿ, ಮೂಲ ಸೌಕರ್ಯ ಸುಧಾರಣೆ, ಡಿಜಿಟಲ್ ಶಿಕ್ಷಣಕ್ಕೆ ಒತ್ತು ನೀಡಲಾಗುವುದು ಎಂದಿದ್ದಾರೆ. ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೂ ಶುಭವಾಗಲಿ. ಅನುತ್ತೀರ್ಣರಾದ ಮಕ್ಕಳು ಧೃತಿಗೆಡದೆ ಪೂರಕ ಪರೀಕ್ಷೆಗೆ ಸಿದ್ಧರಾಗಿ. ಸೋಲು ಯಶಸ್ಸಿನ ಮೆಟ್ಟಿಲು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ್ದಾರೆ.

ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯಲ್ಲಿ ಶೇ.50ಕ್ಕಿಂತ ಕಡಿಮೆ ಅಂಕ ಪಡೆದ ಮಕ್ಕಳಿಗೆ ಕಲಿಕಾ ಮಿತ್ರ ಎಂಬ ಪುಸ್ತಕ ತಯಾರು ಮಾಡಿ ಜಿಲ್ಲೆಯಾದ್ಯಂತ ವಿಶೇಷ ತರಬೇತಿ ನೀಡಿ ಮಂಡ್ಯ ಜಿಲ್ಲೆ 5ನೇ ಸ್ಥಾನಕ್ಕೆ ಬರಲು ಶ್ರಮಿಸಿದ ಜಿಲ್ಲಾಧಿಕಾರಿ ಡಾ.ಕುಮಾರ್ ಮತ್ತು ಜಿಪಂ ಸಿಇಓ ನಂದಿನಿ ಅವರ ಶ್ರಮ ನಿಜಕ್ಕೂ ಮೆಚ್ಚುವಂತದ್ದು ಎಂದಿದ್ದಾರೆ.

**ಐವರು ಟಾಪರ್:** ಜಿಲ್ಲೆಯ ಐವರು ವಿದ್ಯಾರ್ಥಿಗಳು ರಾಜ್ಯ ಮಟ್ಟದ ಟಾಪರ್‌ಗಳಾಗಿದ್ದಾರೆ. ಮೂವರು ವಿದ್ಯಾರ್ಥಿಗಳು 621 ಅಂಕಗಳನ್ನು ಗಳಿಸುವ ಮೂಲಕ ರಾಜ್ಯ ಮಟ್ಟದಲ್ಲಿ 5ನೇ ಟಾಪರ್‌ಗಳಾಗಿದ್ದು, 620 ಅಂಕಗಳನ್ನು ಪಡೆದಿರುವ ಇಬ್ಬರು ವಿದ್ಯಾರ್ಥಿಗಳು 6ನೇ ಟಾಪರ್‌ಗಳಾಗಿ ಹೊರ ಹೊಮ್ಮಿದ್ದಾರೆ.

**ಫಲಿತಾಂಶದ ವಿವರ:** ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಈ ವರ್ಷ ಮಂಡ್ಯ ಉತ್ತರ ವಲಯವು ಜಿಲ್ಲೆಯಲ್ಲೇ ಪ್ರಥಮ ಸ್ಥಾನ ಪಡೆದು ಅಚ್ಚರಿ ಮೂಡಿಸಿದೆ. ಕಳೆದ ವರ್ಷ 2ನೇ ಸ್ಥಾನದಲ್ಲಿದ್ದ ಮಂಡ್ಯ ಉತ್ತರ ವಲಯವು ಈ ಬಾರಿ ಮೊದಲ ಸ್ಥಾನಕ್ಕೇರಿದೆ. 2025ರಲ್ಲಿ ಮೊದಲ ಸ್ಥಾನದಲ್ಲಿದ್ದ ಮಂಡ್ಯ ದಕ್ಷಿಣ ವಲಯವು ಈ ವರ್ಷ 3ನೇ ಸ್ಥಾನಕ್ಕೆ ದೂಡಲ್ಪಟ್ಟಿದೆ.

ಸತತ 20 ವರ್ಷಗಳ ಕಾಲ ಜಿಲ್ಲೆಯಲ್ಲೇ ಮೊದಲ ಪಡೆಯುತ್ತಾ ಬಂದಿದ್ದ ಮದ್ದೂರು ತಾಲೂಕು ಈ ವರ್ಷ 5ನೇ ಸ್ಥಾನ ಪಡೆದುಕೊಂಡಿದೆ. ಕಳೆದ ವರ್ಷ 6ನೇ ಸ್ಥಾನದಲ್ಲಿದ್ದ ಮದ್ದೂರು ಈ ಬಾರಿ ಒಂದು ಸ್ಥಾನ ಮೇಲಕ್ಕೇರಿದೆ. 2025ರಲ್ಲಿ 5ನೇ ಸ್ಥಾನದಲ್ಲಿದ್ದ ಶ್ರೀರಂಗಪಟ್ಟಣ ಈ ಬಾರಿ 8ನೇ ಸ್ಥಾನಕ್ಕೆ ದೂಡಲ್ಪಟ್ಟಿದೆ.

**ತಾಲೂಕುವಾರು ಫಲಿತಾಂಶ:** ಮಂಡ್ಯ ಉತ್ತರ ಶೇ.98.25, ಮಂಡ್ಯ ದಕ್ಷಿಣ ಶೇ. 97.65, ಕೆ.ಆರ್.ಪೇಟೆ ಶೇ.97.89, ಮದ್ದೂರು ಶೇ. 97.30, ಮಳವಳ್ಳಿ ಶೇ.96.93, ನಾಗಮಂಗಲ ಶೇ.95.98, ಪಾಂಡವಪುರ ಶೇ.97.50, ಶ್ರೀರಂಗಪಟ್ಟಣ ಶೇ.95.41 ಫಲಿತಾಂಶ ಬಂದಿದೆ.

### ಸೇಂಟ್ ಆನ್ಸ್ ಶಾಲೆಗೆ ಶೇ.99 ಫಲಿತಾಂಶ

**ಪಾಲಹಳ್ಳಿ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗ್ರಾಮದ ಸೇಂಟ್ ಆನ್ಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಶೇ.99ರಷ್ಟು ಫಲಿತಾಂಶ ಬಂದಿದೆ. ವಿದ್ಯಾರ್ಥಿಗಳಾದ ಗಗನ್ (605) ಪ್ರಥಮ, ಪೂರ್ವಿಕ.ಜಿ (598) ದ್ವಿತೀಯ, ಚೈತ್ರ (580)ತೃತೀಯ, ಚಿನ್ಮಯ್ (579) ಶಾಲೆಗೆ ನಾಲ್ಕನೇ ಸ್ಥಾನ ಪಡೆದು ಕೀರ್ತಿ ತಂದಿದ್ದಾರೆ.

### ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಪ್ರಕಟ

# 30ನೇ ಸ್ಥಾನಕ್ಕೆ ಕುಸಿದ ಚಾಮರಾಜನಗರ ಜಿಲ್ಲೆ

**ಕಳೆದ ಬಾರಿ 27ನೇ ಸ್ಥಾನ ಪಡೆದಿದ್ದ ಜಿಲ್ಲೆ**

**ಚಾಮರಾಜನಗರ:** ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಗುರುವಾರ ಪ್ರಕಟಗೊಂಡಿದ್ದು, ಚಾ.ನಗರ ಜಿಲ್ಲೆ ಫಲಿತಾಂಶದಲ್ಲಿ ಕಳೆದ ವರ್ಷಕ್ಕಿಂತ ಸುಧಾರಣೆ ಕಂಡಿದ್ದರು ರಾಜ್ಯದ ಜಿಲ್ಲಾವಾರು ಪಟ್ಟಿಯಲ್ಲಿ ಕುಸಿತ ಕಂಡಿದೆ.

ಈ ಬಾರಿ ಜಿಲ್ಲೆಯಲ್ಲಿ 10,544 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 9,424 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ. 91.27ರಷ್ಟು ಫಲಿತಾಂಶವನ್ನು ಪಡೆದಿದೆ. ಈ ಮೂಲಕ ರಾಜ್ಯದ ಗಡಿ ಜಿಲ್ಲೆಗಳಲ್ಲಿ ಒಂದಾಗಿರುವ ಚಾಮರಾಜನಗರವು ಒಟ್ಟಾರೆ ಫಲಿತಾಂಶದಲ್ಲಿ ರಾಜ್ಯದಲ್ಲಿ 30ನೇ ಸ್ಥಾನ ಪಡೆದುಕೊಂಡಿದೆ. 2024–25ನೇ ಸಾಲಿನಲ್ಲಿ 27ನೇ ಸ್ಥಾನದಲ್ಲಿದ್ದ ಜಿಲ್ಲೆ ಈ ಬಾರಿ 3 ಸ್ಥಾನಗಳಷ್ಟು ಕುಸಿತ ಕಂಡಿದೆ.

**ಬಾಲಕಿಯರೇ ಮೇಲುಗೈ:** ಈ ಸಲವೂ ಜಿಲ್ಲೆಯಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಅಲ್ಲದೇ ಬಾಲಕರಿಗಿಂತ ಬಾಲಕಿಯರೇ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ ಬರೆದಿದ್ದರೂ ಎಂಬುದೂ ವಿಶೇಷ. ಶೇ. 94.91ರಷ್ಟು ಬಾಲಕಿಯರು ಉತ್ತೀರ್ಣರಾಗಿದ್ದರೆ. ಶೇ. 87.48ರಷ್ಟು ಬಾಲಕರು ತೇರ್ಗಡೆ ಹೊಂದಿದ್ದಾರೆ. ಜಿಲ್ಲೆಯ ನಗರ ಪ್ರದೇಶಗಳಿಂದ ಶೇ.92.64ರಷ್ಟು ಹಾಗೂ ಗ್ರಾಮೀಣ ಪ್ರದೇಶದ ಶೇ 90.45ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.



ಕೊಳ್ಳೇಗಾಲದ ವಾಸವಿ ಶಾಲೆಯ ರಿಷಿತಾ 623 ಅಂಕ ಪಡೆದು ಚಾಮರಾಜನಗರ ಜಿಲ್ಲೆಗೆ ಟಾಪರ್ ಆಗಿ ಹೊರಹೊಮ್ಮಿದ್ದು ಶಾಲೆಯ ವತಿಯಿಂದ ಅಭಿನಂದಿಸಲಾಯಿತು.

**ಸರ್ಕಾರಿ ಶಾಲೆಗಳಿಗೆ ಶೇ. 89.13 ರಷ್ಟು ಫಲಿತಾಂಶ:** ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 5,133 ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆಗೆ ಹಾಜರಾಗಿದ್ದು, ಇವರ ಪೈಕಿ 4,575 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ. 89.13ರಷ್ಟು ಫಲಿತಾಂಶವನ್ನು ಸರ್ಕಾರಿ ಶಾಲೆಗಳು ಪಡೆದುಕೊಂಡಿವೆ.

ಜಿಲ್ಲೆಯ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 2,611 ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆಗೆ ಹಾಜರಾಗಿದ್ದು, ಇವರ ಪೈಕಿ 2,335 ವಿದ್ಯಾರ್ಥಿಗಳು ತೇರ್ಗಡೆಯಗುವ ಮೂಲಕ ಶೇ. 89.43ರಷ್ಟು ಫಲಿತಾಂಶವನ್ನು ಪಡೆದುಕೊಂಡಿವೆ. ಉಳಿದಂತೆ ಜಿಲ್ಲೆಯ ಅನುದಾನ ರಹಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 2,800 ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆಗೆ ಹಾಜರಾಗಿದ್ದು, ಇವರ ಪೈಕಿ 2,714 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ 96.93ರಷ್ಟು ಫಲಿತಾಂಶವನ್ನು ಪಡೆದುಕೊಂಡಿವೆ.

ಚಾಮರಾಜನಗರ ತಾಲೂಕಿನ 11 ಶಾಲೆ, ಗುಂಡ್ಲುಪೇಟೆ ತಾಲೂಕಿನ 17 ಶಾಲೆ, ಹನೂರು ತಾಲೂಕಿನ 14 ಶಾಲೆ, ಕೊಳ್ಳೇಗಾಲ ತಾಲೂಕಿನ 16 ಶಾಲೆ ಹಾಗೂ ಯಳಂದೂರು ತಾಲೂಕಿನ 2 ಶಾಲೆ ಸೇರಿ ಜಿಲ್ಲೆಯ ಒಟ್ಟು 59 ಶಾಲೆಗಳು ಶೇ. 100 ರಷ್ಟು ಫಲಿತಾಂಶ ಪಡೆದುಕೊಂಡಿದೆ.

**ಕೊಳ್ಳೇಗಾಲಕ್ಕೆ ಹೆಚ್ಚಿನ ಫಲಿತಾಂಶ:** ಜಿಲ್ಲೆಯ ತಾಲೂಕುವಾರು ಫಲಿತಾಂಶದಲ್ಲಿ ಕೊಳ್ಳೇಗಾಲ ತಾಲೂಕಿಗೆ ಶೇ 96.13 ರಷ್ಟು ಫಲಿತಾಂಶದೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದೆ ಉಳಿದಂತೆ ಹನೂರು ಶೇ. 95.98 ರಷ್ಟು ಫಲಿತಾಂಶ ದೊಂದಿಗೆ ಎರಡನೇ ಸ್ಥಾನ, ಗುಂಡ್ಲುಪೇಟೆ ಶೇ. 93.03 ರಷ್ಟು ಫಲಿತಾಂಶದೊಂದಿಗೆ ಮೂರನೇ ಸ್ಥಾನ ಪಡೆದಿದ್ದು, ಯಳಂದರು ಶೇ.92.23 ರಷ್ಟು ಹಾಗೂ ಚಾಮರಾಜನಗರ ಶೇ 84.48ರಷ್ಟು ಫಲಿತಾಂಶ ಪಡೆದು ಕೊನೆಯ ಸ್ಥಾನದಲ್ಲಿವೆ. ಗುಂಡ್ಲು ಪೇಟೆಯ ಆದರ್ಶ ಶಾಲೆಯ ಆರ್. ಪ್ರತಿಭಾ 625ಕ್ಕೆ 618 ಅಂಕ, ಹನೂರಿನ ಸರ್ಕಾರಿ ಪ್ರೌಢಶಾಲೆ ಕೆಂಪಯ್ಯಹಟ್ಟಿ ಶಾಲೆಯ ಶಬರಿ625ಕ್ಕೆ 618 ಅಂಕ ಪಡೆದು ಕೊಂಡಿದ್ದಾರೆ.

# ಜೆಎಸ್‌ಎಸ್ ಸಂಸ್ಥೆಗಳ ಕಟ್ಟಡಗಳಿಗೆ ಭೂಮಿಪೂಜೆ

**ಚಾಮರಾಜನಗರ:** ನಗರದ ಗ್ರಾಮಾಂತರ ಪೊಲೀಸ್ ಠಾಣೆ ಸಮೀಪದಲ್ಲಿ ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್, ನರ್ಸಿಂಗ್ ಶಾಲೆ, ನರ್ಸಿಂಗ್ ಕಾಲೇಜ್, ಅಲೈಡ್ ಹೆಲ್ತ್ ಸೈನ್ಸ್ ಕಾಲೇಜ್ ಮತ್ತು ವಿದ್ಯಾರ್ಥಿನಿಲಯಗಳ ನೂತನ ಕಟ್ಟಡಗಳಿಗೆ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ವಿವಿಧ ಮಠಾಧೀಶರು ಜಿಲ್ಲೆಯ ಶಾಸಕರು, ಅಧಿಕಾರಿಗಳು ಭೂಮಿಪೂಜೆ ನೆರವೇರಿಸಿದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ.ಗಣೇಶಪ್ರಸಾದ್, ಕಾಡಾಧ್ಯಕ್ಷ ಪಿ. ಮರಿಸ್ವಾಮಿ, ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿನೋತ್ ಪ್ರಿಯ, ಜಿಲ್ಲಾಧಿಕಾರಿ ಶ್ರೀರೂಪ, ಜಿಪಂ ಸಿಇಓ ಮೋನಾರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಪಾಲ್ಗೊಂಡಿದರು.


ಈ ಸಂದರ್ಭದಲ್ಲಿ ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಜಿಪಂ ಮಾಜಿ ಸದಸ್ಯರಾದ ಕೆ.ಪಿ. ಸದಾಶಿವಮೂರ್ತಿ, ನವೀನ್ ಕೆರೆಹಳ್ಳಿ, ರತ್ನಮ್ಮ, ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಜೆಎಸ್‌ಎಸ್ ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕ ಶಂಕರಪ್ಪ, ಸ್ಥಾನಿಕ ಅಭಿಯಂತರಾದ ಎಸ್.ಮಹೇಶ್, ಪ್ರಾಂಶುಪಾಲ ಉಮೇಶ್, ವಿನಯ್‌ಕುಮಾರ್, ಅಲೈಡ್ ಹೆಲ್ತ್ ಸೈನ್ಸ್ ವಿಭಾಗದ ಸಂಯೋಜಕ ಶಿವನಾಂಕಾರಪ್ಪ, ಸಾರ್ವಜನಿಕ ಸಂಪರ್ಕ ಅಧಿಕಾರಿ ಆರ್.ಎಂ.ಸ್ವಾಮಿ, ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ.ಕೆ. ರವಿಕುಮಾರ್ ಜೆಎಸ್‌ಎಸ್ ಅಧಿಕಾರಿ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.



## ಕೊಳ್ಳೆಗಾಲ ವಿದ್ಯಾರ್ಥಿಗಳ ಸಾಧನೆ

**623 ಅಂಕ ಗಳಿಸಿದ ವಾಸವಿ ಶಾಲೆಯ ರೀಷಿತಾ ಜಿಲ್ಲಾ ಟಾಪರ್**

**ಸರ್ಕಾರಿ ಆದರ್ಶ ಶಾಲೆ, ಲಯನ್ಸ್ ಶಾಲೆಗೆ ನೂರರಷ್ಟು, ವಾಸವಿ, ಗುರುಮಲ್ಲೇಶ್ವರ ಸಂಸ್ಥೆಗೆ 99ರಷ್ಟು ಫಲಿತಾಂಶ**



ರಿಷಿತಾ



ಸಿಂಚನಾ



ನಿಹಾರಿಕಾ



ತನ್ಮಯಿ



ಚಾಮುಂಡೇಶ್ವರಿ

ಕೊಳ್ಳೇಗಾಲ, ಏ.23– ಪಟ್ಟಣದ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಮೂಲಾಗ್ರ ಸಾಧನೆಗೈದಿದ್ದಾರೆ

ವಾಸವಿ ಶಾಲೆಗೆ ಶೇ 99.13ರ ಫಲಿತಾಂಶ ಸಂದಿದ್ದು ಸಂಸ್ಥೆಯ ರಿಷೀತಾ ಎಂ 625 ಅಂಕಗಳಿಗೆ 623 ಅಂಕಗಳಿಸಿ ಜಿಲ್ಲಾ ಟಾಪರ್ ಆಗಿ ಹಾಗೂ ರಾಜ್ಯದಲ್ಲಿ 3ನೇ ಸ್ಥಾನಗಳಿಸಿ ಹೊರಹೊಮ್ಮಿದ್ದಾರೆ. ಪೊಲೀಸ್ ಇಲಾಖೆಯ ವಾಹನ ಚಾಲಕರಾದ ಮಹೇಶ್ ಮತ್ತು ರೂಪ ದಂಪತಿಗಳ ಪುತ್ರಿಯ ಈ ಸಾಧನೆಗೆ ಸಾಕಷ್ಟು ಪ್ರಶಂಸೆ ವ್ಯಕ್ತವಾಗಿದೆ. ಸಿಂಚನಾ ಸತೀಶ್( 620), ತನ್ಮಯಿ.ಎಸ್ (618) ಸಹಾ ಜಿಲ್ಲಾ ಟಾಪರ್ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಉಳಿದಂತೆ ಸರ್ಕಾರಿ ಆದರ್ಶ ಶಾಲೆಗೆ ಈ ಬಾರಿ ನೂರರಷ್ಟು ಫಲಿತಾಂಶ ಸಂದಿದ್ದು 80 ಮಕ್ಕಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ನಿಹಾರಿಕಾ(620), ನಾಗಗೌತಮ್( 613), ಲಿಖಿತ(610)ಅಂಕಗಳಿಸಿ ಸಾಧನೆಗೈದಿದ್ದಾರೆ ಎಂದು ಮುಖ್ಯಶಿಕ್ಷಕಿ ಕುಮಾರಿ ಪ್ರಿಯದರ್ಶಿನಿ ತಿಳಿಸಿದ್ದಾರೆ. ಅದೇ ರೀತಿಯಲ್ಲಿ ಮಾನಸ ಶಿಕ್ಷಣ ಸಂಸ್ಥೆಯ ನಿಸರ್ಗ ಆಂಗ್ಲ ಮಾಧ್ಯಮ ಪ್ರೌಡಶಾಲೆಗೆ ಶೇಕಡ 99.5ರಷ್ಟು ಫಲಿತಾಂಶ ದೊರೆತಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್ ತಿಳಿಸಿದ್ದಾರೆ.

ಚಾಮುಂಡೇಶ್ವರಿ 625ಕ್ಕೆ 616, ಸಂಜೀವಿನಿ(615), ಹನ್ಸಿಕ ಪಿ.ರಾಜ್ ( 607) , ಸಿಂಚನ ಎಸ್ (603), ಶ್ರವಂತ್ (600), ಪ್ರತಿಕ್ಷ ಪಿ (599,), ವಿಶ್ವಾಸ ಎಂಡಿ(597), ಚಿರಾಗ್(593), ಪ್ರಜ್ಞ ಎನ್ (584), ಪೂರ್ವಿಕ ಜಿ 583 ಅಂಕ ಗಳಿಸಿ ಸಾಧನೆಗೈದಿದ್ದಾರೆ. 106 ವಿದ್ಯಾರ್ಥಿಗಳ ಪೈಕಿ 32 ಮಂದಿ ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ,

ಸಾಧಕ ವಿದ್ಯಾರ್ಥಿಗಳನ್ನು ಸಂಸ್ಥೆಯ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್, ಪ್ರಾಂಶುಪಾಲರಾದ ನಯನ ಕ್ಲಾರಿಬಲ್, ಮುಖ್ಯಶಿಕ್ಷಕ ಶಂಕರ್, ಸಹ ಮುಖ್ಯೋಪಾಧ್ಯಾಯಿನಿ ಗಿರಿಜಾ ಅಭಿನಂದಿಸಿದ್ದಾರೆ.

ಪಟ್ಟಣದ ಲಯನ್ಸ್ ಪ್ರೌಢಶಾಲೆಗೆ 10ನೇ ತರಗತಿ ಪರೀಕ್ಷೆಯಲ್ಲಿ ಶೇಕಡ ನೂರರ ಫಲಿತಾಂಶ ಲಭಿಸಿದ್ದು ಮಕ್ಕಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಮಾದೇಶ್, ಕಾರ್ಯದರ್ಶಿ ವೆಂಕಟೇಶ್, ಖಜಾಂಚಿ ನಾಗರಾಜು ಕೊಂಗರಹಳ್ಳಿ, ಮುಖ್ಯಶಿಕ್ಷಕ ಶ್ರೀಕಾಂತ್ ಅಭಿನಂದಿಸಿದ್ದಾರೆ. ಸುರಭಿ (596) ಅಂಕಗಳಿಸಿ ಪ್ರಥಮ ಸ್ಥಾನಗಳಿಸಿ ಪ್ರಥಮ ಸ್ಥಾನಕ್ಕೆ ಬಾಜನರಾಗಿದ್ದಾರೆ.